## ಶುಕ್ರವಾರ, ೨೨ನೇ ಆಗಸ್ಟ್, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷರಾದ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪ್ರತಿಜ್ಞೆ ಸ್ವೀಕರಿಸಿದ ಸದಸ್ಯರು

ಈ ಮುಂದಿನ ಸದಸ್ಯರು ಪ್ರತಿಜ್ಞೆ ಸ್ವೀಕರಿಸಿದರು

೧. ಶ್ರೀ ಪ್ರಫುಲ್ಲ ಚಂದ್ರಸೇನ್ (ಪಶ್ಚಿಮ ಬಂಗಾಳ : ಸಾಮಾನ್ಯ)

೨. ಗೌರವಾನ್ವಿತ ಪಂಡಿತ ಗೋವಿಂದವಲ್ಲಭ ಪಂತ್ (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ)

### ಕೇಂದ್ರ ಅಧಿಕಾರಗಳ ಸಮಿತಿ ವರದಿ – (ಮುಂದುವರಿದುದು.)

**ಮಾನ್ಯ ಸಭಾಧ್ಯಕ್ಷರು :** ನಾವು ಈಗ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯ ಅನುಬಂಧದಲ್ಲಿರುವ ಪಟ್ಟಿ ೧ರ ಬಾಬುಗಳ ಚರ್ಚೆಗೆ ತೊಡಗೋಣ. ೧ನೇ ಬಾಬನ್ನು ಎತ್ತಿಕೊಳ್ಳೋಣ. ಶ್ರೀ ರಾಮಸ್ವಾಮಿ ಮುದಲಿಯಾರ್, ಶ್ರೀ ವಿ.ಟಿ. ಕೃಷ್ಣಮಾಚಾರಿ, ಶ್ರೀ ಶ್ರೀನಿವಾಸನ್ ಮತ್ತು ಶ್ರೀ ವೆಂಕಟಾಚಾರ್ ಅವರಿಂದ ತಿದ್ದುಪಡಿ ಸೂಚನೆ ಬಂದಿದೆ.

### ಬಾಬು ೧

**ಶ್ರೀ ವಿ.ಟಿ. ಕೃಷ್ಣಮಾಚಾರಿ** (ಜೈಪುರ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಮುಂದಿನಂತೆ ಮಂಡಿಸುತ್ತೇನೆ.

"ಬಾಬು ೧ರಲ್ಲಿ 'ಅದರ' ಎಂಬ ಪದದ ತರುವಾಯದ ಪದಗಳನ್ನೆಲ್ಲ ಬಿಟ್ಟುಬಿಡಬೇಕು."

ಇದಕ್ಕೆ ನಾನು ನೀಡುವ ಕಾರಣವೆಂದರೆ "ಸಾಮಾನ್ಯವಾಗಿ" ಎಂಬುದರಿಂದ ಪ್ರಾರಂಭವಾಗುವ ಪದಗಳು ಅನಗತ್ಯ. ಅವು ವಿವರಣಾತ್ಮಕವಾಗಿವೆ. ಅವುಗಳನ್ನು ಆಸ್ಟ್ರೇಲಿಯಾ ಉಚ್ಚನ್ಯಾಯಾಲಯದ ಒಂದು ತೀರ್ಪಿನಿಂದ ಆಯ್ದುಕೊಳ್ಳಲಾಗಿದೆ ಎಂದು ನಾನು ಊಹಿಸುತ್ತೇನೆ. ಈ ವರ್ಣನಾತ್ಮಕ ಪದಗಳನ್ನು ವಿಷಯಗಳ ಪಟ್ಟಿಗೆ ಸೇರಿಸುವುದು ಅನಗತ್ಯ ಎಂದು ನನ್ನ ಅಭಿಪ್ರಾಯ. ಆದ್ದರಿಂದ ನಾವು ಈ ತಿದ್ದುಪಡಿಯನ್ನು ಆದೇಶ ದಾಖಲೆಯಲ್ಲಿ ಹಾಕಿದ್ದೇವೆ. ಪದಗಳ ಅರ್ಥದ ಬಗ್ಗೆ ನಮ್ಮ ಆಕ್ಷೇಪವಿಲ್ಲ. ಆದರೆ ಪಟ್ಟಿಯಲ್ಲಿ ಇಂಥ ವರ್ಣನಾತ್ಮಕ ವಿವರಣೆ ಇರಬಾರದು.

(ಶ್ರೀಯುತರುಗಳಾದ ಕೆ. ಸಂತಾನಮ್, ನಜಿರುದ್ದೀನ್ ಅಹ್ಮದ್ ಮತ್ತು ಟಿ.ಎ. ರಾಮಲಿಂಗಂ ಚೆಟ್ಟಿಯಾರ್ ಪಟ್ಟಿ ೧ರ ಕ್ರಮಸಂಖ್ಯೆ ೫, ಪಟ್ಟಿ ೪ರ ಕ್ರಮಸಂಖ್ಯೆ ೪ ಮತ್ತು ಪಟ್ಟಿ ೧ರ ಕ್ರಮಸಂಖ್ಯೆ ೬ಕ್ಕೆ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು :** ನನಗೆ ಸೂಚನೆ ಬಂದಿರುವ ಈ ಬಾಬಿಗೆ ಬೇರೆ ಯಾವ ತಿದ್ದುಪಡಿ ಇಲ್ಲ. ಯಾರಾದರೂ ಈಗ ಮಂಡಿಸಲಾಗಿರುವ ತಿದ್ದುಪಡಿಯ ಬಗ್ಗೆ ಮಾತನಾಡಲು ಬಯಸಿದರೆ ಅವರು ಹಾಗೆ ಮಾಡಬಹುದು.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ

ತಿದ್ದುಪಡಿ, ಈಗಾಗಲೇ ಮಂಡಿಸಲಾಗಿರುವ ತಿದ್ದುಪಡಿ ಒಂದೇ ಆಗಿದ್ದು ಪದಗಳು ಮಾತ್ರ ಬೇರೆ. ತಿದ್ದುಪಡಿಯಲ್ಲಿ ಕೈಬಿಡಲು ಪ್ರಸ್ತಾವಿಸಿರುವ ಶಬ್ದಗಳು ಅನಗತ್ಯವಾಗಿವೆ. ಬಾಬು ೧ರಲ್ಲಿರುವ "ರಕ್ಷಣೆ" ಎಂಬ ಅಭಿವ್ಯಕ್ತಿಯು ಸಾಕಷ್ಟು ಸಮಗ್ರವಾಗಿದೆ ಎಂದು ನಾನು ಭಾವಿಸುತ್ತೇನೆ. ವರದಿಗೆ ಲಗತ್ತಿಸಲಾಗಿರುವ ಹಾಗೂ ಭಾರತ ಸರ್ಕಾರ ಅಧಿನಿಯಮಕ್ಕೆ ಲಗತ್ತಿಸಲಾಗಿರುವ ಪಟ್ಟಿಗಳಲ್ಲಿರುವ ಹಲವಾರು ಬಾಬುಗಳಿಂದ ಕಂಡುಬರುವಂತೆ ಇನ್ನೂ ಹೆಚ್ಚಿನ ವರ್ಣನಾತ್ಮಕ ಶಬ್ದಗಳು ಅಗತ್ಯವಿಲ್ಲ. ನಾನು ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ. ಬಾಬು ಸಂ. ೩ "ಕೇಂದ್ರ ಗುಪ್ತದಳ", ಕ್ರಮಸಂಖ್ಯೆ ೬–"ರಕ್ಷಣಾ ಉದ್ದಿಮೆಗಳು", ಕ್ರಮಸಂಖ್ಯೆ ೭ "ನೌಕಾ, ಭೂ ಮತ್ತು ವಾಯುದಳ ಕಾಮಗಾರಿಗಳು". ಇಂಥ ಇನ್ನೂ ಅನೇಕ ಬಾಬುಗಳಿವೆ. ಈ ಬಾಬುಗಳನ್ನು ಬರೀ ಹೆಸರಿನಿಂದ ಸೂಚಿಸಲಾಗಿದೆ. ಇಂಥ ಪ್ರಕರಣಗಳಿಗೆ ಅನ್ವಯವಾಗುವ ಒಂದು ಹೆಸರುವಾಸಿ ತತ್ತ್ವದ ಮೇರೆಗೆ, ಆ ಬಾಬುಗಳನ್ನು ಪರಿಣಾಮಕಾರಿಯಾಗಿಸಲು ಅಗತ್ಯವಿರುವ ಆನುಷಂಗಿಕ ಅಥವಾ ಅನುಗತ ಅಧಿಕಾರಗಳನ್ನು ಈ ಅಭಿವ್ಯಕ್ತಿಗಳ ಮೂಲಕ ಸೂಚಿಸಲಾಗಿದೆ. ಆ ಸ್ವವಿವರಣಾತ್ಮಕ ಅಭಿವ್ಯಕ್ತಿಗಳು ರಹಸ್ಯ ಅಭಿವ್ಯಕ್ತಿಗಳಾಗಿರುತ್ತವೆ. ಆ ವಿಷಯಗಳಿಗೆ ಅಗತ್ಯವಿರುವ ಎಲ್ಲವೂ ಅದರಲ್ಲಿ ಸೂಚಿತವಾಗಿರುತ್ತದೆ. ಇಂಥ ಸನ್ನಿವೇಶದಲ್ಲಿ ಕೈಬಿಡಲು ಉದ್ದೇಶಿಸಲಾಗಿರುವ ಪದವು, ಪಟ್ಟಿಯಲ್ಲಿರುವ ಅಂಥವೇ ಬಾಬುಗಳೊಂದಿಗೆ ಇದನ್ನು ಸೇರಿಸುತ್ತದೆ. ಏಕರೂಪತೆಗಾಗಿ ಹಾಗೂ ಹೆಚ್ಚಿಗೆ ಇರುವುದನ್ನು ತೆಗೆದು ಹಾಕಲು ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಈ ಪಟ್ಟಿಯಲ್ಲಿರುವ ಅಂಶಗಳನ್ನು ವಿವರಿಸುವುದು ವಿಶೇಷ ಸಂಗತಿಯೇನಲ್ಲ. ೧೯೩೫ರ ಭಾರತ ಸರ್ಕಾರ ಅಧಿನಿಯಮದ ಪಟ್ಟಿ ೧ರ ೩೩ನೇ ಬಾಬಿನತ್ತ ಸದನದ ಗಮನವನ್ನು ಸೆಳೆಯಲೆತ್ನಿಸುತ್ತೇನೆ. ಕಾರ್ಪೊರೇಷನ್‌ಗಳು ಕೇಂದ್ರದ ವಿಷಯ. "ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ನಿಗಮಗಳನ್ನು ಒಳಗೊಂಡ ಆದರೆ ಒಕ್ಕೂಟದ ಒಡೆತನ ಅಥವಾ ನಿಯಂತ್ರಣಕ್ಕೊಳಪಟ್ಟ ಕಾರ್ಪೊರೇಷನ್‌ಗಳನ್ನು ಒಳಗೊಳ್ಳದೆ ಟ್ರೇಡಿಂಗ್ ಕಾರ್ಪೊರೇಷನ್‌ಗಳ ನಿಗಮನ, ವಿನಿಮಯನ ಮತ್ತು ಸಮಾಪನ ಇತ್ಯಾದಿ" ಇಲ್ಲಿ ಈ ಭಾಷೆ ಬಳಕೆಯಾಗಿದೆ. "ಕಾರ್ಪೊರೇಷನ್" ಎಂದರೆ ಏನು ಎಂಬುದನ್ನು ಅವರು ಇಲ್ಲಿ ತಿಳಿಸಿದ್ದಾರೆ.

ಇನ್ನು ಕೆಲವು ದೇಶಗಳಲ್ಲಿ 'ಡಿಫೆನ್ಸ್' ಎಂಬುದು ಒಂದು ನಮೂದಾಗಿ ಒಕ್ಕೂಟ ಪಟ್ಟಿಯಲ್ಲಿ ಕಾಣಿಸಿಕೊಂಡಾಗ, ಆ ವಿಷಯ ನ್ಯಾಯಾಲಯದ ಕಟ್ಟೆ ಹತ್ತಿತ್ತು. ಮತಭೇದ ತಲೆದೋರಿ ನ್ಯಾಯಾಲಯಗಳೂ 'ಡಿಫೆನ್ಸ್' ಎಂಬುದಕ್ಕೆ ಅರ್ಥವಿವರಣೆ ನೀಡಬೇಕಾಯಿತು. ಇಲ್ಲಿ ನಾನು ಒಂದು ಪ್ರಕರಣವನ್ನು ವಿವರಿಸುತ್ತೇನೆ. (ಆಸ್ಟ್ರೇಲಿಯನ್ ಬ್ರೆಡ್‌ಕೇಸ್ ೨೧ ಸಿ.ಎಲ್.ಆರ್. ೪೩೩) ಇಲ್ಲಿ ಗ್ರಿಫಿತ್ ಸಿ.ಜೆ. ಹೇಳಿರುವಂತೆ 'ಡಿಫೆನ್ಸ್' ಎಂಬ ಪದವು ಬ್ರಿಟಿಷ್ ಸಂಸ್ಥಾನದ ಸಂಸತ್ತಿನ ಅಧಿಕಾರದ ಮೇರೆಗೆ ಅಥವಾ ಸಾಮ್ರಾಜ್ಯದ ರಾಜಾದೇಶದ ಮೇರೆಗೆ ಮಾಡುವ ಆ ವಿಧದ ಎಲ್ಲ ಕಾರ್ಯಗಳನ್ನು ಒಳಗೊಳ್ಳುತ್ತದೆ. ಇತರ ವಿಷಯಗಳ ಪೈಕಿ, ಅದರಲ್ಲಿ, ಶಾಂತಿ ಸಮಯದಲ್ಲಿ ಮಾಡುವ ಯುದ್ಧಸಿದ್ಧತೆ, ಯುದ್ಧಸಮಯದಲ್ಲಿ ಯುದ್ಧವನ್ನು ಯಶಸ್ವಿಯಾಗಿ ನಡೆಸಿ ವೈರಿಯನ್ನು ಸೋಲಿಸಲು ಕೈಗೊಳ್ಳುವ ಯಾವುದೇ ಅಂಥ ಕೆಲಸ ಸೇರುತ್ತದೆ. ಮಾನ್ಯರೆ, ನ್ಯಾಯಾಲಯದಲ್ಲಿ ಸುದೀರ್ಘ ಚರ್ಚೆಯಾದ ಅನಂತರ ಈ ವಿವರಣೆ ನೀಡಲಾಯಿತು. ಅಥವಾ ಈ ನಿರ್ಧಾರ ಕೈಗೊಳ್ಳಲಾಯಿತು. ನಾವು ಈ ಎಲ್ಲ ಹಂತವನ್ನು ಮತ್ತೆ ಮಾಡಬೇಕೇ? ಈ ಅಂಶಗಳು ಇರುವ ಬಗ್ಗೆ ತಿದ್ದುಪಡಿಯ ಗೌರವಾನ್ವಿತ ಮಂಡನೆಕಾರರಿಗೆ ಆಕ್ಷೇಪವಿಲ್ಲದಿದ್ದರೆ ಅವುಗಳ ಸೇರ್ಪಡೆಗೆ ಅನುಮತಿಸಬಹುದು ಎಂದು ನಾನು ಭಾವಿಸುತ್ತೇನೆ ಮಾನ್ಯರೆ. ಆಕ್ಷೇಪಣೆ ಏನೆಂದರೆ ಹೇಳಿರುವ ರೀತಿ, ಭಾಷೆ ನಯವಾಗಿಲ್ಲ. ಇಲ್ಲಿ ನಾವೇನು ಯಾವುದೇ ಸಾಹಿತ್ಯಕೃತಿಯನ್ನು ಅಧಿನಿಯಮಿಸುತ್ತಿಲ್ಲ. ಇದು ಕಾನೂನು ವಿಷಯವಾಗಿರುವುದರಿಂದ ಹೆಚ್ಚು ನಿರ್ದಿಷ್ಟವಾಗಿದ್ದರೆ ಸಾಕು. ಸಂದೇಹಗಳನ್ನು ತಡೆಗಟ್ಟಲು ಸಾಧ್ಯವಿರುವಷ್ಟು ತಡೆಯೋಣ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಇಲ್ಲಿ ತೆಗೆದು ಹಾಕಲು ಸೂಚಿಸಲಾದ ಪದಗಳ ಸೇರ್ಪಡೆಯನ್ನು ಗೌರವಾನ್ವಿತ ಮಂಡನೆಕಾರರೇ ಮಾನ್ಯಮಾಡಿದ್ದು, ಅವುಗಳನ್ನು ಶ್ರೀ ಅನಂತಶಯನಮ್ ಅಯ್ಯಂಗಾರರೇ ವಿವರಿಸಿದ್ದಾರೆ. ಆ ಕಾರಣಗಳಿಗೆ ನಾನೇನೂ ಸೇರಿಸುವುದಿಲ್ಲ. ಅಂಥ ಯಾವುದೇ ಪ್ರಶ್ನೆಗಳಿಗೆ ಭಿನ್ನ ಭಿನ್ನ ಅಭಿಪ್ರಾಯಗಳನ್ನು ತಳೆದು ನ್ಯಾಯಾಲಯದ ಮೆಟ್ಟಿಲೇರದಿರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಆ ಶಬ್ದಗಳು ಸೂಚಿಸುವ ಅರ್ಥವನ್ನು 'ಡಿಫೆನ್ಸ್' ಎಂಬ ಬಾಬಿನಲ್ಲಿ ಸೇರಿಸುವುದಕ್ಕೆ ನಾವೆಲ್ಲ ಒಪ್ಪಿರುವುದರಿಂದ ಆ ಪದಗಳನ್ನು ಆ ಬಾಬಿನಲ್ಲಿ ಸೇರಿಸುವುದು ಒಳ್ಳೆಯದು. ಗೌರವಾನ್ವಿತ ಮಂಡನೆಕಾರರಿಗೆ ಆಕ್ಷೇಪವಿಲ್ಲದಿದ್ದರೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯ ಮಂಡನೆಕಾರರು ಅದನ್ನು ಹಿಂತೆಗೆದುಗೊಳ್ಳಲು ಇಚ್ಛಿಸುತ್ತಾರೆ. ಅದಕ್ಕೆ ಸದನದ ಅನುಮತಿ ಇದೆಯೇ?

(ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು)

ಒಕ್ಕೂಟ ಶಾಸಕಾಂಗದ ಪಟ್ಟಿ ೧ರ ಬಾಬು ೧ನ್ನು ಅಂಗೀಕರಿಸಲಾಯಿತು.

## ಬಾಬು ೨

**ಮಾನ್ಯ ಸಭಾಧ್ಯಕ್ಷರು** : ಶ್ರೀ ವಿ.ಟಿ. ಕೃಷ್ಣಮಾಚಾರಿಯವರ ಹೆಸರಿನಲ್ಲಿ ಇನ್ನೊಂದು ತಿದ್ದುಪಡಿ ಇದೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ** : ಮಾನ್ಯ ಸಭಾಧ್ಯಕ್ಷರೆ, ಬಾಬು ೨ನ್ನು ಕೈಬಿಡಬೇಕೆಂದು ನಾನು ಮಂಡಿಸುತ್ತೇನೆ. ಕಾರಣವೇನೆಂದರೆ ಕೋರಿಕೆ ತಾತ್ಕಾಲಿಕ ಅರ್ಜನೆ, ಬಾಬು ೪೩ರಲ್ಲಿ ಒಕ್ಕೂಟದ ಉದ್ದೇಶಗಳಿಗಾಗಿ ಸ್ವತ್ತಿನ ಅರ್ಜನೆಯ ವಿಷಯವಿದ್ದು ಬಾಬು ೨ರಲ್ಲಿ ಸೂಚಿಸಿರುವುದನ್ನು ಪೂರ್ಣವಾಗಿ ಒಳಗೊಳ್ಳುತ್ತದೆ. ಇದು ಅನಗತ್ಯವಾದ ಪುನರಾವರ್ತನೆ ಎಂದು ನನಗೆ ತೋರುತ್ತದೆ. ಆದ್ದರಿಂದ ಬಾಬು ೨ನ್ನು ಕೈಬಿಡಲು ನಾನು ಮಂಡಿಸುತ್ತೇನೆ. ಯುದ್ಧ ಸಮಯದಲ್ಲಿ ಬಾಬು ೧, ಅಗತ್ಯವಾಗಿರುವ ಎಲ್ಲಕ್ಕೂ ಆಜ್ಞಾಕೋರಿಕೆಯ ಅಧಿಕಾರವನ್ನು ನೀಡುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಇನ್ನೂ ಕೆಲವು ತಿದ್ದುಪಡಿಗಳಿವೆ.

ಇದು ಇಡೀ ಬಾಬನ್ನು ಕೈಬಿಡುವಂತೆ ಸೂಚಿಸುವ ತಿದ್ದುಪಡಿಯಾಗಿರುವುದರಿಂದ ಇದನ್ನು ಚರ್ಚಿಸುವುದು ಉತ್ತಮವೆನಿಸುತ್ತದೆ. ಏನನ್ನಾದರೂ ಸೇರ್ಪಡೆ ಮಾಡಲು ಅಥವಾ ತೆಗೆದು ಹಾಕಲು ಸೂಚಿಸುವ ಯಾವುದೇ ಬೇರೆ ತಿದ್ದುಪಡಿಗಳನ್ನು ತದನಂತರ ಕೈಗೆತ್ತಿಕೊಳ್ಳಬಹುದು. ಈ ತಿದ್ದುಪಡಿಯ ಬಗ್ಗೆ ಯಾರಾದರೂ ಏನನ್ನಾದರೂ ಹೇಳುವುದಿದೆಯೇ?

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ತಿದ್ದುಪಡಿಯ ಹಿಂದೆ ತುಸು ತಪ್ಪುಕಲ್ಪನೆ ಇದೆ ಎಂದು ನನ್ನ ಭಾವನೆ. ಆಜ್ಞಾಕೋರಿಕೆಯ ಅಧಿಕಾರವನ್ನು ರಕ್ಷಣಾ ಅಧಿಕಾರದಲ್ಲಿ ಸೇರಿಸಬೇಕೆಂದು ಅರ್ಥೈಸಲಾಗಿದೆ. ಇಂಗ್ಲೆಂಡಿನಲ್ಲಿ ಅದು ಚಕ್ರವರ್ತಿಯ ಅಧಿಕಾರ. ಭಾರತದಲ್ಲಿ ಕಳೆದ ಯುದ್ಧದ ಸಮಯದಲ್ಲಿ ಈ ಪ್ರಶ್ನೆ ಉದ್ಭವಿಸಿ, ಕೇಂದ್ರ ಸರ್ಕಾರವು ಆಜ್ಞಾಕೋರಿಕೆಯ ಅಧಿಕಾರವನ್ನು ಚಲಾಯಿಸಿತು, ಆಗ ಯುದ್ಧಸಮಯದ ಆಜ್ಞಾಕೋರಿಕೆಯನ್ನು ರಕ್ಷಣಾ ಅಧಿಕಾರದಲ್ಲಿ ಸೇರಿಸಬೇಕೆಂಬ ಅಂಶವನ್ನು ಎತ್ತಲಾಯಿತು. ರಕ್ಷಣಾ ವಿಷಯವು ಕೇಂದ್ರ ಶಾಸಕಾಂಗದ ಶಾಸನಾತ್ಮಕ ಅಧಿಕಾರದ ವಿಷಯವಲ್ಲದಿರುವುದರಿಂದ ಭಾರತ ರಕ್ಷಣಾ ಅಧಿನಿಯಮವು ಆಜ್ಞಾಕೋರಿಕೆಯ ಬಾಬನ್ನು ಅದರಲ್ಲಿ ಸೇರಿಸಲಿಲ್ಲ. ಕೆಲವು ಉಚ್ಚನ್ಯಾಯಾಲಯಗಳು ಇದನ್ನು ಒಪ್ಪಿಕೊಂಡಿದ್ದು ಒಂದು ಹಂತದಲ್ಲಿ ಸಂಸತ್ತು ಮಧ್ಯೆ ಪ್ರವೇಶಿಸಬೇಕಾಯಿತು. ಈಗ ೧ನೇ ಬಾಬಿನ

ಅಡಿ ಕೇಂದ್ರವು ರಕ್ಷಣಾ ಅಧಿಕಾರಗಳನ್ನು ಹೊಂದಿದ್ದು, ಯುದ್ಧದ ಸಮಯದಲ್ಲಿ ಚರ ಹಾಗೂ ಸ್ಥಿರ ಸ್ವತ್ತುಗಳ ಸಂಬಂಧದಲ್ಲಿ ಆಜ್ಞಾಕೋರಿಕೆ ಅಧಿಕಾರವನ್ನು ಹೊಂದಿರುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಶಾಂತಿಸಮಯದಲ್ಲಿ ಅಥವಾ ಸಿದ್ಧತಾ ಸಮಯದಲ್ಲಿ ರಕ್ಷಣಾ ಅಧಿಕಾರದಲ್ಲಿ ಆಜ್ಞಾಕೋರಿಕೆ ಅಧಿಕಾರವು ಸೇರುತ್ತದೆಯೇ ಎಂಬುದು ಸಂದೇಹಾಸ್ಪದ. ಈ ವಿಚಾರ ಕುರಿತ ಯಾವುದೇ ಪ್ರಶ್ನೆಯನ್ನು ನಿವಾರಿಸಲು ಬಾಬು ಸಂ. ೨ನ್ನು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ. ಚರ್ಚೆಯ ಸಮಯದಲ್ಲಿ ನನ್ನ ಮಿತ್ರ ಶ್ರೀ ಅನಂತಶಯನಮ್ ಅಯ್ಯಂಗಾರ್ ಈಗಾಗಲೇ ಹೇಳಿರುವಂತೆ ಕೆಲವು ಬಾಬುಗಳ ಸಂಬಂಧದಲ್ಲಿ ಈ ಹಿಂದೆ ಸಾಕಷ್ಟು ನಿರ್ಣಯಗಳಾಗಿದ್ದು, ನಾವು ಜನತೆ ಹಾಗೂ ಉದ್ಯೋಗಿ ಮಿತ್ರರನ್ನು ತೃಪ್ತಿಪಡಿಸಲು ಮತ್ತೆ ಮತ್ತೆ ಇದೇ ವಿಷಯದ ವ್ಯಾಜ್ಯಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಲು ಇಚ್ಛಿಸುವುದಿಲ್ಲ. ಆದ್ದರಿಂದ ಶಾಂತಿ ಸಮಯದಲ್ಲಿಯೂ ಆಜ್ಞಾಕೋರಿಕೆಯ ಅಧಿಕಾರವನ್ನು ಬಳಸುವುದರಿಂದ ತರಬೇತಿ ಮತ್ತು ಯುದ್ಧತಂತ್ರ ಸೇರಿದಂತೆ ಈ ಅಧಿಕಾರವನ್ನು ನಿರ್ದಿಷ್ಟವಾಗಿ ಸೂಚಿಸುವುದು ಅಗತ್ಯವಾಗಿದೆ. ಇದರ ಉದ್ದೇಶ ಇಷ್ಟು. ಆದ್ದರಿಂದ ನನ್ನ ಗೌರವಾನ್ವಿತ ಮಿತ್ರ ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ತಿದ್ದುಪಡಿಯನ್ನು ಖಂಡಿತವಾಗಿ ಹಿಂಪಡೆಯುತ್ತಾರೆ ಎಂದು ನನಗೆ ಖಚಿತವಾಗಿದೆ.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ** (ಸಿಕ್ಕಿಮ್ ಮತ್ತು ಕೂಚ್ ಬೆಹಾರ ಸಮೂಹ) : ಮಾನ್ಯ ಸಭಾಧ್ಯಕ್ಷರೆ, ಯುದ್ಧಕಾಲದಲ್ಲಿ ಹಲವು ಸ್ಥಳಗಳಲ್ಲಿ ವಿಶೇಷ ಕ್ರಮವೆಂದು ಆಜ್ಞಾಕೋರಿಕೆ ಮಾಡಲಾಯಿತು. ಆದರೆ ಅದು ಹಲವರಿಗೆ ತೊಂದರೆದಾಯಕ. ಅಲ್ಲದೆ ಹಲವಾರು ಪ್ರಕರಣಗಳಲ್ಲಿ ಆ ಅಧಿಕಾರದ ದುರ್ಬಳಕೆಯೂ ಆಯಿತು. ಯುದ್ಧಸಮಯದಲ್ಲಿ ಅಂಥ ದುರ್ಬಳಕೆಯನ್ನು ಸಹಿಸಿಕೊಳ್ಳಬಹುದು. ಆದರೆ ಈಗ ಹೀಗೆ ದುರ್ಬಳಕೆಯಾಗಬಹುದಾದ ಅಧಿಕಾರವನ್ನು ಪ್ರತಿಯೊಬ್ಬ 'ಸ್ಥಳೀಯ ಹಿಟ್ಲರ್'ನಿಗೆ ಕೊಡಲು ಉದ್ದೇಶಿಸಿದ್ದು ಅದನ್ನು ಅವನು ತನಗೆ ಇಷ್ಟವಾಗದ ವ್ಯಕ್ತಿಯ ವಿರುದ್ಧ ಬಳಸಬಹುದು. ಆದ್ದರಿಂದ ಮಾನ್ಯರೆ, ಸಾಮಾನ್ಯನ ಸ್ವಾತಂತ್ರ್ಯ ರಕ್ಷಣೆ ಹಾಗೂ ಸುರಕ್ಷತೆಗಾಗಿ ಸದನವು ಈ ಬಾಬನ್ನು ಕೈಬಿಡಬೇಕೆಂದು ನಾನು ಸೂಚಿಸುತ್ತೇನೆ.

**ಶ್ರೀ ಹುಸೇನ್ ಇಮಾಮ್** (ಬಿಹಾರ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ರಕ್ಷಣೆಯ ಉದ್ದೇಶಕ್ಕಾಗಿ ಭೂಮಿಗಾಗಿ ಆಜ್ಞಾಕೋರಿಕೆ ಮಾಡುವ ಅಧಿಕಾರ ಅತ್ಯಗತ್ಯ ಅಧಿಕಾರವಾಗಿದ್ದು ಕೇಂದ್ರದ ಸ್ಥಿರತೆ ಹಾಗೂ ಬಲವನ್ನು ಕಾಪಾಡಲು ನಾವು ಕೇಂದ್ರಕ್ಕೆ ಅದನ್ನು ನೀಡಲೇಬೇಕು, ಹಿಂದಿನ ಭಾಷಣಕಾರರು ಹೇಳಿರುವುದರಲ್ಲಿ ವಾಸ್ತವಾಂಶವಿದೆ. ಭೂಮಿಗಾಗಿ ಆಜ್ಞಾಕೋರಿಕೆ ಮಾಡಲಾಗಿತ್ತು. ಯುದ್ಧ ಮುಗಿದು ಎರಡು ವರ್ಷಗಳಾದರೂ ಇಂದಿಗೂ ಆ ಭೂಮಿಗಳು ಆಜ್ಞಾಕೋರಿಕೆಗೆ ಒಳಪಟ್ಟಿವೆ. ಮುಂಚಿನ ಸರ್ಕಾರವು ಸಾಕಷ್ಟು ದೋಷಪೂರ್ಣ ನಿರ್ವಹಣೆ ಮಾಡಿತ್ತೆಂಬುದರಲ್ಲಿ ಅನುಮಾನವಿಲ್ಲ. ಹಿಂದಿನ ಸರ್ಕಾರದ ಅಂಥ ದೋಷಪೂರ್ಣ ನಿರ್ವಹಣೆಯಿಂದಾಗಿ ನಾವು ನಮ್ಮ ಜನಪ್ರತಿನಿಧಿಗಳನ್ನು ನಂಬದಿರಲು ಕಾರಣವಿಲ್ಲ.

ಅವರು ಸಮಯ ಬಂದಾಗ ಭೂಮಿಗಾಗಿ ಮಾಡುವ ಆಜ್ಞಾಕೋರಿಕೆ ಅತ್ಯವಶ್ಯಕವಾಗಿದ್ದು ಅದು ಕೇಂದ್ರ ಪಟ್ಟಿಯಲ್ಲಿ ಇರಬೇಕೆಂದು ಸೂಚಿಸಲು ನಾನು ಇಲ್ಲಿ ಬಂದಿದ್ದೇನೆ. ಹೀಗೆ ಮಾಡುವ ಆಜ್ಞಾಕೋರಿಕೆ ಶಾಂತಿ ಉದ್ದೇಶಗಳಿಗಾಗಿಯೂ ಇರಬೇಕೆಂಬುದು ನನ್ನ ಸಲಹೆ. ಕೆಲವು ಬಾರಿ ಶಾಂತಿ ಸಮಯದಲ್ಲಿಯೂ ಭೂಮಿಗಾಗಿ ಆಜ್ಞಾಕೋರಿಕೆ ಮಾಡಬೇಕಾಗುತ್ತದೆ. ಉದಾಹರಣೆಗೆ: ಈಗ ಕೇಂದ್ರ ಹಾಗೂ ಪ್ರಾಂತ್ಯ ಸರ್ಕಾರಗಳು ಬೇರೆ ಬೇರೆ ಪ್ರದೇಶಗಳಿಂದ ದೊಡ್ಡ ಪ್ರವಾಹದಂತೆ ಬರುತ್ತಿರುವ ನಿರಾಶ್ರಿತರ ಬಗ್ಗೆ ವ್ಯವಹರಿಸಬೇಕಾಗಿದೆ. ಇಂಥ ಸಮಸ್ಯೆಗಳ ಸಂಬಂಧದಲ್ಲಿ ರಾಜ್ಯದಿಂದ ಸ್ವತ್ತಿನ ಆಜ್ಞಾಕೋರಿಕೆಯ ಅಧಿಕಾರವಿರಬೇಕಾಗುತ್ತದೆ. ಆದ್ದರಿಂದ ಈ ರೀತಿಯ ಒಂದು ಬಾಬನ್ನು ಸಮವರ್ತಿ ಪಟ್ಟಿಗೆ ಸೇರಿಸಬೇಕಾದ ಅಗತ್ಯವನ್ನು ಕರಡು ತಯಾರಕರಿಗೆ ತಿಳಿಸಬಯಸುತ್ತೇನೆ.

**ಶ್ರೀ ಎಚ್. ಚಂದ್ರಶೇಖರಯ್ಯ** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಮಂಡನೆ ಮಾಡಿರುವ

ತಿದ್ದುಪಡಿ ಸಕಾರಣವಾಗಿದೆ ಎಂದು ನನ್ನ ಅಭಿಪ್ರಾಯ. ತಿದ್ದುಪಡಿಯನ್ನು ವಿರೋಧಿಸುವುದು ಯುಕ್ತವೆಂದು ಭಾವಿಸಿದರೆ ಶ್ರೀ ಕೆ.ಎಮ್. ಮುನ್ಷಿಯವರು ಉದ್ದೇಶಿತ ನಮೂದಿನ ಅಗತ್ಯವನ್ನು ವಿವರಿಸಿಲ್ಲ. ಅವರು ಯುದ್ಧಸಮಯದಲ್ಲಿನ ಒಂದು ಪ್ರಕರಣವನ್ನು ಉಲ್ಲೇಖಿಸಿದರೇ ಹೊರತು ಶಾಂತಿ ಕಾಲದಲ್ಲಿ ಸಂಭವಿಸಿದ ಯಾವುದೇ ಪ್ರಕರಣದ ಬಗೆಗೂ ತಿಳಿಸಲಿಲ್ಲ. ಆಜ್ಞಾಕೋರಿಕೆಗೆ ಇಲ್ಲಿ ತಿಳಿಸಿರುವಂತೆ, ಪ್ರಾಂತ್ಯ ಅಥವಾ ಒಕ್ಕೂಟದ ರಾಜ್ಯದೊಡನೆ ಪೂರ್ವಭಾವಿ ಸಮಾಲೋಚನೆ ಅಗತ್ಯವಿರುವುದಿಲ್ಲ. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿಯೂ ಒಕ್ಕೂಟ ಪಟ್ಟಿಯಲ್ಲಿ ಇಂಥ ನಮೂದು ಇಲ್ಲ. ಒಕ್ಕೂಟದ ಉದ್ದೇಶಕ್ಕಾಗಿ ಭೂಮಿಯನ್ನು ಅರ್ಜಿಸಬೇಕಾದಾಗ, ಕೆಲವು ಷರತ್ತುಗಳ ಮೇರೆಗೆ ಮತ್ತು ನಷ್ಟಪರಿಹಾರವನ್ನು ಸಂದಾಯಮಾಡಿ ಹಾಗೆ ಮಾಡಬೇಕೆಂದು ಅಧಿನಿಯಮದ ೧೨೭ನೇ ಪ್ರಕರಣದಲ್ಲಿ ಉಪಬಂಧ ಕಲ್ಪಿಸಲಾಗಿದೆ. ಈಗಿರುವ ನಮೂದಿನ ಮೇರೆಗೆ, ವಿಷಯದ ಬಗ್ಗೆ, ಸಂಬಂಧಪಟ್ಟ ಘಟಕಕ್ಕೆ ತಿಳಿಸದೇ, ಯಾವುದೇ ಭೂಮಿಗೆ ಆಜ್ಞಾಕೋರಿಕೆಯನ್ನು ನೇರವಾಗಿ ಮನಬಂದಂತೆ ಮಾಡಬಹುದು ಎಂದು ಸೂಚಿತವಾಗುತ್ತದೆ. ಈ ಎಲ್ಲ ಕಾರಣಗಳಿಗಾಗಿ, ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಪ್ರಸ್ತಾವಿಸಿದಂತೆ ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ಸದನವನ್ನು ಕೋರುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ಈ ತಿದ್ದುಪಡಿಯ ಮಂಡನೆಕಾರರು ಈ ಬಾಬು ಅನಗತ್ಯವೆಂದು ಅಥವಾ ಪ್ರತಿಕೂಲವೆಂದು ಈ ಬಾಬಿನ ಬಗ್ಗೆ ಆಕ್ಷೇಪಿಸಿರದೇ, ಪಟ್ಟಿಯಲ್ಲಿರುವ ೪೩ನೇ ಸಂಖ್ಯೆಯ ಬಾಬಿನಲ್ಲಿಯೂ ಇದೇ ವಿಷಯ ಬಂದಿದೆ ಎಂಬ ಕಾರಣಕ್ಕಾಗಿ ಆಕ್ಷೇಪಿಸಿದ್ದಾರೆ. ಎಂದರೆ "ಒಕ್ಕೂಟದ ಉದ್ದೇಶಗಳಿಗಾಗಿ ಸ್ವತ್ತಿನ ಅರ್ಜನೆ" ಅವರ ಅಭಿಪ್ರಾಯದ ಮೇರೆಗೆ ಆ ಬಾಬು ಹೆಚ್ಚು ಸಮಗ್ರವಾಗಿರುವುದರಿಂದ ೨ನೇ ಸಂಖ್ಯೆಯ ಬಾಬು ಈ ಪಟ್ಟಿಯಲ್ಲಿ ಪ್ರತ್ಯೇಕ ಸ್ಥಾನ ಪಡೆಯುವ ಅಗತ್ಯವಿಲ್ಲ. ಆದ್ದರಿಂದ ಇಂಥದೊಂದು ಪ್ರತ್ಯೇಕ ನಮೂದು ಇರುವುದರ ಬಗ್ಗೆ ನನ್ನ ಆಕ್ಷೇಪವಿದೆ. ರಕ್ಷಣಾ ಉದ್ದೇಶಗಳಿಗಾಗಿ ಭೂಮಿಗಾಗಿ ಆಜ್ಞಾಕೋರಿಕೆ ಮಾಡುವುದಕ್ಕೂ, ಒಕ್ಕೂಟದ ಸಾಮಾನ್ಯ ಉದ್ದೇಶಗಳಿಗಾಗಿ ಆಜ್ಞಾಕೋರಿಕೆ ಮಾಡುವುದಕ್ಕೂ ವ್ಯತ್ಯಾಸವಿದೆ. ಒಂದು ಸಂದರ್ಭದಲ್ಲಿ ಅದನ್ನು ಭೂಮಿಯ ಮಟ್ಟಿಗೆ ನಿರ್ಬಂಧಿಸಲಾಗಿದೆ, ಇನ್ನೊಂದು ಸಂದರ್ಭದಲ್ಲಿ ಎಲ್ಲ ಪ್ರಕಾರದ ಸ್ವತ್ತುಗಳನ್ನು ನಿರ್ಬಂಧಿಸಬಹುದಾಗಿದೆ.

ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಸ್ವತ್ತನ್ನು ಅರ್ಜಿಸುವಾಗ ಉದ್ದೇಶದ ಸ್ವರೂಪವೂ ಬೇರೆಯಾಗುತ್ತದೆ. ಕೆಲವು ಬಾರಿ ಅಪಾಯಕಾರಿ ಅಥವಾ ಹಾನಿಕರ ವ್ಯಾಪಾರಕ್ಕಾಗಿ ಸ್ವತ್ತಿಗಾಗಿ ಕೋರಿಕೆ ಸಲ್ಲಿಸಲಾಗುತ್ತದೆ. ಮತ್ತು ಈ ಉದ್ದೇಶಕ್ಕಾಗಿ ಸ್ಥಳೀಯ ಸಮಿತಿಗಳಿಗೆ ನಿರ್ದಿಷ್ಟ ಅಧಿಕಾರ ನೀಡಲಾಗುತ್ತದೆ. ಆದ್ದರಿಂದ ರಕ್ಷಣಾ ಉದ್ದೇಶಗಳನ್ನು ಇತರ ಸಾಮಾನ್ಯ ಉದ್ದೇಶಗಳಿಂದ ಪ್ರತ್ಯೇಕಿಸುವ ಅಗತ್ಯವಿದೆ ಎಂದು ನಾನು ಹೇಳುತ್ತೇನೆ. ಅದಕ್ಕೆ ಬಾಬು ೪೩ರಲ್ಲಿ ಅವಕಾಶ ಕಲ್ಪಿಸಿ, ಈ ವ್ಯತ್ಯಾಸವನ್ನು ಕುರಿತು ಸಭೆಯ ಗಮನವನ್ನು ಸೆಳೆಯಲಾಗಿದೆ.

ಹಿಂದಿನ ಭಾಷಣಕಾರರು, ೧೯೩೫ರ ಭಾರತ ಸರ್ಕಾರದ ಅಧಿನಿಯಮದಡಿ ಪ್ರಾಂತೀಯ ಸರ್ಕಾರವು ನಷ್ಟಪರಿಹಾರವನ್ನು ಸಂದಾಯಮಾಡಿ ಒಕ್ಕೂಟದ ಉದ್ದೇಶಕ್ಕಾಗಿ ಸ್ವತ್ತನ್ನು ಅರ್ಜಿಸಬಹುದು ಎಂದು ಹೇಳಿದರು. ಇಂಥದೇ ಏರ್ಪಾಡನ್ನು ಇಲ್ಲಿಯೂ ಕಲ್ಪಿಸಬಹುದು. ನಷ್ಟಪರಿಹಾರವನ್ನು ಸಂದಾಯಮಾಡದೇ ಯಾರೇ ವ್ಯಕ್ತಿಯ ಸ್ವತ್ತನ್ನು ಅರ್ಜಿಸುವಂತಿಲ್ಲ. ನಾವು ಈಗಾಗಲೇ ಮೂಲಭೂತ ಹಕ್ಕುಗಳಲ್ಲಿ, ನಷ್ಟಪರಿಹಾರವನ್ನು ಸಂದಾಯಮಾಡದೇ ಯಾವುದೇ ಆಸ್ತಿಯನ್ನು ಅರ್ಜಿಸುವಂತಿಲ್ಲ ಎಂದು ಈಗಾಗಲೇ ವಿಧಿಸಿದ್ದೇವೆ. ಆದ್ದರಿಂದ ಪಟ್ಟಿಯಲ್ಲಿ ಈ ಬಾಬು ಮುಂದುವರಿಯುವುದಕ್ಕೆ ಅನುಮತಿಸಬಹುದು.

**ಬಿ. ಪಾಕರ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಈ ಬಾಬು, ಒಕ್ಕೂಟ ಪಟ್ಟಿಯ ೧ನೇ ಅಥವಾ ೪೩ನೇ ಬಾಬಿನಲ್ಲಿ ಸೇರಿದೆ ಎಂದು ಒಪ್ಪಿಕೊಳ್ಳಲಾಗಿದೆ. ಬಾಬು ಸಂ. ೨ನ್ನು ಉಳಿಸಿಕೊಳ್ಳಬೇಕೇ ಅಥವಾ ಕೈಬಿಡಬೇಕೇ ಎಂಬುದು ಈಗಿನ ಪ್ರಶ್ನೆ. ಅದರಲ್ಲಿ ಹೆಚ್ಚಿನ

ಆಳವಿಲ್ಲವಾದರೂ ನಾವು ಅದನ್ನು ಉಳಿಸಿಕೊಳ್ಳುವಂತಿಲ್ಲ. ಆದರೆ ಈ ಬಾಬಿನ ವಿಷಯ ೧ನೇ ಬಾಬಿನಲ್ಲಿ ಸೇರಿಸುವುದರಿಂದ ಇದನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ. ಇದನ್ನು ಬಾಬು ಸಂ. ೨ ಎಂದು ಉಳಿಸಿಕೊಂಡರೆ, ೧ನೇ ಬಾಬಿನಲ್ಲಿ ಈಗಾಗಲೇ ಹಲವಾರು ಅಂಶಗಳು ಸೇರಿರುವುದರಿಂದ, ಇದು ಹಲವಾರು ಕಠಿಣ ಪ್ರಶ್ನೆಗಳಿಗೆ ದಾರಿ ಮಾಡಿಕೊಡುತ್ತದೆ. ಒಂದು ವಿವರವನ್ನು ಬಾಬು ೨ ಎಂದು ಸೂಚಿಸಿರುವುದರಿಂದ ಅದರ ವಿವರಗಳು ಬಾಬು ೧ರಲ್ಲಿ ಸೇರುವುದಿಲ್ಲ ಎಂದು ವಾದಿಸಬಹುದು. ಆದ್ದರಿಂದ ಬಾಬು ೧ರಲ್ಲಿ ಇದು ಈಗಾಗಲೇ ಸೇರಿರುವುದರಿಂದ ಬಾಬು ೨ನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಿಲ್ಲ. ಆದ್ದರಿಂದ ಇದನ್ನು ಕೈಬಿಡಬೇಕು ಎಂದು ನನ್ನ ವಿನಂತಿ.

**ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಬಾಬು ೧ ಅಥವಾ ೪೩–ಎರಡೂ ಬಾಬು ೨ನ್ನು ಒಳಗೊಂಡಿಲ್ಲ. ಭಾರತದಂಥ ದೊಡ್ಡ ದೇಶ ತನ್ನ ಸೈನ್ಯವನ್ನು ಸಮರ್ಥವಾಗಿರಿಸಲು ಬೇರೆ ಬೇರೆ ಭೌಗೋಳಿಕ ಪ್ರದೇಶಗಳಲ್ಲಿ ಹಾಗೂ ಹವಾಮಾನ ಪರಿಸ್ಥಿತಿಯಲ್ಲಿ ತರಬೇತಿ ನೀಡಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಸೇನೆಯು ದೇಶದ ವಿವಿಧ ಭಾಗಗಳಲ್ಲಿ, ಹಾಗೂ ವರ್ಷದ ಬೇರೆ ಬೇರೆ ಕಾಲದಲ್ಲಿ ಭೂಮಿಗಾಗಿ ಆಜ್ಞಾಕೋರಿಕೆ ಸಲ್ಲಿಸಬೇಕಾಗುತ್ತದೆ. ಆದ್ದರಿಂದ ರಕ್ಷಣೆಯು ಕೇಂದ್ರದ ವಿಷಯ ಹಾಗೂ ಅಂಥ ಅಧಿಕಾರ ಕೇಂದ್ರಕ್ಕೆ ತುಂಬ ಅಗತ್ಯ. ಆದ್ದರಿಂದ ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಶ್ರೀ ತಾಜಮಲ್ ಹುಸೇನ್** (ಬಿಹಾರ : ಮುಸ್ಲಿಮ್) : *[ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಶಾಸಕಾಂಗವು ರಕ್ಷಣಾ ಉದ್ದೇಶಗಳಿಗಾಗಿ ಭಾರತದೊಳಗೆ ಬೇಕೆನಿಸಿದ ಕಡೆಗಳಲ್ಲಿ ಭೂಮಿಗಾಗಿ ಆಜ್ಞಾಕೋರಿಕೆ ಸಲ್ಲಿಸಿ ಭೂಮಿಯನ್ನು ಅರ್ಜಿಸುವ ಅಧಿಕಾರ ಹೊಂದಿದೆ. ಆದರೆ ಅದನ್ನು ತೆಗೆದುಹಾಕಬೇಕೆಂದು ನನ್ನ ಮಿತ್ರರು ತಿದ್ದುಪಡಿ ಮಂಡಿಸಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ಈ ತಿದ್ದುಪಡಿಯನ್ನು ಏಕೆ ಮಂಡಿಸಲಾಗಿದೆ ಎಂದು ಅರ್ಥವಾಗುತ್ತಿಲ್ಲ. ಭಾರತದ ಮೇಲೆ ಅಥವಾ ಭಾರತದಲ್ಲಿ ಸೇರಿರುವ ಟ್ರಾವಂಕೂರ್ ಮೇಲೆ ಆಕ್ರಮಣ ನಡೆಸಿದರೆ ಅಲ್ಲಿ ಒಂದು ಮೂಂಚೂಣಿಯ ನಿರ್ಮಾಣ ಅಗತ್ಯವಾಗುತ್ತದೆ. ಆಗ ಕೇಂದ್ರ ಶಾಸಕಾಂಗಕ್ಕೆ ಭೂಮಿಯ ಆಜ್ಞಾಕೋರಿಕೆಗೆ ಅಧಿಕಾರ ನೀಡುವುದಿಲ್ಲವೇ? ಈ ತಿದ್ದುಪಡಿಯ ಬಗ್ಗೆ ನನಗೆ ಅಚ್ಚರಿಯಾಗುತ್ತದೆ. ಕೇಂದ್ರ ಶಾಸಕಾಂಗಕ್ಕೆ ಯುದ್ಧತಂತ್ರಗಳಿಗಾಗಿ ಭೂಮಿಯ ಆಜ್ಞಾಕೋರಿಕೆಗೆ ಅಧಿಕಾರ ನೀಡಬೇಕೆಂಬುದು ನನ್ನ ಅಭಿಪ್ರಾಯ.]*

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ಬಾಬು ಸಂ. ೨ರ ಮರ್ಮವನ್ನು ನಾನು ಬೆಂಬಲಿಸುತ್ತೇನೆ. ಕೇಂದ್ರಕ್ಕೆ ತನ್ನ ಉದ್ದೇಶಗಳಿಗಾಗಿ ಭೂಮಿಗಾಗಿ ಆಜ್ಞಾಕೋರಿಕೆ ಸಲ್ಲಿಸಲು ಅಧಿಕಾರವಿರಬೇಕು. ಆದರೆ ಅದಕ್ಕಾಗಿ ಈ ಖಂಡ ಅನಗತ್ಯ. ಏಕೆಂದರೆ ಇದು ಬಾಬು ೧ರಲ್ಲಿ ಪೂರ್ಣವಾಗಿ ಸೇರಿದೆ. 'ಭೂ ಅರ್ಜನೆ' ಎಂದರೆ 'ಪೂರ್ಣಸ್ವಾಮ್ಯಕ್ಕೆ ತೆಗೆದುಕೊಳ್ಳುವುದು' ಮತ್ತು 'ಭೂಮಿಗಾಗಿ ಆಜ್ಞಾಕೋರಿಕೆ' ಎಂದರೆ ತಾತ್ಕಾಲಿಕ ಬಳಕೆಗಾಗಿ ಭೂಮಿಯ ಸ್ವಾಧೀನ ಪಡೆಯುವುದು. ಎರಡರಲ್ಲೂ ಬಹಳ ವ್ಯತ್ಯಾಸವಿದೆ. ಹೀಗಾಗಿ ಬಾಬು ೪೩ರಲ್ಲಿ ಇದು ಸೇರುವುದಿಲ್ಲವೆಂದು ನನ್ನ ಅನಿಸಿಕೆ. ಆದರೆ ಇದು ಬಾಬು ೧ರಲ್ಲಿ ಸೇರಿದೆ. ನಾವು ಪ್ರತಿಯೊಂದು ಅಧಿಕಾರವನ್ನು ವಿವರಿಸುತ್ತಾ ಹೋದರೆ, ನಾವು ಎಲ್ಲಿಗೆ ನಿಲ್ಲಿಸಬೇಕೆಂಬ ಮಿತಿ ಗೊತ್ತಾಗುವುದಿಲ್ಲ. ಕೆಲವು ಬಾಬುಗಳನ್ನು ಕೇವಲ ಕೆಲವು ನುಡಿಗಟ್ಟು ಪದಗಳಿಂದ ಅಭಿವ್ಯಕ್ತಿಸಲಾಗಿದೆ. ಆದ್ದರಿಂದ ನಾವು ಈ ಅಧಿಕಾರವನ್ನು ಇನ್ನಷ್ಟು ಪರಿಭಾಷಿಸಿದರೆ ಇತರ ಬಹುಸಂಖ್ಯೆಯ ಆನುಷಂಗಿಕ ಅಧಿಕಾರಗಳನ್ನು ಪರಿಭಾಷಿಸಬೇಕಾಗುತ್ತದೆ. ಅದು ಮತ್ತೊಂದು ಸಂಕೀರ್ಣ ತತ್ತ್ವವನ್ನೇ ಹುಟ್ಟುಹಾಕಿದಂತಾಗುತ್ತದೆ. 'ಯುದ್ಧ ಮತ್ತು ಶಾಂತಿ'ಗೆ ಸಂಬಂಧಿಸಿದ ಬಾಬು ೧೫ರಲ್ಲೂ 'ರಕ್ಷಣಾ' ವಿಷಯ ಸೇರಿದೆ. ಯಾವುದೇ ಸಂದೇಹಗಳಿದ್ದರೆ ೧೫ನೇ ಬಾಬಿನಲ್ಲಿ ಅದು ನಿವಾರಣೆಯಾಗುತ್ತದೆ. ಈ ಎಲ್ಲ ಕಾರಣಕ್ಕಾಗಿ ಬಾಬು ೨ ಅನಗತ್ಯವೆಂದು, ತೆಗೆದು ಹಾಕಬೇಕೆಂದು ಕೋರುತ್ತೇನೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಕೆಲವು ಸನ್ನಿವೇಶಗಳಲ್ಲಿ ಯಾವುದೇ ಪ್ರಕರಣದಲ್ಲಿ ರಕ್ಷಣಾ ಉದ್ದೇಶಗಳಿಗಾಗಿ ಭೂಮಿಗಾಗಿ ಮಾಡುವ ಆಜ್ಞಾಕೋರಿಕೆಗೆ ಸಂಬಂಧಿಸಿದಂತೆ ಕೆಲವು ಕಾನೂನುಗಳನ್ನು ಮಾಡುವ ಅಧಿಕಾರ ಒಕ್ಕೂಟದ ಶಾಸಕಾಂಗಕ್ಕೆ ಇರಬೇಕೆಂಬುದನ್ನು ಸದನವು ಒಪ್ಪಿದೆ. ತಿದ್ದುಪಡಿಯ ಪರವಾಗಿ ಹೇಳಲಾಗಿರುವುದೇನೆಂದರೆ ಆ ಅಧಿಕಾರದ ವಿಷಯ ಬಾಬು ಸಂ. ೪೩ರಲ್ಲಿ ಅಥವಾ ೧ರಲ್ಲಿ ಸೇರಿದೆ ಎಂದು ಸದನಕ್ಕೆ ಗೊತ್ತಿರುವಂತೆ ಬಾಬು ಸಂ. ೪೩ರಲ್ಲಿ, ಒಕ್ಕೂಟದ ಉದ್ದೇಶಗಳಿಗಾಗಿ ಭೂಮಿಯನ್ನು ಅರ್ಜಿಸುವ ಕುರಿತು ಉಲ್ಲೇಖಿಸಲಾಗಿದೆ. ಭೂಮಿಗಾಗಿ ಆಜ್ಞಾಕೋರಿಕೆ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಭಾರತ ರಕ್ಷಣಾ ಅಧಿನಿಯಮದಲ್ಲಿರುವ ಒಂದು ಪ್ರಕರಣದ ಅರ್ಥವಿವರಣೆಯ ಸಂಬಂಧದಲ್ಲಿ ದೇಶದ ಕೆಲವು ಉಚ್ಚನ್ಯಾಯಾಲಯಗಳು ಆಜ್ಞಾಕೋರಿಕೆಯು ಅರ್ಜನೆಯ ಅಡಿ ಸೇರುವುದಿಲ್ಲ ಎಂದು ಅಭಿಪ್ರಾಯಪಟ್ಟವು. ಯುದ್ಧಕಾಲದಲ್ಲಿ ಆಜ್ಞಾಕೋರಿಕೆ ಮಾಡಲಾಗಿದ್ದ ಸ್ವತ್ತುಗಳ ಸಂಬಂಧದಲ್ಲಿ, ವಿಶೇಷವಾಗಿ ಯುದ್ಧ ಮುಗಿದ ಮೇಲೆ ಮಾಡಬೇಕಾದುದನ್ನು ಮಾಡಿ ಮುಗಿಸಲು, ಮೂರು ವರ್ಷಗಳ ಸೀಮಿತ ಅವಧಿಯವರೆಗೆ ಆಜ್ಞಾಕೋರಿಕೆಯ ಸ್ವತ್ತುಗಳ ವಿಷಯದಲ್ಲಿ ವ್ಯವಹರಿಸಲು ಕೇಂದ್ರಕ್ಕೆ ಅಧಿಕಾರ ನೀಡಲು ಶಾಸನಪ್ರದತ್ತ ಉಪಬಂಧ ಕಲ್ಪಿಸುವುದು ಅಗತ್ಯವಾಗಿತ್ತು. ಆದರೆ ನಾವೀಗ ಶಾಶ್ವತ ಅವಧಿಯ ಸಂವಿಧಾನದ ಪರಿಶೀಲನೆಯಲ್ಲಿ ತೊಡಗಿದ್ದೇವೆ.

ಮಾನ್ಯರೆ, ಯುದ್ಧಕಾಲ ಅಥವಾ ಇತರ ತುರ್ತು ಸಂದರ್ಭಗಳಲ್ಲಿ, ತರಬೇತಿ ಮತ್ತು ಯುದ್ಧತಂತ್ರಗಳ ಉದ್ದೇಶಗಳೂ ಸೇರಿದಂತೆ ರಕ್ಷಣಾ ಉದ್ದೇಶಗಳಿಗಾಗಿ ಭೂಮಿಗಾಗಿ ಆಜ್ಞಾಕೋರಿಕೆ ಅಗತ್ಯ ಎಂಬುದು ಒಪ್ಪತಕ್ಕ ಅಂಶ. ಇಂಥ ಅಧಿಕಾರವನ್ನು ತೆಗೆದುಕೊಳ್ಳುವಾಗ ಅದಕ್ಕೆ ಬೇಕಾದ ಕಾನೂನು ರಚಿಸಲು ಒಕ್ಕೂಟ ಶಾಸಕಾಂಗಕ್ಕೆ ಅಧಿಕಾರ ನೀಡಬೇಕಾಗುತ್ತದೆ. ಆ ಅಧಿಕಾರವನ್ನು ಬಾಬು ೧ರಲ್ಲಿ ಕಲ್ಪಿಸಿಕೊಂಡರೆ, ಬಾಬು ೪೩ರಲ್ಲಿ ಕಲ್ಪಿಸಿಕೊಳ್ಳುವುದಾದರೆ ಬಾಬು ೨ ಪೂರ್ತಿ ಅನಗತ್ಯವಾಗುತ್ತದೆ. ನಾವು ವಿವರವಾಗಿ ತಿಳಿಸಿರುವ ಹಲವಾರು ಇತರ ಬಾಬುಗಳನ್ನು ಬಾಬು ೧ರ ಅಡಿ ತರಬಹುದು. ಆದರೂ ಅವುಗಳನ್ನು ನಾವು ಈ ಪಟ್ಟಿಯಲ್ಲಿ ಪರಿಗಣಿಸಿದ್ದೇವೆ. ಆಜ್ಞಾಕೋರಿಕೆಯನ್ನು ಸಾಮಾನ್ಯ ರಕ್ಷಣಾ ಅಧಿಕಾರದಡಿ ತರಬಹುದು ಎಂದು ಒಪ್ಪಿಕೊಂಡಿರುವಾಗ, ವಿವರಿಸಲಾಗಿರುವ ಇತರ ಅನೇಕ ಬಾಬುಗಳಲ್ಲಿ ಆಜ್ಞಾಕೋರಿಕೆಯನ್ನು ಸೇರಿಸುವುದಕ್ಕೆ ಯಾವ ಅಡ್ಡಿ ಇದೆ? ಒಕ್ಕೂಟ ಪಟ್ಟಿಯಲ್ಲಿ ಈ ಅಧಿಕಾರವಿರಲಿ. ಶಾಂತಿಕಾಲದಲ್ಲಿ ಆ ಅಧಿಕಾರವನ್ನು ಬಳಸಬೇಕೇ ಮತ್ತು ಆಜ್ಞಾಕೋರಿಕೆ ಮಾಡಲು ಸಾಧ್ಯವಾಗುವಂತೆ ಕಾನೂನು ರಚಿಸಬೇಕೆ ಎಂಬುದು ಮುಂದಿನ ಒಕ್ಕೂಟ ಶಾಸಕಾಂಗಕ್ಕೆ ಬಿಟ್ಟ ವಿಚಾರ. ಆಜ್ಞಾಕೋರಿಕೆಗಾಗಿ ಪ್ರಸ್ತಾವಿಸಲಾಗುವ ಕಾನೂನಿನಲ್ಲಿ ಅನಗತ್ಯ ಆಜ್ಞಾಕೋರಿಕೆಗೆ ಅವಕಾಶವಿರುವಂತೆ ಅಥವಾ ಪರಿಸ್ಥಿತಿ ಅನುಕೂಲಕರವಲ್ಲದಿರುವಾಗ ಆಜ್ಞಾಕೋರಿಕೆಗೆ ಅವಕಾಶವಾಗದಂತೆ ಷರತ್ತುಗಳನ್ನು ಸೇರಿಸಬಹುದು. ಕೆಲವು ಸನ್ನಿವೇಶಗಳಲ್ಲಿ ಶಾಂತಿಕಾಲದಲ್ಲಿ ಆಜ್ಞಾಕೋರಿಕೆ ಅಗತ್ಯವಿರುವುದಿಲ್ಲ ಎಂಬ ಕಾರಣಕ್ಕಾಗಿ ಪಟ್ಟಿಯಿಂದ ಇಡೀ ಬಾಬನ್ನೇ ತೆಗೆದುಹಾಕಲಾಗದು. ನಾನು ಇಲ್ಲಿ ಇನ್ನೊಂದು ಅಂಶವನ್ನು ತಿಳಿಸಲು ಇಚ್ಛಿಸುತ್ತೇನೆ. ಭೂಮಿಗಾಗಿ ಮಾಡುವ ಆಜ್ಞಾಕೋರಿಕೆ ಈ ಪಟ್ಟಿಯ ಬಾಬು ೧ರ ಪರಿಧಿಯಲ್ಲಿ ಬರುವುದಿಲ್ಲ ಎಂದು ಅಭಿಪ್ರಾಯಪಟ್ಟು ವಿರುದ್ಧವಾದ ವಿಚಾರವನ್ನು ಕೈಗೊಳ್ಳಲಾಗಿದೆ ಎಂದು ಭಾವಿಸೋಣ. ಆಗ ಪರಿಸ್ಥಿತಿ ಏನಾಗುತ್ತದೆ? ಆ ಬಾಬು ಮೂರು ಪಟ್ಟಿಗಳಲ್ಲಿಯೂ ಕಾಣೆಯಾಗಿ, ಬೇರೆ ಉಳಿದ ಬಾಬು ಎನಿಸಿ ಆ ಬಾಬಿಗೆ ಸಂಬಂಧಿಸಿ ವ್ಯವಹರಿಸಲು ಕಾನೂನು ರಚಿಸುವ ಅಧಿಕಾರ ಕೇಂದ್ರಕ್ಕೆ ಇರುತ್ತದೆ. ಬಾಕಿ ಉಳಿದ ಅಧಿಕಾರಗಳ ಪ್ರಮಾಣ ಹಾಗೂ ಪ್ರಾಂತ್ಯಗಳು ಮತ್ತು ಕೇಂದ್ರದ ನಡುವೆ ಆದ ಅಧಿಕಾರಗಳ ಹಂಚಿಕೆ ಪ್ರಮಾಣ–ಇವೆರಡರ ನಡುವಿನ ಅಂತರದ ದೃಷ್ಟಿಯಿಂದ ಮತ್ತು ಈ ಬಾಬು ಬಾಕಿ ಉಳಿದ ಅಧಿಕಾರವಾದರೆ ರಾಜ್ಯಗಳು ಈ ಬಾಬಿನ ವಿಷಯದಲ್ಲಿ ಕಾನೂನು ರಚಿಸಲು ತಮ್ಮ ಅಧಿಕಾರ ವ್ಯಾಪ್ತಿಯನ್ನು ಹಕ್ಕು ಕೇಳಬಹುದು. ಭಾರತೀಯ ರಾಜ್ಯಗಳ ಪ್ರತಿನಿಧಿಗಳು ಮಂಡಿಸಿದ ತಿದ್ದುಪಡಿಯ

ಪರಿಣಾಮವೇನು? ಅದನ್ನು ತೆಗೆದುಹಾಕಿದರೆ, ಕೆಲವು ಸಂದರ್ಭಗಳಲ್ಲಿ, ತುರ್ತುಪರಿಸ್ಥಿತಿಗಳಲ್ಲಿ ಒಕ್ಕೂಟಕ್ಕೆ ಅಧಿಕಾರದ ಅಗತ್ಯವಿರುತ್ತದೆ. ಕೇಂದ್ರದ ದೃಷ್ಟಿಯಿಂದ ನಾವು ಮಾಡುವ ವಾದ, ರಕ್ಷಣೆಯ ಸಾಮಾನ್ಯ ಅಧಿಕಾರದಲ್ಲಿ ಆಜ್ಞಾಕೋರಿಕೆಗೆ ಅತ್ಯಗತ್ಯ ಬಾಬು ಎಂದು ತೋರಿಸುವುದರಲ್ಲಿ ಕೇಂದ್ರಿಕೃತವಾಗುವುದರಿಂದ ಅದಕ್ಕಾಗಿ ಕಾನೂನು ರಚಿಸಬೇಕಾಗುತ್ತದೆ. ಆದ್ದರಿಂದ ಪರಿಶೀಲನೆಯು, ಈ ಬಾಬನ್ನು ಒಕ್ಕೂಟಪಟ್ಟಿಯಲ್ಲಿ ಹೀಗೇ ಉಳಿಸುವುದರ ಪರವಾಗಿದ್ದು, ಅದರ ಬಗ್ಗೆ ಕಾನೂನು ರಚಿಸಬೇಕಾದ ಸಂದರ್ಭ ಒದಗಿದಾಗ ಸದನವು, ಈ ಬಾಬನ್ನು ಬಳಸುವ ಅಗತ್ಯವಿಲ್ಲದ ಸಂದರ್ಭಗಳಲ್ಲಿ ಬಳಸಲಾಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಕ್ರಮಕೈಗೊಳ್ಳಬೇಕು. ಆದ್ದರಿಂದ ಈ ತಿದ್ದುಪಡಿಗಾಗಿ ಆಗ್ರಹಿಸಬಾರದೆಂದು ಸೂಚಿಸುತ್ತೇನೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ :** ತಿದ್ದುಪಡಿಯಲ್ಲಿರುವ ಮುಖ್ಯ ಅಂಶವೆಂದರೆ ಯುದ್ಧ ಹಾಗೂ ತುರ್ತು ಸಂದರ್ಭಗಳಲ್ಲಿ ಆಜ್ಞಾಕೋರಿಕೆಗೆ ಅಗತ್ಯವಿರುವ ಅಧಿಕಾರಗಳನ್ನು ಒಪ್ಪಿಕೊಳ್ಳಬೇಕು ಮತ್ತು ಬಾಬು ೧ರಲ್ಲಿ ಅದನ್ನು ಒಪ್ಪಲಾಗಿದೆ. ಆದರೆ ಸಾರ್ವಜನಿಕ ಹಿತದೃಷ್ಟಿಯ ಮೇರೆಗೆ ಶಾಂತಿಕಾಲದಲ್ಲಿ ಈ ಅಧಿಕಾರವನ್ನು ಭೂ ಅರ್ಜನೆ ಅಧಿನಿಯಮದ ಮೇರೆಗೆ ಚಲಾಯಿಸಬೇಕು. ಪ್ರಸ್ತುತ ಪ್ರಶ್ನೆ ಸಾರ್ವಜನಿಕ ಕಾರ್ಯನೀತಿಗೆ ಸಂಬಂಧಿಸಿದ್ದು, ಎಂದರೆ ಯುದ್ಧ ಅಥವಾ ತುರ್ತು ಇಲ್ಲದಿರುವಾಗ ಶಾಂತಿಕಾಲದಲ್ಲಿ ನಾವು ಆಜ್ಞಾಕೋರಿಕೆಯ ಅಧಿಕಾರವನ್ನು ಚಲಾಯಿಸಲು ಬಯಸುತ್ತೇವೆಯೇ? ಈ ತಿದ್ದುಪಡಿಯ ಉದ್ದೇಶವೇನೆಂದರೆ ಶಾಂತಿಕಾಲದಲ್ಲಿ ತರಬೇತಿ ಹಾಗೂ ಯುದ್ಧತಂತ್ರಗಳಿಗಾಗಿ ಭೂಮಿಯ ಅಗತ್ಯವಿರುವಾಗ ಸಾಮಾನ್ಯ ಭೂಅರ್ಜನಾ ಕಾರ್ಯವಿಧಾನವನ್ನು ಬಳಸಬೇಕು ಎಂದು ನಿಗದಿಪಡಿಸಬೇಕು.

**ಶ್ರೀ ತಾಜಮಲ್ ಹುಸೇನ್ :** ಮಾನ್ಯರೆ, ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಂಡನೆಕಾರರು ಉತ್ತರಿಸಿದ ಮೇಲೆ ಯಾವುದೇ ಭಾಷಣ ಇರುತ್ತದೆಯೇ? ಯಾರಿಗೂ ಉತ್ತರಿಸುವ ಅಧಿಕಾರವಿರುವುದಿಲ್ಲ. ಈ ಬಗ್ಗೆ ನಿಮ್ಮಿಂದ ಒಂದು ನಿರ್ಣಯವನ್ನು ಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವ ಉದ್ದೇಶ ಹೊಂದಿದ್ದರು ಎಂದು ನನ್ನ ಅನಿಸಿಕೆ. ಆ ಕಾರಣಕ್ಕಾಗಿ ಅವರಿಗೆ ಮಾತನಾಡಲು ಅನುಮತಿಸಿದೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ :** ಮಾನ್ಯರೆ, ನಾನು ತಿದ್ದುಪಡಿಗಾಗಿ ಆಗ್ರಹಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನನ್ನ ನಿರೀಕ್ಷೆ ಸರಿಯಾಗಿತ್ತು. ಅವರು ತಿದ್ದುಪಡಿಗಾಗಿ ಒತ್ತಾಯಿಸುವುದಿಲ್ಲ.

**ಶ್ರೀ ತಾಜಮಲ್ ಹುಸೇನ್ :** ಹಾಗಾದರೆ ನಾನು ಕ್ರಿಯಾಲೋಪವನ್ನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಯನ್ನು ಹಿಂಪಡೆಯಲಾಗಿದೆ. ಹಾಗೆ ಮಾಡಲು ಸದನವು ಅವರಿಗೆ ಅನುಮತಿಸುವುದೆಂದು ಭಾವಿಸುತ್ತೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಬೇರೆ ಕೆಲವು ತಿದ್ದುಪಡಿಗಳ ಬಗ್ಗೆ ನೋಟೀಸುಗಳು ಬಂದಿವೆ.

(ಶ್ರೀಯುತರುಗಳಾದ ಕೆ. ಸಂತಾನಮ್, ಮೋಹನಲಾಲ್ ಸಕ್ಸೇನಾ, ಎಮ್. ಅನಂತಶಯನಮ್ ಅಯ್ಯಂಗಾರ್ ಮತ್ತು ಎನ್. ಮಾಧವರಾವ್ ತಮ್ಮ ಹೆಸರಿನಲ್ಲಿದ್ದ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಮಾನ್ಯ ಸಭಾಧ್ಯಕ್ಷರು :** ಬೇರೆ ಯಾವುದೇ ತಿದ್ದುಪಡಿ ಇಲ್ಲವೆಂದು ಭಾವಿಸುತ್ತೇನೆ. ಮೂಲ ಬಾಬನ್ನು ಈಗ ಮತಕ್ಕೆ ಹಾಕುತ್ತೇನೆ.

ಬಾಬು ೨ ಅಂಗೀಕಾರವಾಯಿತು.

**ಬಾಬು ೩**

**ಮಾನ್ಯ ಸಭಾಧ್ಯಕ್ಷರು :** ನಾವು ಬಾಬು ೩ನ್ನು ಕೈಗೆತ್ತಿಕೊಳ್ಳೋಣ. ೩ನೇ ಬಾಬಿಗೆ ಯಾವುದೇ ತಿದ್ದುಪಡಿ ಇರುವಂತೆ ತೋರುವುದಿಲ್ಲ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಬಾಬು ೩ರ ಬಗ್ಗೆ ಮಾತನಾಡಲು ಇಚ್ಛಿಸುತ್ತೇನೆ. ಕೇಂದ್ರ ಗುಪ್ತವಾರ್ತಾ ವಿಭಾಗ ಎಂಬುದು ಸರಿಯಾದ ವಿಷಯವಲ್ಲ. ಕೇಂದ್ರ ಗುಪ್ತವಾರ್ತೆ ಎಂಬುದು ವಿಷಯವಾಗಿರಬೇಕು. ನಾವು ನಮ್ಮ ಶಾಸನಾಧಿಕಾರವನ್ನು ಯಾಕೆ ವಿಭಾಗಕ್ಕೆ ನಿರ್ಬಂಧಿಸಬೇಕು? ವ್ಯಾಪ್ತಿಯನ್ನು ನಿರ್ಬಂಧಿಸುವ ಅಗತ್ಯ ತೋರುವುದಿಲ್ಲ. ಕೊನೆಯ ಪದವನ್ನು ಕೈಬಿಟ್ಟರೆ ಕೇಂದ್ರ ಗುಪ್ತವಾರ್ತೆ ಎಂಬುದು ಸರಿಯಾದ ವಿಷಯವಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರೇ, ಅದು ಸೂಕ್ತ ಸಲಹೆ ಎನಿಸುತ್ತದೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಪಠ್ಯವನ್ನು ಅಂತಿಮಗೊಳಿಸುವಾಗ ಅದನ್ನು ಪರಿಗಣಿಸೋಣ.

**ಮಾನ್ಯ ಸಭಾಧ್ಯಕ್ಷರು** : ಹಾಗಾದರೆ ೩ನೇ ಬಾಬನ್ನು ಮತಕ್ಕೆ ಹಾಕುತ್ತೇನೆ.

ಬಾಬು ೩ ಅಂಗೀಕಾರವಾಯಿತು.

## ಬಾಬು ೪

**ಮಾನ್ಯ ಸಭಾಧ್ಯಕ್ಷರು** : ೪ನೇ ಬಾಬನ್ನು ಪ್ರಾರಂಭಿಸೋಣ.

(ಶ್ರೀಯುತರುಗಳಾದ ಕೆ. ಸಂತಾನಮ್, ಎಚ್.ವಿ. ಪಾಟಸ್ಕರ್ ಮತ್ತು ನಜಿರುದ್ದೀನ್ ಅಹ್ಮದ್ ತಮ್ಮ ಹೆಸರಿನಲ್ಲಿದ್ದ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ** : ಮಾನ್ಯರೆ, ನಾನು ಮಂಡಿಸುತ್ತೇನೆ :

"ಬಾಬು ೪ಕ್ಕೆ ಈ ಮುಂದಿನದನ್ನು ಬದಲಿಯಾಗಿ ಸೇರಿಸಬೇಕು :

'ರಕ್ಷಣೆ ಹಾಗೂ ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದ ಕಾರಣಗಳಿಗಾಗಿ ಪ್ರಾಂತ್ಯದಲ್ಲಿ ಪ್ರತಿಬಂಧಕ ಸೆರೆ.'"

ಈಗ ಬಾಬು ೪ ಆಗಿರುವುದು ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಪಟ್ಟಿ ೧ರಲ್ಲಿ ೧ನೇ ಬಾಬಿನ ಭಾಗವಾಗಿದ್ದು ಅದರ ಪಾಠ ಮುಂದಿನಂತಿದೆ: "ರಕ್ಷಣೆ, ವಿದೇಶಾಂಗ ವ್ಯವಹಾರಗಳ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಕಾರಣಗಳಿಗಾಗಿ ಬ್ರಿಟಿಷ್ ಭಾರತದಲ್ಲಿ ಅಥವಾ ಭಾರತೀಯ ರಾಜ್ಯಗಳಿಗೆ ಸಂಬಂಧಿಸಿದಂತೆ ಚಕ್ರವರ್ತಿಯ ಪ್ರಕಾರ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿಬಂಧಕ ಸೆರೆ." ಮಾನ್ಯರೆ, ಈ ನಿರ್ದಿಷ್ಟ ಬಾಬು ಕೇವಲ ಬ್ರಿಟಿಷ್ ಭಾರತೀಯ ಪ್ರಾಂತಗಳಿಗೆ ಸಂಬಂಧಿಸಿದ್ದು, ಒಕ್ಕೂಟ ರಾಜ್ಯಗಳಿಗೆ ಸಂಬಂಧಿಸಿಲ್ಲ ಎಂಬುದು ಗಮನಾರ್ಹ. ಕಾರಣವು ಸ್ಪಷ್ಟವಾಗಿದ್ದು ಭಾರತೀಯ ರಾಜ್ಯಗಳ ಪ್ರದೇಶಗಳಲ್ಲಿನ ಪ್ರತಿಬಂಧಕ ಸೆರೆ ಒಕ್ಕೂಟ ಸರ್ಕಾರದ ಕಳಕಳಿಯಾಗಿದ್ದರೆ ರಾಜ್ಯಗಳು ತುರ್ತು ಸಂದರ್ಭಗಳಲ್ಲಿ ತೊಂದರೆಯನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವುದು ಅಸಾಧ್ಯವಾಗುತ್ತಿತ್ತು. ಪ್ರಸಕ್ತ ಬಾಬು ಈ ಅಧಿಕಾರವನ್ನು ಒಕ್ಕೂಟದ ಎಲ್ಲ ಪ್ರದೇಶಗಳಿಗೆ ವಿಸ್ತರಿಸುವ ಉದ್ದೇಶ ಹೊಂದಿದ್ದು, ಇದರಿಂದ ರಾಜ್ಯಗಳಿಗೆ ಹೆಚ್ಚಿನ ತೊಂದರೆ ಉಂಟಾಗುವುದಲ್ಲದೆ ರಾಜ್ಯಗಳ ಸಹಜ ಆಡಳಿತಕಾರ್ಯದಲ್ಲಿ ಅನಗತ್ಯ ಹಸ್ತಕ್ಷೇಪವಾದಂತಾಗುತ್ತದೆ.

ಮಾನ್ಯರೆ, ಸದನದ ಗಮನಕ್ಕೆ ತರಲು ನಾನು ಉದ್ದೇಶಿಸಿರುವ ಇನ್ನೊಂದು ಅಂಶವೆಂದರೆ ಈ ಬಾಬಿನಲ್ಲಿ ಪ್ರತಿಬಂಧಕ ಸೆರೆಗೆ ಆದೇಶಿಸಬಹುದಾದ ಸನ್ನಿವೇಶಗಳನ್ನು ಅಸ್ಪಷ್ಟವಾಗಿ ವಿವರಿಸಲಾಗಿದೆ. ಸನ್ನಿವೇಶಗಳನ್ನು ಸಾರಾಂಶಗೊಳಿಸಿದ ಪದಗಳು "ರಾಜ್ಯದ ಕಾರಣಗಳಿಗಾಗಿ". ಆದರೆ ಇದರಲ್ಲಿ ಆಕಾಶದ ಅಡಿಯಲ್ಲಿರುವ ಪ್ರತಿಯೊಂದು ಮತ್ತು ಎಲ್ಲವೂ ಸೇರುತ್ತವೆ. ಆದ್ದರಿಂದ ಮಾನ್ಯರೆ, ಯಾವ ನಿರ್ದಿಷ್ಟ ಕಾರಣಗಳು ಎಂಬುದನ್ನು ಸ್ಪಷ್ಟಪಡಿಸಬೇಕು. ರಾಜ್ಯವು ಪ್ರತಿಬಂಧಕ ಸೆರೆಯನ್ನು ಸಮರ್ಥಿಸಿಕೊಳ್ಳಬೇಕು. ಆದ್ದರಿಂದ ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರಗಳ ಸಂಬಂಧದಲ್ಲಿ ಮಾತ್ರ ಅಂಥ ಸೆರೆಗೆ ಆದೇಶ ನೀಡಬೇಕೆ ಹೊರತು ಒಕ್ಕೂಟ ಸರ್ಕಾರವು ವ್ಯವಹರಿಸುವ ಹಲವಾರು ವಿಷಯಗಳ ಸಂಬಂಧದಲ್ಲಿ ಅಲ್ಲ ಎಂಬುದು ನನ್ನ ಸೂಚನೆ.

ನಿನ್ನೆ ನಮಗೆ ಹೇಳಿದಂತೆ, ಪ್ರಸಕ್ತ ವರದಿಯ ೧ನೇ ಪಟ್ಟಿ ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಒಕ್ಕೂಟ ಶಾಸಕಾಂಗದ ಪಟ್ಟಿ ಎರಡೂ ಒಂದೇ ರೀತಿ ಇವೆ. ಈ ನಿರ್ದಿಷ್ಟ ಬಾಬನ್ನು ಈ ಪಟ್ಟಿಯಲ್ಲಿ ಸೇರಿಸಿದ್ದರೂ ಅದು ರಾಜ್ಯಗಳ ಹಿತಕ್ಕೆ ವಿರೋಧಿಯಾಗುವಂತೆ ಬದಲಾಯಿಸಲಾಗಿದೆ. ಹಾಗೂ ಬೇರೆ ವಿಷಯಗಳ ಮೇಲೂ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ವರದಿ ರಚನಕಾರರು ಇದನ್ನು ಇನ್ನೊಮ್ಮೆ ಪರಿಶೀಲಿಸಿ ನನ್ನ ಸಲಹೆಯ ಹಿನ್ನೆಲೆಯಲ್ಲಿ ಬದಲಾವಣೆ ಮಾಡುತ್ತಾರೆಂದು ಆಶಿಸುತ್ತೇನೆ.

**ಶ್ರೀ ಗೋಪಿಕೃಷ್ಣ ವಿಜಯವರ್ಗೀಯ** (ಗ್ವಾಲಿಯರ್ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ಈ ತಿದ್ದುಪಡಿಯು ರಾಜ್ಯಗಳಿಗೆ ಹಿತಕರವಾಗಿಲ್ಲವೆಂಬ ಕಾರಣಕ್ಕಾಗಿ ಅದನ್ನು ಕೈಬಿಡಬೇಕೆಂದು ಈಗ ತಾನೇ ಮಂಡಿಸಿದ ಸ್ನೇಹಿತರನ್ನು ನಾನು ವಿರೋಧಿಸುತ್ತೇನೆ. ಅವರ ವಾದ ಸರಿಯಾಗಿಲ್ಲವೆಂದು ನನ್ನ ಭಾವನೆ. ನಾವು ಒಂದು ಒಕ್ಕೂಟದ ರಚನೆಗೆ ತೊಡಗಿರುವಾಗ ಅದರ ರಕ್ಷಣೆಯ ಕರ್ತವ್ಯಕ್ಕೆ ರಾಜ್ಯಗಳೂ ಬದ್ಧವಾಗಿರುತ್ತವೆ. ನಾವು ಬಲಿಷ್ಠ ಒಕ್ಕೂಟ ಹಾಗೂ ಬಲಶಾಲಿ ಆಡಳಿತ ರಚನೆಯನ್ನು ಕೈಗೊಂಡಾಗ ರಾಜ್ಯಗಳು ಒಕ್ಕೂಟದ ವಿರುದ್ಧವಾಗಿರುವವರನ್ನು ರಕ್ಷಿಸುತ್ತವೆಯೆ? ಪ್ರಾಂತ್ಯಗಳಲ್ಲಿಯಾಗಲೀ, ಅಥವಾ ರಾಜ್ಯಗಳಲ್ಲಿಯಾಗಲೀ, ಒಕ್ಕೂಟಕ್ಕೆ ನಿಷ್ಠರಾಗಿಲ್ಲದವರನ್ನು ಪರೀಕ್ಷಿಸಬೇಕು ಮತ್ತು ಇದೇ ಕಾನೂನನ್ನು ಎಲ್ಲ ಕಡೆ ಅನ್ವಯಸಬೇಕು.

ನಾನು ಒಂದು ರಾಜ್ಯದಿಂದ ಬಂದವನಾಗಿದ್ದು, ನಮ್ಮ ಹಕ್ಕುಗಳನ್ನು ಸಂತೋಷದಿಂದ ಒಕ್ಕೂಟಕ್ಕೆ ಬಿಟ್ಟುಕೊಡುತ್ತೇವೆ ಮತ್ತು ಬಿಟ್ಟುಕೊಡಬೇಕು. ಈ ಬಾಬನ್ನು ಉಳಿಸಿಕೊಳ್ಳಬೇಕು]*

**ಶ್ರೀ ಬಿ.ಎಲ್. ಮಿಟ್ಟರ್** (ಬರೋಡಾ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿಯವರು ಮಂಡಿಸಿದ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ತಿದ್ದುಪಡಿಗೆ ಬೆಂಬಲವಾಗಿ ಅವರು ನೀಡಿದ ಕಾರಣಗಳು ರಾಜ್ಯಗಳನ್ನು ಭಾರತದ ಇತರ ಭಾಗದಿಂದ ಪ್ರತ್ಯೇಕಿಸುವಂತೆ ತೋರುತ್ತದೆ. ಬಾಬು ಇರುವುದು "ರಾಜ್ಯದ ಕಾರಣಗಳಿಗಾಗಿ ಒಕ್ಕೂಟದ ಪ್ರದೇಶಗಳಲ್ಲಿ ಪ್ರತಿಬಂಧಕ ಸೆರೆ." ರಾಜ್ಯಗಳು ಭಾರತ ಡೊಮಿನಿಯನ್‌ನ ಅವಿಭಾಜ್ಯ ಭಾಗವಾದರೆ, ಕ್ರಮ ಜರುಗಿಸುವ ಬಗ್ಗೆ ಭಾರತ ಸರ್ಕಾರಕ್ಕೆ ಅಗತ್ಯವೆನಿಸುವ ಕಾರಣಗಳು ರಾಜ್ಯಗಳಿಗೂ, ಭಾರತದ ಇತರ ಭಾಗಗಳಿಗೂ ಸಮಾನವಾಗಿ ಅನ್ವಯವಾಗಬೇಕು. ಇಡೀ ದೇಶದ ಹಿತದೃಷ್ಟಿಯದಲ್ಲದ ಯಾವುದೇ ಕೃತ್ಯವನ್ನು ರಾಜ್ಯ ಮಾಡುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಇಡೀ ದೇಶದ ಹಿತದ ದೃಷ್ಟಿಯಿಂದ ಒಂದು ಕ್ರಮ ಅಗತ್ಯವೆಂದು ಪರಿಗಣಿಸಿದಾಗ ರಾಜ್ಯಗಳು ಹಾಗೂ ದೇಶದ ಇತರ ಭಾಗಗಳ ಮಧ್ಯೆ ಏಕೆ ಭೇದವನ್ನು ಕಲ್ಪಿಸಬೇಕು? ಒಂದು ರಾಜ್ಯದಲ್ಲಿ ಕಿಡಿಗೇಡಿತನ ಬೆಳೆಯುತ್ತಿದ್ದರೆ, ಇಡೀ ಡೊಮಿನಿಯನ್‌ನ ಹಿತದೃಷ್ಟಿಯಿಂದ ಅಂಥ ವ್ಯಕ್ತಿಯ ಪ್ರತಿಬಂಧಕ ಸೆರೆಯ ಕ್ರಮವನ್ನು ಚಲಾಯಿಸುವುದು ಅಗತ್ಯವಿರುವಾಗ ಕೇಂದ್ರ ಶಾಸಕಾಂಗಕ್ಕೆ ಅಂಥ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟಲು ಅಧಿಕಾರವಿಲ್ಲದಿದ್ದರೆ ಆಗ ಪ್ರತಿಬಂಧಕ ಸೆರೆಯ ಉದ್ದೇಶವೇ ವಿಫಲವಾಗುತ್ತದೆ. ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯ ಸಭಾಧ್ಯಕ್ಷರೆ, ಎಲ್ಲ ರಾಜ್ಯಗಳೂ ಸಾಧ್ಯವಾದಷ್ಟು ಪೂರ್ಣಪ್ರಮಾಣದಲ್ಲಿ ಅಂಗೀಕೃತವಾಗಿ ಅವುಗಳನ್ನು ಪ್ರಾಂತ್ಯಗಳಂತೆಯೇ ಪರಿಗಣಿಸಬೇಕೆಂದು ನಾನು ಆಶಿಸುತ್ತೇನೆ. ಆ ಉದ್ದೇಶಕ್ಕಾಗಿ ನಾವು ಕಾನೂನುಸಮ್ಮತ ರೀತಿಯಲ್ಲಿ ಹಾಗೂ ಸಂವಿಧಾನಾತ್ಮಕ ರೀತಿಯಲ್ಲಿ ಮುಂದುವರಿಯಬೇಕು. ರಾಜ್ಯಗಳನ್ನು ರಕ್ಷಣೆ, ವಿದೇಶ ಸಂಬಂಧಗಳು ಹಾಗೂ ಸಂಪರ್ಕ ಹೀಗೆ ಮೂರು ವಿಶಾಲ ವಿಷಯಗಳಲ್ಲಿ ಅಂಗೀಕರಿಸಲಾಗಿದೆ ಎಂದು ಭಾವಿಸುತ್ತೇನೆ. ಶ್ರೀ ಅಯ್ಯಂಗಾರ್ ಅವರು ಸದನಕ್ಕೆ ತಿಳಿಸಿರುವ ಮೇರೆಗೆ ಅಂಗೀಕಾರದ ಲಿಖಿತಪತ್ರದಲ್ಲಿ ೧೮ ಅಥವಾ ೨೦ ಬಾಬುಗಳಿದ್ದು, ಆ ವಿಷಯಗಳ ಸಂಬಂಧದಲ್ಲಿ ರಾಜ್ಯಗಳೂ ಸಂವಿಧಾನಾತ್ಮಕವಾಗಿ ಅಂಗೀಕಾರ ಪಡೆದಿದ್ದಾರೆ. ಹೀಗಾಗಿ ಆ ವಿಷಯಗಳ ಮಟ್ಟಿಗೆ ಮಾತ್ರ ಒಕ್ಕೂಟಕ್ಕೆ ರಾಜ್ಯಗಳ ಮೇಲೆ ಅಧಿಕಾರವ್ಯಾಪ್ತಿ ಇರುತ್ತದೆ. ಅದರಾಚೆಗೆ ಒಕ್ಕೂಟವು ರಾಜ್ಯಗಳ ಮೇಲೆ ಅಧಿಕಾರವನ್ನು ವಿಸ್ತರಿಸುವುದು ಸಂವಿಧಾನಾತ್ಮಕವಾಗಿ ಸರಿಯಲ್ಲ ಮತ್ತು ಹಾಗೆ ಮಾಡುವುದೂ ಸಾಧ್ಯವಿಲ್ಲ. ಆದ್ದರಿಂದ ರಾಜ್ಯಗಳು ಪೂರ್ಣ ಅಂಗೀಕಾರ ಪಡೆಯಬೇಕು

ಮತ್ತು ಅದೂ ಮಾತುಕತೆಯ ಮೂಲಕ ಹಾಗೂ ಸ್ವಇಚ್ಛೆಯಿಂದ ಜರುಗಬೇಕು. ಇಂಥ ಪೂರ್ಣ ಅಂಗೀಕಾರವು ಇಡೀ ದೇಶದ ಸುರಕ್ಷತೆ ಹಾಗೂ ಒಳಿತಿನ ದೃಷ್ಟಿಯಿಂದ ದೇಶ ಹಾಗೂ ರಾಜ್ಯಗಳ ನಡುವಣ ಪರಸ್ಪರ ಅರಿವು, ಹಿತ ಹಾಗೂ ಅವಲಂಬನೆಯ ಮೂಲಕ ಆಗಬೇಕು. ಆದ್ದರಿಂದ ಈ ಪರಿಣಾಮಗಳ ಕಾರಣಕ್ಕಾಗಿ ಬಾಬು ಸಂ. ೪ನ್ನು ಒಪ್ಪಿಕೊಳ್ಳುವುದು ನನಗೆ ಕಷ್ಟವೆನಿಸುತ್ತದೆ. ಆದ್ದರಿಂದ ಸದನದಲ್ಲಿರುವ ಸಂವಿಧಾನ ತಜ್ಞರ ತಂಡವು ವಿಷಯವನ್ನು ಸಂವಿಧಾನ ದೃಷ್ಟಿಕೋನದಿಂದ ನಿಷ್ಪಕ್ಷಪಾತವಾಗಿ ನೋಡಿ ತಮ್ಮ ನಿರ್ಣಯ ತಿಳಿಸಬೇಕೆಂದು ಕೋರುತ್ತೇನೆ. ಯಾವುದೋ ಒಂದು ಭಾರತೀಯ ರಾಜ್ಯದಲ್ಲಿ ಒಂದು ತೊಂದರೆ ತಲೆದೋರಿ ಆ ಬಗ್ಗೆ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಲು ಒಕ್ಕೂಟಕ್ಕೆ ಪೂರ್ಣ ಅಧಿಕಾರವಿರಬೇಕಾಗುತ್ತದೆ ಎಂಬ ತೊಂದರೆಯನ್ನು ಎತ್ತಿ ತೋರಿಸಲಾಗಿದ್ದು, ಹಾಗೆ ಕ್ರಮ ಕೈಗೊಳ್ಳಲು, ರಾಜ್ಯಗಳು ಯಾವ ಷರತ್ತುಗಳ ಮೇಲೆ ಅಂಗೀಕಾರ ಪಡೆದಿವೆಯೋ, ಆ ಷರತ್ತುಗಳಿಗೆ ವಿರುದ್ಧವಾಗಿ ಕ್ರಮ ಜರುಗಿಸಲಾಗದು. ರಕ್ಷಣಾ ಉದ್ದೇಶಗಳಾಗಿದ್ದರೆ ಅಥವಾ ರಾಜ್ಯಗಳು ಅಂಗೀಕಾರ ಪಡೆದ ಉದ್ದೇಶಗಳಾಗಿದ್ದರೆ ವಿರೋಧ ಉಂಟಾಗುವುದಿಲ್ಲ. ಹೀಗೆ ಸೂಚಿಸಲಾದ ರೀತಿಯಲ್ಲಿ ಕ್ರಮ ಕೈಗೊಂಡಿದ್ದೇವೆ ಎಂದು ನಾವು ಸಮರ್ಥಿಸಿಕೊಂಡರೂ ಅದು ಸಾಂವಿಧಾನಿಕ ಅಧಿಕಾರದ ಆಚೆ ಎನಿಸುತ್ತದೆ. ಅದು ಸಾಂವಿಧಾನಿಕ ಔಚಿತ್ಯ ಎನಿಸುವುದಿಲ್ಲ. ಈ ಬಗ್ಗೆ ಗೌರವಾನ್ವಿತ ವರದಿ ಮಂಡನೆಕಾರರು ಪರಿಣಾಮಕಾರಿಯಾಗಿ ಪರಿಶೀಲಿಸುತ್ತಾರೆ ಎಂದು ಆಶಿಸುತ್ತೇನೆ.

ನಾನು ಕಂಡ ಇನ್ನೊಂದು ಚಿಕ್ಕ ತೊಂದರೆ ಎಂದರೆ ಈ ಬಾಬಿನ ಕೊನೆಯಲ್ಲಿರುವ ಪದ "ರಾಜ್ಯ". ಈ ಬಾಬನ್ನು ಭಾರತ ಸರ್ಕಾರದ ಅಧಿನಿಯಮದಲ್ಲಿನ ಪಟ್ಟಿ ೧ರ ಬಾಬು ೧ರಿಂದ ಎತ್ತಿಕೊಳ್ಳಲಾಗಿದೆ. ಈ ಅಭಿವ್ಯಕ್ತಿಯನ್ನು ಭಾರತ ಸರ್ಕಾರದ ಅಧಿನಿಯಮದ ಆ ಬಾಬಿನಿಂದ ಅನಾಮತ್ತಾಗಿ ಎತ್ತಿಕೊಳ್ಳಲಾಗಿದೆ. ಆದರೆ ಈ ವರದಿಯಲ್ಲಿ ರಾಜ್ಯ ಎಂಬ ಪದವನ್ನು ಬೇರೆ ಅರ್ಥದಲ್ಲಿ ಎಂದರೆ ಭಾರತೀಯ ರಾಜ್ಯ ಎಂಬರ್ಥದಲ್ಲಿ ಬಳಸಿದ್ದೇವೆ. ಆದ್ದರಿಂದ ಗೊಂದಲಕ್ಕೆ ಅವಕಾಶವಿರಬಹುದು. ಒಂದೇ ತಾಂತ್ರಿಕ ಸ್ವರೂಪದ ಪದವನ್ನು ಎರಡು ಬೇರೆ ಅರ್ಥಗಳಲ್ಲಿ ಬಳಸುವುದನ್ನು ತಡೆಯುವುದು ಒಳಿತು. ಇದರಿಂದ ಯಾವುದೇ ಅಪಾರ್ಥ ಆಗದಿದ್ದರೂ, ಗೊಂದಲವನ್ನು ತಡೆಯಲು ಕರಡು ರಚನಾಸಮಿತಿಯು ಬೇರೆ ಸೂಕ್ತಪದವನ್ನು ಹುಡುಕುವ ಬಗ್ಗೆ ಪರಿಶೀಲಿಸಬೇಕು. ಇಲ್ಲಿ ರಾಜ್ಯ ಎಂದರೆ ಭಾರತೀಯ ರಾಜ್ಯ. ಒಟ್ಟಾರೆಯಾಗಿ ಇಡೀ ಬಾಬನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಅನುಕೂಲತೆ ಅಥವಾ ಯುಕ್ತತೆಯ ಕಾರಣದಿಂದ ಮಾತ್ರವೇ ಮುಂದುವರಿಯದೇ ನ್ಯಾಯ ಹಾಗೂ ವ್ಯವಹಾರಜ್ಞಾನದ ಬಲದಿಂದ ಮುಂದುವರಿಯಬೇಕು.

**ಶ್ರೀ ಹುಸೇನ್ ಇಮಾಮ್ :** ಮಾನ್ಯ ಸಭಾಧ್ಯಕ್ಷರೆ, ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಏಕೆಂದರೆ ಇದು ಒಕ್ಕೂಟದ ಘಟಕಗಳ ಮಧ್ಯೆ ಭೇದ ಕಲ್ಪಿಸುತ್ತದೆ. ಪ್ರಾಂತ್ಯಗಳು ಒಕ್ಕೂಟದ ಅಧಿಕಾರವ್ಯಾಪ್ತಿಗೆ ಒಳಪಡಬೇಕು, ರಾಜ್ಯಗಳು ಹಾಗೆ ಒಳಪಡಬಾರದು ಎಂಬುದು ಆ ಭೇದಭಾವ. ಈ ಸೂತ್ರ ನನಗೆ ಸಮ್ಮತವಿಲ್ಲ. ಆದರೆ ಈ ಬಾಬು ನಮ್ಮ ಮೂಲಭೂತ ಹಕ್ಕುಗಳಿಗೆ ವಿರೋಧಿಯೇ ಎಂದು ನನಗೆ ಸಂಶಯ. ಪ್ರತಿಬಂಧಕ ಸೆರೆ ಎಂಬುದು ವಿಚಾರಣೆ ಇಲ್ಲದೆ ಮನಬಂದಂತೆ ಮಾಡುವ ಬಂಧನ. ಒಬ್ಬ ವ್ಯಕ್ತಿಯನ್ನು ವಿಚಾರಣೆಗೊಳಪಡಿಸಬೇಕು ಎಂದರೆ ಅವನಿಗೆ ಸಾಮಾನ್ಯ ಕಾನೂನು ಅನ್ವಯವಾಗುತ್ತದೆ. ಆ ಉದ್ದೇಶಕ್ಕೆ ನಿರ್ದಿಷ್ಟ ಉಪಬಂಧದ ಅಗತ್ಯವಿಲ್ಲ. ನಾವು ೧೮೧೮ರ ನಿಯಮ ೩ನ್ನು ಪುನಃ ಸ್ಥಾಪಿಸಲು ಹಾಗೂ ಆ ವಿಷಯದಲ್ಲಿ ತೆಗೆದುಕೊಂಡ ಕ್ರಮಗಳನ್ನು ಕೈಗೊಳ್ಳಲು ಯತ್ನಿಸುತ್ತಿದ್ದೇವೆ ಎಂದು ನನಗೆ ತೋರುತ್ತದೆ. ಆಧುನಿಕ ಪ್ರಜಾಸತ್ತೆಯಲ್ಲಿ ದೇಶದ ಶಾಂತಿ-ನೆಮ್ಮದಿಗೆ ಭಂಗಬಂದ ಸಂದರ್ಭಗಳಲ್ಲಿ ಇಂಥ ಅಧಿಕಾರಗಳನ್ನು ನೀಡಲಾಗುತ್ತದೆ. ಯೂರೋಪ್ ಮತ್ತು ಅಮೆರಿಕದ ದೇಶಗಳಲ್ಲಿಯ ಯುದ್ಧ ಸಮಯದಲ್ಲಿ ಮಾತ್ರ ಇಂಥ ನಿಯಮಗಳನ್ನು ಮಾಡಲಾಯಿತು. ಶಾಂತಿ ಸಮಯದಲ್ಲಿ ಒಬ್ಬ ವ್ಯಕ್ತಿ ಬಹಿರಂಗವಾಗಿ ಯಾವುದೇ ಅಪರಾಧವನ್ನು ಎಸಗಿರದಿದ್ದರೆ ಆತನನ್ನು ಬಂಧಿಸಲು ಯಾವುದೇ ರಾಜ್ಯದ ಕಾರಣ ನಿಲ್ಲುವುದಿಲ್ಲ. ಈ ಅಧಿಕಾರವನ್ನು

ನೀಡಬೇಕಾದರೆ, ಪ್ರತಿಬಂಧಕ ಸೆರೆಯ ಹಕ್ಕು ಕೇಂದ್ರಕ್ಕೆ ಮಾತ್ರ ಇದ್ದು ಅದನ್ನು ಯುದ್ಧಸಮಯದಲ್ಲಿ ಹಾಗೂ ದೇಶದ ಶಾಂತಿ ಹಾಗೂ ನೆಮ್ಮದಿಗೆ ಭಂಗಬಂದ ಸಂದರ್ಭದಲ್ಲಿ ಮಾತ್ರ ಬಳಸುವಂತಿರಬೇಕು. ಸಾಮಾನ್ಯ ಸಮಯದಲ್ಲಿ ಇಂಥ ಅಧಿಕಾರದ ದುರ್ಬಳಕೆಯಾಗುತ್ತದೆ. ಮಾನವಸ್ವಭಾವ ಹೀಗಿರುವುದರಿಂದ ಈ ಅಧಿಕಾರದ ದುರ್ಬಳಕೆಯನ್ನು ತಡೆಯಲು ಒಂದು ವಿಧಾನವನ್ನು ಕಲ್ಪಿಸುವುದು ಅಗತ್ಯ. ಅಧಿಕಾರದೊಂದಿಗೆ ಮದ ಬರುತ್ತದೆ. ಹಾಗೂ ಶಾಂತಿ ಕಾಲದಲ್ಲಿ ಈ ಅಧಿಕಾರದ ದುರ್ಬಳಕೆಯಾಗುವುದಿಲ್ಲ ಎಂದು ಹೇಳಲಾಗದು. ಆದ್ದರಿಂದ ಅದನ್ನು ಕೈಬಿಡದೆ, ಅದರ ದುರುಪಯೋಗವಾಗದಂತೆ ಸರಿಯಾದ ಮುನ್ನೆಚ್ಚರಿಕೆ ವಹಿಸುವಂತೆ ವಿವರಣೆ ನೀಡಬೇಕು ಎಂಬುದು ನನ್ನ ಸಲಹೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಬಾಬು ಸಂ. ೪ "ರಾಜ್ಯದ ಕಾರಣಗಳಿಗಾಗಿ ಒಕ್ಕೂಟದ ಪ್ರದೇಶಗಳೊಳಗೆ ಪ್ರತಿಬಂಧಕ ಸೆರೆ" ಎಂಬುದು ಮಹತ್ತ್ವದ ಪ್ರಶ್ನೆಯಾಗಿದ್ದು ಮಹತ್ತ್ವಪೂರ್ಣ ತತ್ತ್ವವನ್ನೊಳಗೊಂಡಿದೆ. ಈವರೆಗೆ ಗೌರವಾನ್ವಿತ ಸ್ನೇಹಿತರಾದ ಶ್ರೀ ಹುಸೇನ್ ಇಮಾಮ್ ಅವರ ಭಾಷಣವನ್ನು ಗಮನವಿಟ್ಟು ಕೇಳಿದ್ದೇನೆ. ಹಿಂದೆ ಯಾವುದೇ ರೂಪದ ಪ್ರತಿಬಂಧಕ ಸೆರೆಯನ್ನು ವಿರೋಧಿಸಿದವರ ಪೈಕಿ ನಾನೂ ಒಬ್ಬ ಎಂದು ಅವರಿಗೆ ನಾನು ತಿಳಿಸಬಯಸುತ್ತೇನೆ. ಈ ಏರ್ಪಾಡು ದುರ್ಬಳಕೆಯಾಗಬಹುದು ಮತ್ತು ದಮನಕಾರಿ ವರ್ತನೆಗೆ ದಾರಿಯಾಗಬಹುದು ಎಂಬ ಹುಸೇನ್ ಇಮಾಮ್ ಅವರ ಸಂದೇಹ ಸರಿಯಾಗಿದೆ.

ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ ಎಂದು ನಾನು ಅವರಿಗೆ ತಿಳಿಸುತ್ತೇನೆ. ನಾವು ನಮ್ಮದೇ ಆದ ಸಂಪೂರ್ಣ ಸ್ವತಂತ್ರ ದೇಶವನ್ನು ಕಟ್ಟಲು ಹೊರಟಿದ್ದೇವೆ. ಹಾಗಾಗಿ ಕೇಂದ್ರ ಸರ್ಕಾರವು, ತಾನು ಬಳಸುವಂಥ ಕೆಲವು ಅಧಿಕಾರಗಳನ್ನು ಹೊಂದಿರಬೇಕಾಗುತ್ತದೆ. ಚಿಕ್ಕ ಪುಟ್ಟ ಕಾರಣಗಳಿಗಾಗಿ ಅಲ್ಲದಿದ್ದರೂ ದೇಶದ ಹಿತಕ್ಕಾಗಿ ಕೆಲವು ಅಧಿಕಾರಗಳಿರಬೇಕಾಗುತ್ತದೆ. ಈಗ ಮಂಡಿಸಲಾಗಿರುವ ತಿದ್ದುಪಡಿಯಿಂದಾಗಿ, ಬಾಬು ಸಂ.೪ರಿಂದ ಪ್ರದತ್ತವಾಗುವ ಅಧಿಕಾರಗಳ ವ್ಯಾಪ್ತಿಗೆ ಅನುಚಿತ ತಡೆಯುಂಟಾಗುತ್ತದೆ.

ಶ್ರೀ ಹುಸೇನ್ ಇಮಾಮ್ ೧೮೧೮ರ ನಿಯಮ ೩ನ್ನು ಉಲ್ಲೇಖಿಸಿದ್ದಾರೆ. ಬ್ರಿಟಿಷರು ಭಾರತಕ್ಕೆ ಮೊದಲಬಾರಿ ಬಂದು ಇಲ್ಲಿ ತಮ್ಮ ಸರ್ಕಾರವನ್ನು ಸ್ಥಾಪಿಸಲು ಬಯಸಿದಾಗ, ತಮ್ಮ ವೃತ್ತಿಯ ಮೊದಲ ಹಂತದಲ್ಲಿ ಒಂದು ಶಾಸನಾತ್ಮಕ ಉಪಬಂಧ ಮಾಡಬೇಕೆಂದು ಹಾಗೂ ದೇಶಕ್ಕೆ ತೊಂದರೆಯುಂಟುಮಾಡುವ ಕಿಡಿಗೇಡಿಗಳನ್ನು ತಡೆಯಲು ಕೆಲವು ಅಧಿಕಾರಗಳನ್ನು ಪಡೆಯಲು ಬಯಸಿದರು ಎಂಬುದು ಅವರಿಗೆ ಅರಿವಿದೆ ಎಂದು ನನಗೆ ಗೊತ್ತಿದೆ. ಆದ್ದರಿಂದ ಅವರ ದೃಷ್ಟಿಯಿಂದ ಮತ್ತು ಈ ದೇಶದಲ್ಲಿನ ಬ್ರಿಟಿಷ್ ಆಳ್ವಿಕೆಯ ಪ್ರಾರಂಭದ ದಿನಗಳಲ್ಲಿ ಕಿಡಿಗೇಡಿಗಳೊಂದಿಗೆ ವ್ಯವಹರಿಸಲು ಕೆಲವು ಕಾರ್ಯಕಾರಿ ಅಧಿಕಾರಗಳನ್ನು ನೀಡಲು, ೧೮೧೮ರ ನಿಯಮ ೩ರಂಥ ಒಂದು ಶಾಸನಾತ್ಮಕ ಉಪಬಂಧ ಅಗತ್ಯವೆಂದು ಭಾವಿಸಲಾಯಿತು. ಹೊಸ ಸಂವಿಧಾನದಡಿ ನಾವು ರಚಿಸಲು ಹೊರಟಿರುವ ಕೇಂದ್ರ ಸರ್ಕಾರದಿಂದ ಅಧಿಕಾರದ ದುರುಪಯೋಗವಾಗುತ್ತದೆಂದು ಅವರಿಗೇಕೆ ಸಂದೇಹ? ಯಾವುದೇ ಏಜೆನ್ಸಿ, ವ್ಯವಸ್ಥೆ ಪರಿಪೂರ್ಣವಲ್ಲವೆಂದು ನನಗೆ ಗೊತ್ತು, ಕೇಂದ್ರ ಸರ್ಕಾರಕ್ಕೆ, ದೇಶದ ಹಿತಕ್ಕಾಗಿ ಚಲಾಯಿಸುವುದಕ್ಕಾಗಿಯೇ ಕೆಲವು ತುರ್ತು ಅಧಿಕಾರಗಳನ್ನು ನೀಡಬೇಕು. ನನ್ನ ಮಿತ್ರರ ಸಂದೇಹದಂತೆ ಅಧಿಕಾರದ ದುರ್ಬಳಕೆಯಾದರೆ? ಏಕೆಂದರೆ ಬ್ರಿಟಿಷ್ ಆಳಿಕೆಯ ಅನಂತರದ ಅವಧಿಯಲ್ಲಿ ೧೮೧೮ರ ನಿಯಮ ೩ರ ದುರ್ಬಳಕೆಯಾಯಿತು. ನನಗೆ ತಿಳಿದಿರುವಂತೆ ಬಹಳ ಜನ ಗಡಿಪಾರಾದರು, ಪ್ರಜಾಸಮುದಾಯದ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ಆದರೆ ಈಗ ನಮ್ಮದೇ ದೇಶ, ಜನರಿಂದ ಚುನಾಯಿತವಾದ ನಮ್ಮದೇ ಸರ್ಕಾರ, ಜನರಿಂದ ಚುನಾಯಿತರಾದ ಅಧ್ಯಕ್ಷರು, ಜನರಿಂದ ಜನರ ಸರ್ಕಾರ. ಅಲ್ಲದೇ ಮೂಲಭೂತ ಹಕ್ಕುಗಳಲ್ಲಿ ಹೇಬಿಯಸ್ ಕಾರ್ಪಸ್‌ನಂಥ ಪರಿಹಾರ ನೀಡಲಾಗಿದೆ. ಬ್ರಿಟಿಷ್ ಆಳಿಕೆಯಲ್ಲಿ ಆದಂತೆ ಪ್ರಜಾಸಮುದಾಯದ ಸ್ವಾತಂತ್ರ್ಯಕ್ಕೆ ಅಪಾಯವಿಲ್ಲ, ನಿರ್ದಯವಾಗಿ, ಕಳಕಳಿಯಿಲ್ಲದೇ

ಹತ್ತಿಕ್ಕಲಾಗುವುದಿಲ್ಲ. ಉದಾಹರಣೆಗೆ: ಒಕ್ಕೂಟವಾದ ಯಾವುದೇ ಭಾಗದಲ್ಲಿ, ಯಾವುದೇ ಪ್ರದೇಶದಲ್ಲಿ, ಪ್ರಾಂತ್ಯದಲ್ಲಲ್ಲದೇ ಮೂಲರಾಜ್ಯದಲ್ಲಿ ಸರ್ಕಾರಕ್ಕೆ ನಂಬಲಾರ್ಹವಾದ ಮಾಹಿತಿಯಿಂದ, ಕಿಡಿಗೇಡಿತನಕ್ಕಿಳಿದುದು ತಿಳಿದುಬಂದರೆ ಅದು ದೇಶದ ಹಿತಕ್ಕೆ ಅಡ್ಡಿ, ಅಷ್ಟೇ ಅಲ್ಲ ಶಾಂತಿಗೂ ಅಡ್ಡಿ. ಕಿಡಿಗೇಡಿಗಳನ್ನು ಕಾನೂನಿನ ಹಿಡಿತಕ್ಕೆ ತರುವಂಥ ಯಾವುದೇ ಪ್ರತ್ಯಕ್ಷ ಕುಕೃತ್ಯ ಆಗಿಲ್ಲವೆಂದು ಸರ್ಕಾರ ಮುಂದವರಿಯದೇ ಸುಮ್ಮನಿರಲಾದೀತೇ? ದೇಶದ ಯಾವುದೇ ಪ್ರದೇಶದಲ್ಲಿ ಕೆಲ ದೇಶದ್ರೋಹಿಗಳು ಗುಪ್ತವಾಗಿ ಕೆಲಸಮಾಡುತ್ತಿರಬಹುದು, ಅವರನ್ನು ವಿದೇಶಿ ಸರ್ಕಾರ ನೇಮಿಸಿರಬಹುದು ಅಥವಾ ದೇಶದಲ್ಲೇ ಇರುವ ಪ್ರತಿಸ್ಪರ್ಧಿ ಸರ್ಕಾರ ನೇಮಿಸಿರಬಹುದು. ಆದ್ದರಿಂದ ಈಗಿನ ಸ್ಥಿತಿಯಲ್ಲಿ ಒಂದು ಸ್ವತಂತ್ರರಾಷ್ಟ್ರದ ಭೌಗೋಳಿಕ ಗಡಿಗಳೊಳಗೆ, ಕೇಂದ್ರ ಸರ್ಕಾರವು ಅಗತ್ಯ ಕಂಡುಬಂದಾಗ ಚಲಾಯಿಸಲು ಸಂವಿಧಾನದಡಿ ಅಂಥ ಅಧಿಕಾರಗಳನ್ನು ಕಲ್ಪಿಸಬೇಕು. ಒಂದು ರಾಜ್ಯದ ವಿರುದ್ಧ ಇನ್ನೊಂದು ರಾಜ್ಯ ಸಂಚು ಮಾಡುತ್ತಿದ್ದರೆ, ಬಹಿರಂಗ ಚಟುವಟಿಕೆಗಳಿಲ್ಲದಿದ್ದರೂ, ಅದನ್ನು ಕಾನೂನಿನ ಹಿಡಿತದಲ್ಲಿ ತರಬಹುದು. ಭಾರತ ಸರ್ಕಾರಕ್ಕೆ ಅಂಥ ಚಟುವಟಿಕೆಗಳಿಂದ ಭಾರತದ ಎರಡು ಭಾಗಗಳ ಶಾಂತಿಗೆ ಧಕ್ಕೆ ಉಂಟಾಗುವುದೆಂದು ನಂಬಲರ್ಹವಾದ ಮಾಹಿತಿ ದೊರೆತರೆ ಕೇಂದ್ರ ಸರ್ಕಾರವು ಮಧ್ಯೆ ಪ್ರವೇಶಿಸಿ ಅಂಥ ಕಿಡಿಗೇಡಿತನವನ್ನು ನಿಲ್ಲಿಸುವ ಅಧಿಕಾರ ಹೊಂದಿರಬೇಕು. ಆದ್ದರಿಂದ ಪ್ರಜಾ ಸಮುದಾಯದ ಸ್ವಾತಂತ್ರ್ಯಕ್ಕೆ ಅಪಾಯವೊದಗಿದೆ ಎಂಬುದೊಂದೇ ಅಲ್ಲ, ದೇಶಕ್ಕೆ ಅಪಾಯ. ಎಲ್ಲದಕ್ಕಿಂತ ಹೆಚ್ಚಾಗಿ ದೇಶಕ್ಕೆ ಪ್ರಾಧಾನ್ಯ. ಆದ್ದರಿಂದ ನಾನು ಈ ಪ್ರಸ್ತಾವವನ್ನು ವಿರೋಧಿಸುತ್ತೇನೆ ಮತ್ತು ಒಕ್ಕೂಟ ಪಟ್ಟಿಯಲ್ಲಿ ೪ನೇ ಬಾಬಿನ ಸೇರ್ಪಡೆಯ ಮೂಲ ಪ್ರಸ್ತಾವವನ್ನು ಬೆಂಬಲಿಸುತ್ತೇನೆ.

**ಶ್ರೀ ತಾಜಮಲ್ ಹುಸೇನ್ :** ಮಾನ್ಯ ಸಭಾಧ್ಯಕ್ಷರೆ, ನಾನು ಬಾಬು ೪ನ್ನು ಬೆಂಬಲಿಸುತ್ತೇನೆ. ತಿದ್ದುಪಡಿಯನ್ನು ವಿರೋಧಿಸುತ್ತೇನೆ. ರಾಜ್ಯದ ಕಾರಣಕ್ಕಾಗಿ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಬಂಧನಕ್ಕೆ ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡಬೇಕು. ಒಂದು ಪ್ರಾಂತ್ಯ ಅಥವಾ ರಾಜ್ಯದಲ್ಲಿ ಒಂದು ವ್ಯಕ್ತಿಗಳ ಸಮೂಹವು ವಿದೇಶಿ ವೈರಿಶಕ್ತಿಯೊಂದಿಗೆ ಸಂಚು ನಡೆಸುವ ಪ್ರಯುಕ್ತ ವಿದೇಶಿ ವೈರಿಯು ಭಾರತವನ್ನಾಕ್ರಮಿಸಿದರೆ ನಾವೇನು ಮಾಡಬೇಕು? ಆದ್ದರಿಂದ ಅಂಥ ವ್ಯಕ್ತಿ ಸಮೂಹವನ್ನು ತತ್‌ಕ್ಷಣವೇ ಬಂಧಿಸಿ ಇನ್ನಷ್ಟು ಅಪಾಯ ಮತ್ತು ಕೇಡು ಮಾಡುವುದರಿಂದ ಅದನ್ನು ತಡೆಯಲು ಕೇಂದ್ರ ಶಾಸಕಾಂಗಕ್ಕೆ ಅಧಿಕಾರವಿರಬೇಕು. ಬಹಿರಂಗ ವಿಚಾರಣೆ ಇರಬಾರದು. ಬಹಿರಂಗ ವಿಚಾರಣೆ ಇದ್ದರೆ ಏನಾಗುತ್ತದೆ? ರಾಜ್ಯದ ರಹಸ್ಯಗಳು, ಭಾರತದ ರಕ್ಷಣೆಯ ದೌರ್ಬಲ್ಯಗಳು ಬಹಿರಂಗವಾಗುತ್ತವೆ. ನಾವು ಯಾವ ವಿಷಯದಲ್ಲಿ ದುರ್ಬಲರು ಎಂಬುದು ವೈರಿಗೆ ತಿಳಿಯಬಹುದು. ಮಾನ್ಯರೆ, ನಿಮಗೆ ಕಾನೂನಿನ ತಾಂತ್ರಿಕತೆ ಗೊತ್ತಿದೆ. ಅಪರಾಧಮಾಡಿದ ಆರೋಪಿಗಳು ದೋಷಮುಕ್ತರಾಗಬಹುದು. ಆದ್ದರಿಂದ ಬಾಬು ೪ನ್ನು ಅದರ ಮೂಲ ರೂಪದಲ್ಲಿ ಉಳಿಸಿಕೊಳ್ಳಬೇಕೆಂದು ಬೆಂಬಲಿಸುತ್ತೇನೆ ಮತ್ತು ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ಈ ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸಿರುವುದಕ್ಕೆ ಸಮರ್ಥನೆ ಎಂದರೆ ಒಕ್ಕೂಟ ಶಾಸಕಾಂಗವು ಈ ಬಾಬಿನ ಸಂಬಂಧದಲ್ಲಿ ಶಾಸನವನ್ನು ಮಾಡುವುದಕ್ಕಾಗಿ ಈ ಬಾಬನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ತೋರಿಸುತ್ತಿದ್ದೇನೆ. ಆಕ್ಷೇಪಣೆಗಳಿಗೆ ಈ ಚರ್ಚೆಯಲ್ಲಿ ಎಡೆ ದೊರೆಯಲಿಲ್ಲ ಎಂಬುದು ನಮಗೆ ತಿಳಿದಿದೆ. ಪ್ರತಿಬಂಧಕ ಸೆರೆ ಎಂಬುದು ಒಂದು ಸ್ವತಂತ್ರ ದೇಶ ಹಾಗೂ ಅದರ ಜನತೆಗೆ ಹೇಯವೆನಿಸುವ ವಿಷಯವಾಗಿದ್ದು, ಶ್ರೀ ಹುಸೇನ್ ಇಮಾಮ್ ಸೂಚಿಸಿರುವಂತೆ ಹೊಸದಾಗಿ ಅಧಿಕಾರಕ್ಕೆ ಬರುವ ಸರ್ಕಾರಕ್ಕೆ ಅಧಿಕಾರದ ಮತ್ತೇರಬಹುದು. ಅದು ಒಂದು ಪಕ್ಷದ ಸರ್ಕಾರವಾಗಿದ್ದರೆ, ಸರ್ವ ವಿಧದಲ್ಲೂ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಉತ್ಸಾಹದಲ್ಲಿ ಜನರ ಮೂಲಭೂತ ಹಕ್ಕುಗಳನ್ನು ಮೀರಬಹುದು, ಆದರೆ ವಿಚಾರಣೆ ಇಲ್ಲದೆ ಅವರು ಸ್ವಾತಂತ್ರ್ಯವಂಚಿತರಾಗಬಾರದು ಎಂದು ಸದಸ್ಯರು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ.

ಶ್ರೀ ಹುಸೇನ್ ಇಮಾಮ್ ಅವರಿಗೆ, ಕೇಂದ್ರ ಶಾಸಕಾಂಗಕ್ಕೆ ಈ ವಿಷಯದಲ್ಲಿ ಅಧಿಕಾರ ನೀಡುವ ಬಗ್ಗೆ ವಿರೋಧವಿರುವಂತೆ ತೋರುವುದಿಲ್ಲ. ಆದರೆ ಅವರ ಮಾತಿನಲ್ಲಿ ಎಚ್ಚರಿಕೆಯ ಸೂಚನೆ ಇದೆ.

ಮಾನ್ಯರೆ, ಈಗ, ಈ ಬಾಬನ್ನು ಈ ಪಟ್ಟಿಯಲ್ಲಿರಿಸಿರುವ ಕಾರಣಕ್ಕಾಗಿ ಕೇಂದ್ರ ಶಾಸಕಾಂಗವು ಭವಿಷ್ಯದಲ್ಲಿ ಅನಗತ್ಯವಾಗಿ ಒಂದು ಶಾಸನವನ್ನು ರಚಿಸಿ ದುರ್ಲಾಭ ಪಡೆಯದಂತೆ ನಾವು ನೋಡಿಕೊಳ್ಳಬೇಕಾದುದು ಅಗತ್ಯ. ಒಬ್ಬ ಸದಸ್ಯರು ಶ್ರೀ ಹುಸೇನ್ ಇಮಾಮರ ಭಾಷಣವನ್ನು ಟೀಕಿಸಿದ್ದು ಸರಿಯಲ್ಲ. ಅವರು ಕೇವಲ ಎಚ್ಚರಿಕೆಯ ಮಾತು ಹೇಳಿದರು. ಅಲ್ಲದೇ ಹೇಬಿಯಸ್ ಕಾರ್ಪಸ್ ಉಪಬಂಧವಿದ್ದು ಅದು ಜನರನ್ನು ಅನಗತ್ಯವಾದ ಹಾಗೂ ಕಾನೂನುಬಾಹಿರ ಕಿರುಕುಳದಿಂದ ರಕ್ಷಿಸುತ್ತದೆ ಎಂದು ಹೇಳುವುದು ಸರಿಯಲ್ಲ. ೧೮೧೮ರ ನಿಯಮದಂಥ ಶಾಸನವನ್ನು ಮಾಡಿದ್ದರೆ ಹೇಬಿಯಸ್ ಕಾರ್ಪಸ್‌ಗೆ ಸ್ಥಾನವೇ ಇರುತ್ತಿರಲಿಲ್ಲ. ಆದ್ದರಿಂದ ಹೇಬಿಯಸ್ ಕಾರ್ಪಸ್ ಉಪಬಂಧದಿಂದ ನಮಗೆ ಯಾವುದೇ ರೀತಿಯಲ್ಲಿ ಅನುಕೂಲವಾಗುವುದಿಲ್ಲ. ಯುದ್ಧ ಅಥವಾ ನೆಮ್ಮದಿಗೆ ಭಂಗ ತರುವ ಕೆಲವು ಸನ್ನಿವೇಶಗಳಲ್ಲಿ ವ್ಯಕ್ತಿಗಳನ್ನು ಬಂಧಿಸಲು ರಾಜ್ಯಕ್ಕೆ ಅಧಿಕಾರವಿರಬೇಕು ಎಂಬುದು ನನ್ನ ಮನವಿ. ಸಕ್ಷಮ ನ್ಯಾಯಾಲಯದಿಂದ ವಿಚಾರಣೆಯಾಗಿ ಆರೋಪಿ ಎಂದು ಘೋಷಿಸಲಾಗುವ ಮೂಲಭೂತ ಹಕ್ಕು ಹಾಗೂ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಶಾಸನದಲ್ಲಿ ಉಪಬಂಧ ಕಲ್ಪಿಸಬೇಕಾದುದು ಅಗತ್ಯ. ಈ ಬಾಬನ್ನು ಸೇರಿಸುವ ಬಗ್ಗೆ ನನ್ನ ವಿರೋಧವಿಲ್ಲ. ಶ್ರೀ ಹುಸೇನ್ ಇಮಾಮ್‌ರೊಂದಿಗೆ ನಾನೂ, ಭವಿಷ್ಯದಲ್ಲಿ ಈ ಬಾಬಿಗೆ ಸಂಬಂಧಿಸಿದಂತೆ ಯಾವುದೇ ಶಾಸನಮಾಡಿದಾಗ ಸ್ವತಂತ್ರ ಭಾರತದ ಭಾರತೀಯರು ತಮ್ಮ ಸ್ವಾತಂತ್ರ್ಯದಿಂದ ವಂಚಿತರಾಗಬಾರದು ಎಂಬ ಎಚ್ಚರಿಕೆಯ ಮಾತು ಹೇಳುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಈಗ ಮತಕ್ಕೆ ಹಾಕಬಹುದು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಪರಿಶೀಲನೆಗಾಗಿ ಸದನದ ಮುಂದೆ ಇರುವ ಮುಖ್ಯ ತಿದ್ದುಪಡಿಯನ್ನು ನನ್ನ ಗೌರವಾನ್ವಿತ ಮಿತ್ರ ಹಿಮ್ಮತ್ ಸಿಂಗ್ ಮಹೇಶ್ವರಿ ಮಂಡಿಸಿದ್ದಾರೆ. ರಕ್ಷಣೆ ಹಾಗೂ ವಿದೇಶ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದು ರಾಜ್ಯದ ಕಾರಣಕ್ಕಾಗಿ ಒಂದು ಪ್ರಾಂತ್ಯದಲ್ಲಿ ಪ್ರತಿಬಂಧಕ ಸೇರಿ ಕೈಗೊಳ್ಳಲು ಈ ಬಾಬಿನ ಮೂಲಕ ನೀಡಲಾದ ಅಧಿಕಾರವನ್ನು ಸೀಮಿತಗೊಳಿಸಲು ಈ ತಿದ್ದುಪಡಿಯಲ್ಲಿ ಕೇಳಲಾಗಿದೆ. ಈ ತಿದ್ದುಪಡಿ ಹಾಗೂ ಮೂಲಬಾಬಿನಲ್ಲಿ ಎರಡು ಅಂಶಗಳಿವೆ. ಒಂದನೆಯ ಅಂಶ: ರಕ್ಷಣೆ ಹಾಗೂ ವಿದೇಶ ವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಜ್ಯದ ಕಾರಣಗಳಿಗಾಗಿ ಸೆರೆಗೆ ಸಂಬಂಧಿಸಿದ ವ್ಯಾಪ್ತಿಯನ್ನು ಸೀಮಿತಗೊಳಿಸಬೇಕು, ಎರಡನೆಯ ಅಂಶ: ಒಕ್ಕೂಟ ಶಾಸಕಾಂಗಕ್ಕೆ ಪ್ರಾಂತ್ಯದ ಪರಿಮಿತಿಗಳಲ್ಲಿ ಮಾತ್ರ ಸೆರೆ ಹಿಡಿಯುವುದಕ್ಕೆ ಸಂಬಂಧಿಸಿದ ಕಾನೂನು ಮಾಡುವ ಅಧಿಕಾರವಿರಬೇಕು. ನಾನು ಈ ಎರಡರ ಪೈಕಿ ಎರಡನೆಯದನ್ನು ಈ ಕೂಡಲೇ ಇತ್ಯರ್ಥಗೊಳಿಸಬಹುದು. ರಾಜ್ಯದ ಕಾರಣಗಳಿಗಾಗಿ ಒಬ್ಬ ವ್ಯಕ್ತಿಯನ್ನು ಬಂಧಿಸುವುದು ಅಗತ್ಯವೆಂದು ಭಾವಿಸಿ, ಈ ತಿದ್ದುಪಡಿಯ ಮಂಡನಕಾರರು, ಅಂಥ ಒಬ್ಬ ವ್ಯಕ್ತಿ ಪಾರಾಗಿ ಒಂದು ಭಾರತೀಯ ರಾಜ್ಯದ ಪ್ರದೇಶಕ್ಕೆ ಹೋದರೆ ಒಕ್ಕೂಟವು ಅವನನ್ನು ಅಲ್ಲಿ ಬಂಧಿಸಬಾರದು ಮತ್ತು ಬ್ರಿಟಿಷ್ ಭಾರತದಲ್ಲಿ ತಂದು ಅಲ್ಲಿ ಬಂಧಿಸಬಾರದು ಎಂದು ಬಯಸುತ್ತಾರೆಯೇ? ಇಲ್ಲ, ರಾಜ್ಯಗಳು ಕೂಡ ಒಕ್ಕೂಟಪ್ರದೇಶದ ಭಾಗವಾಗಿರುವುದರಿಂದ ಮತ್ತು ರಾಜ್ಯದ ಕಾರಣಕ್ಕಾಗಿ ವ್ಯಕ್ತಿಯ ಸೆರೆ ಅಗತ್ಯವಿದ್ದರೆ ಒಕ್ಕೂಟಪ್ರದೇಶದ ಯಾವುದೇ ಭಾಗದಲ್ಲಿ ಅಂಥ ಬಂಧನ ಸಾಧ್ಯವಾಗಬೇಕು. ಆದ್ದರಿಂದ ಮಾನ್ಯರೆ, ರಾಜ್ಯಗಳು ಒಕ್ಕೂಟಕ್ಕೆ ಸೇರುವ ತತ್ತ್ವಕ್ಕೆ ಈ ತಿದ್ದುಪಡಿ ಹೊಂದಿಕೆಯಾಗುವಂತೆ ತೋರುವುದಿಲ್ಲ.

ಎರಡನೆಯದಾಗಿ, ರಕ್ಷಣೆ ಹಾಗೂ ವಿದೇಶ ವ್ಯವಹಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಪ್ರತಿಬಂಧಕ ಸೆರೆಯ ಅಧಿಕಾರವನ್ನು ಪರಿಮಿತಗೊಳಿಸುವ ಬಗ್ಗೆ ನಾನು ಖಚಿತವಾಗಿ ಹೇಳಲಾರೆ. ನಿರ್ದಿಷ್ಟ ವ್ಯಕ್ತಿಗಳನ್ನು ಸರ್ಕಾರ ಬಂಧಿಸುವುದು ಅಗತ್ಯವಾಗಬಹುದಾದ ಕೆಲವು ವಿಷಯಗಳು ರಕ್ಷಣೆ ಹಾಗೂ ವಿದೇಶ ವ್ಯವಹಾರಗಳಿಗೆ

ಸಂಬಂಧಿಸದ ವಿಷಯಗಳಾಗಿರಬಹುದು. ಅದು ರಾಜ್ಯದ ಅಸ್ತಿತ್ವಕ್ಕೆ ಸಂಬಂಧಿಸಿದ್ದದ್ದು. ರಕ್ಷಣೆ ಹಾಗೂ ವಿದೇಶ ವ್ಯವಹಾರಗಳಿಗೆ ಸಂಬಂಧಿಸದೇ ಇರಬಹುದು. ರಾಜ್ಯದ ಅಸ್ತಿತ್ವಕ್ಕೆ ಬೆದರಿಕೆಯುಂಟುಮಾಡುವ ಪರಿಸ್ಥಿತಿ ನಿವಾರಣೆಯಾಗುವವರೆಗೆ ಅಂಥ ವ್ಯಕ್ತಿಗಳ ಚಲನವಲನಗಳನ್ನು ನಿಯಂತ್ರಿಸಿ ಅವರನ್ನು ಬಿಡುಗಡೆ ಮಾಡಲು ಪರಿಸ್ಥಿತಿ ಸುಧಾರಿಸಿದ ಬಗ್ಗೆ ಖಚಿತವಾಗುವವರೆಗೆ ಅವರನ್ನು ಬಂಧನದಲ್ಲಿರಿಸಲು ನಮಗೆ ಅಧಿಕಾರವಿದ್ದರೆ ಅನುಕೂಲವಾಗಬಹುದು. ರಕ್ಷಣೆ ಹಾಗೂ ವಿದೇಶ ವ್ಯವಹಾರಗಳಿಗೆ ಸಂಬಂಧಿಸಿದ ವ್ಯಕ್ತಿಗಳನ್ನು ಕುರಿತಂತೆ ಪ್ರತಿಬಂಧಕ ಸೆರೆಯ ಅಧಿಕಾರ ಅಗತ್ಯವಾದರೆ, ಅಂಥ ಅಧಿಕಾರ ಅಗತ್ಯವೆನಿಸುವ ಇನ್ನೂ ಕೆಲ ವಿಷಯಗಳಿವೆ. ಆದ್ದರಿಂದ ಈ ಎರಡೂ ಕಾರಣಗಳಿಗಾಗಿ ಸದನವು ಈ ತಿದ್ದುಪಡಿಯನ್ನು ಬೆಂಬಲಿಸಲಾರದು ಎಂದು ಭಾವಿಸುತ್ತೇನೆ.

ಇತರ ಬೇರೆ ಗೌರವಾನ್ವಿತ ಸದಸ್ಯರು ಇನ್ನೂ ಕೆಲವು ವಿಷಯಗಳನ್ನು ಉಲ್ಲೇಖಿಸಿದರು. ಶ್ರೀ ನಜೀರ್ ಅಹ್ಮದ್ ಅವರು, ರಾಜ್ಯವು ಕೆಲವು ಸೀಮಿತ ವಿಷಯಗಳಿಗೆ ಮಾತ್ರ ಒಪ್ಪಬಹುದಾಗಿರುವುದರಿಂದ ಅಧಿಕಾರ ತೆಗೆದುಕೊಳ್ಳುವುದು ಸಾಂವಿಧಾನಿಕವಾಗಿ ಸರಿಯಲ್ಲ ಎಂದು ನಮ್ಮನ್ನು ಎಚ್ಚರಿಸಿದರು. ಈ ಸಂಬಂಧದಲ್ಲಿ ನಾವು ತೆಗೆದುಕೊಳ್ಳುವ ಯಾವುದೇ ಅಧಿಕಾರವು, ಖಂಡದ ಪಾಠದಲ್ಲಿ ಕಾಣುವ ಯಾವುದೇ ವಿಷಯದ ಸ್ವಾತಂತ್ರ್ಯವನ್ನು ಅತಿಕ್ರಮಿಸುವುದಿಲ್ಲವೆಂದು ಹಾಗೂ ಒಕ್ಕೂಟಕ್ಕೆ ಸೇರಿದ ಮೇಲೆ ಕ್ರಮ ಕೈಗೊಳ್ಳಲು ರಾಜ್ಯಗಳಿಗೆ ಅನುಮತಿಸಲಾಗುವುದೆಂದು ನಾನು ಖಚಿತಪಡಿಸುತ್ತೇನೆ. ಅದು ಖಂಡದ ಪಾಠಕ್ಕೆ ಸಂಬಂಧಿಸಿದ ಅಂಶವಾಗಿದ್ದು, ಶ್ರೀ ನಜೀರ್ ಅಹ್ಮದ್ ಅವರು ಹೇಳಿದುದನ್ನು ಗಮನದಲ್ಲಿರಿಸಿಕೊಳ್ಳಲಾಗುತ್ತದೆ.

ನನ್ನ ಗೌರವಾನ್ವಿತ ಮಿತ್ರ ಹುಸೇನ್ ಇಮಾಮ್ ತಿಳಿಸಿದ ಒಂದೆರಡು ಅಂಶಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಪ್ರತಿಬಂಧಕ ಸೆರೆ ಎಂಬುದು ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ ಎಂದು ಸೂಚಿಸಿದರು. ಮೂಲಭೂತ ಹಕ್ಕುಗಳ ಬಗ್ಗೆ ನಮ್ಮ ಸಂವಿಧಾನದಲ್ಲಿ ತಿಳಿಸಲಾಗುತ್ತದೆ. ಪ್ರತಿಬಂಧಕ ಸೆರೆ ಎಂಬುದನ್ನು ಒಕ್ಕೂಟ ಪಟ್ಟಿಯಲ್ಲಿ ಸೇರಿಸಿದರೆ ಈ ಬಾಬಿಗೆ ಸಂಬಂಧಿಸಿದಂತೆ ಮಾಡುವ ಯಾವುದೇ ಕಾನೂನು, ನಾವು ಸಂವಿಧಾನದೊಳಗೆ ಮಾನ್ಯ ಮಾಡುವ ಹಕ್ಕುಗಳಿಗೆ ಪ್ರತಿಕೂಲವಾಗಿರುವುದಿಲ್ಲ. ಆದ್ದರಿಂದ ಮಾನ್ಯರೆ, ಅಧಿಕಾರ ಕುರಿತಂತೆ ನಾವು ಮಾಡುವ ಕಾನೂನು, ಸಂವಿಧಾನದಲ್ಲಿ ಮಾನ್ಯತೆ ಪಡೆಯುವ ಹಕ್ಕುಗಳಿಗೆ ಪ್ರತಿಕೂಲವಾಗುವುದಿಲ್ಲ.

ಇನ್ನೊಂದು ವಿಷಯವಿತ್ತು. ಇದನ್ನು ಶ್ರೀ ಹುಸೇನ್ ಇಮಾಮ್ ಅಲ್ಲ, ಶ್ರೀ ನಜಿರುದ್ದೀನ್ ಅಹ್ಮದ್ ಉಲ್ಲೇಖಿಸಿರಬಹುದು. "ರಾಜ್ಯದ ಕಾರಣಗಳಿಗಾಗಿ" ಎಂಬುದರಲ್ಲಿರುವ "ರಾಜ್ಯ" ಎಂಬ ಪದವನ್ನು ಅವರು ಉಲ್ಲೇಖಿಸಿದರು. "ರಾಜ್ಯ" ಎಂಬ ಪದಕ್ಕೂ ಭಾರತೀಯ ರಾಜ್ಯಗಳು ಎಂಬುದಕ್ಕೂ ಯಾವುದೋ ರೀತಿಯಲ್ಲಿ ಗೊಂದಲವುಂಟಾಗಬಹುದೆಂದು ಆ ಗೌರವಾನ್ವಿತ ಸದಸ್ಯರು ಯೋಚಿಸಿರಬಹುದು. ಅವರು ಹೇಳಿದ ಅಂಶವನ್ನು ನಾನು ಸರಿಯಾಗಿ ಗ್ರಹಿಸಿದ್ದೇನೆ ಎಂದು ಭಾವಿಸುತ್ತೇನೆ. ಹಾಗಾದರೆ ನನ್ನ ಉತ್ತರ ಇಲ್ಲಿ ರಾಜ್ಯ ಎಂಬುದಕ್ಕೂ ಭಾರತೀಯ ರಾಜ್ಯಗಳಿಗೂ ಯಾವ ಸಂಬಂಧವೂ ಇಲ್ಲ. ಅವರು ಹೇಳಿರುವುದು ಸರಿಯಾದ ಅಂಶ. ಆದರೆ ದುರ್ದೈವದಿಂದ ಭಾರತ ಸರ್ಕಾರ ಅಧಿನಿಯಮದಲ್ಲಿರುವಂತೆ ನಾವು ನಮ್ಮ ಪಟ್ಟಿಗೆ ಎತ್ತಿಕೊಂಡು 'ಸ್ಟೇಟ್' ಎಂಬ ಪದ ಅಲ್ಲಿರುವಂತೆ ಕ್ಯಾಪಿಟಲ್ ಅಕ್ಷರಗಳಲ್ಲಿ ಮುದ್ರಿತವಾಗಿದೆ. ಅದು ತಪ್ಪಾಗಿರಬಹುದು. ಕ್ಯಾಪಿಟಲ್ ಅಕ್ಷರದ ಜಾಗದಲ್ಲಿ ಚಿಕ್ಕ ಅಕ್ಷರವನ್ನು ಬದಲಿಯಾಗಿ ಬಳಸಿದ್ದರೆ ಅದು 'ಸ್ಟೇಟ್ ಕಾರಣಗಳಿಗಾಗಿ' ಎಂದಾಗಿ ಅದು ಕೊಡಬೇಕಾಗಿದ್ದ ಅರ್ಥವನ್ನು ಕೊಡುತ್ತಿತ್ತೇನೋ. ಆದ್ದರಿಂದ ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ ಮತ್ತು ಆ ಬಾಬನ್ನು ಈಗ ಇರುವಂತೆಯೇ ಸದನ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"ಬಾಬು ೪ಕ್ಕೆ ಈ ಮುಂದಿನದನ್ನು ಬದಲಿಯಾಗಿ ಸೇರಿಸಬೇಕು:

'ರಕ್ಷಣೆ ಮತ್ತು ವಿದೇಶ ವ್ಯವಹಾರಗಳಿಗೆ ಸಂಬಂಧಿಸಿ ರಾಜ್ಯದ ಕಾರಣಗಳಿಗಾಗಿ ಪ್ರಾಂತ್ಯದಲ್ಲಿ ಪ್ರತಿಬಂಧಕ ಸೆರೆ.'"

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ಮೂಲ ಪ್ರಸ್ತಾವವನ್ನು ಸದನದ ಮುಂದಿಡುತ್ತೇನೆ.

ಮುಂದಿಟ್ಟಿರುವ ವಿಷಯ :

"ಒಕ್ಕೂಟ ಶಾಸಕಾಂಗದ ಪಟ್ಟಿಯಲ್ಲಿರುವ ಬಾಬು ೪ನ್ನು ಹೀಗೆ ಅಂಗೀಕರಿಸಬೇಕು, ಎಂದರೆ:

'ರಾಜ್ಯದ ಕಾರಣಗಳಿಗಾಗಿ ಒಕ್ಕೂಟದ ಪ್ರದೇಶಗಳಲ್ಲಿ ಪ್ರತಿಬಂಧಕ ಸೆರೆ.'"

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾವು ಕೇವಲ ನಾಲ್ಕು ಬಾಬುಗಳನ್ನು ಪರಿಶೀಲಿಸಿದ್ದು ಅದಕ್ಕೆ ಒಂದೂವರೆ ಗಂಟೆ ಸಮಯ ಹಿಡಿದಿದೆ ಎಂಬ ಅಂಶವನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಪಟ್ಟಿಯಲ್ಲಿ ೮೪ ಬಾಬುಗಳಿವೆ. ಈ ವೇಗದಲ್ಲಿ ಎಲ್ಲ ಬಾಬುಗಳ ಪರಿಶೀಲನೆಗೆ ಐದು ದಿನಗಳು ಬೇಕಾಗುತ್ತದೆ. ಆತುರಾತುರವಾಗಿ ಮುಂದುವರಿಯಬೇಕೆಂದು ನಾನು ಹೇಳುತ್ತಿಲ್ಲವಾದರೂ ಸಧಸ್ಯರು ತಮಗೆ ಸಾಧ್ಯವಾದಷ್ಟು ಬೇಗ ಪರಿಶೀಲಿಸಬೇಕೆಂದು ಒತ್ತಾಯಿಸುತ್ತೇನೆ.

### ಬಾಬು ೫

**ಶ್ರೀ ಕೆ. ಸಂತಾನಮ್ :** ಪಟ್ಟಿ ೧ರಲ್ಲಿರುವುದರ ಜಾಗದಲ್ಲಿ ಪಟ್ಟಿ ೫ರಲ್ಲಿ ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಮಂಡಿಸಲು ಅನುಮತಿಸಬೇಕೆಂದು ವಿನಂತಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಆಗಲಿ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನಾನು ಮಂಡಿಸುತ್ತೇನೆ :

"'ಒಕ್ಕೂಟದ ಪ್ರದೇಶಗಳ ರಕ್ಷಣೆಗಾಗಿ ಮತ್ತು ಒಕ್ಕೂಟ ಹಾಗೂ ಅದರ ಘಟಕಗಳ ಕಾನೂನುಗಳನ್ನು ಕಾರ್ಯಗತಗೊಳಿಸಲು' ಎಂಬ ಪದಗಳನ್ನು ಬಿಡಬೇಕು."

ನಾನು ಸದನದ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ಪದಗಳು ಅನಗತ್ಯ ನಿರ್ಬಂಧವನ್ನು ಹೇರುತ್ತವೆ. ಒಕ್ಕೂಟವು, ವಿಶ್ವಸಂಸ್ಥೆ ತನಗೆ ವಹಿಸಿದ ಅಥವಾ ಒಡಂಬಡಿಕೆಗಳು ಹಾಗೂ ಒಪ್ಪಂದಗಳಿಗನುಸಾರವಾಗಿ, ಬದ್ಧವಾದ ಕೆಲಸ ಸೇರಿದಂತೆ ಎಲ್ಲ ಕಾನೂನು ಸಮ್ಮತ ಉದ್ದೇಶಗಳಿಗಾಗಿ ತನ್ನ ಬಲಗಳನ್ನು ಬಳಸಲು ಸಮರ್ಥವಾಗಿರಬೇಕು. ಆದ್ದರಿಂದ ಈ ಪದಗಳನ್ನು ತೆಗೆದು ಹಾಕಿದರೆ ನಮ್ಮ ಭೂ, ನೌಕಾ, ವಾಯುದಳಗಳನ್ನು ಉಪಯೋಗಿಸಿಕೊಳ್ಳಲು ಮುಕ್ತ ಅವಕಾಶವಾಗುತ್ತದೆ. ಇದು ಅಂಗೀಕೃತವಾಗುತ್ತದೆಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಪ್ರಸ್ತಾವವನ್ನು ಮಂಡಿಸಲಾಗಿದ್ದು ಅದು ಮುಂದಿನಂತಿದೆ:

"ಬಾಬು ೫ರಲ್ಲಿ 'ಒಕ್ಕೂಟದ ಪ್ರದೇಶಗಳ ರಕ್ಷಣೆಗಾಗಿ ಮತ್ತು ಒಕ್ಕೂಟ ಹಾಗೂ ಅದರ ಘಟಕಗಳಿಗಾಗಿ ಕಾನೂನುಗಳನ್ನು ಕಾರ್ಯಗತಗೊಳಿಸಲು' ಎಂಬ ಪದಗಳನ್ನು ಬಿಡಬೇಕು."

**ಶ್ರೀ ವಿ.ಟಿ. ಕೃಷ್ಣಮಾಚಾರಿ :** ಮಾನ್ಯ ಸಭಾಧ್ಯಕ್ಷರೆ, ಪಟ್ಟಿ ೧ರ ೫ನೇ ಬಾಬಿಗೆ ನಾನು ೧೧ ಮತ್ತು ೧೨ನೇ ತಿದ್ದುಪಡಿಗಳನ್ನು ಮಂಡಿಸಲು ಇಚ್ಛಿಸುತ್ತೇನೆ.

ಮಾನ್ಯರೆ, ನಾನು ಮಂಡಿಸುತ್ತೇನೆ :

"೫ನೇ ಬಾಬಿನಲ್ಲಿ 'ವಾಯುದಳಗಳು' ಎಂಬ ಪದಗಳ ತರುವಾಯ 'ಒಕ್ಕೂಟದ ಸಂಸ್ಥೆಗಳಿಗೆ ಸೇರಿದ' ಎಂಬ ಪದಗಳನ್ನು ಸೇರಿಸಬೇಕು."

ಇದು ಒಂದು ಔಪಚಾರಿಕ ತಿದ್ದುಪಡಿ, ನಾನು ಸೂಚಿಸುವ ಮುಂದಿನ ತಿದ್ದುಪಡಿ ೫ನೇ ಬಾಬಿನ ೨ನೇ ಭಾಗಕ್ಕೆ ಸಂಬಂಧಿಸಿದೆ. ಅದು:

"ಬಾಬು ೫ರಲ್ಲಿ 'ಭಾರತೀಯ ರಾಜ್ಯಗಳಲ್ಲಿ ಸೃಜಿಸಿ, ನಿಯೋಜಿಸಲಾದ ಸಶಸ್ತ್ರ ದಳಗಳ ಬಲ, ಸಂಘಟನೆ ಹಾಗೂ ನಿಯಂತ್ರಣ' ಎಂಬ ಪದಗಳಿಗೆ ಮುಂದಿನದನ್ನು ಬದಲಿಯಾಗಿ ಸೇರಿಸಬೇಕು :

'ಭಾರತೀಯ ರಾಜ್ಯಗಳಲ್ಲಿ ಸೃಜಿಸಿ ನಿಯೋಜಿಸಲಾದ ಸಶಸ್ತ್ರ ದಳಗಳ ಬಲ ಹಾಗೂ ಒಕ್ಕೂಟ ದಳಗಳೊಡನೆ ಸೇವೆಗಾಗಿ ಒಪ್ಪಂದದ ಮೂಲಕ ಗುರುತಿಸಲಾದ, ದಳಗಳ ಅಂಥ ಭಾಗದ ಸಂಘಟನೆ ಹಾಗೂ ನಿಯಂತ್ರಣ.'"

ಮಾನ್ಯರೆ, ವರದಿಯ ೫ನೇ ಪರಿಚ್ಛೇದದಲ್ಲಿ ನಿಮಗೆ ಇದಕ್ಕೆ ಉಲ್ಲೇಖ ಸಿಗುತ್ತದೆ. ಇದರ ಉದ್ದೇಶವೇನೆಂದರೆ, ಅಂಥ ದಳಗಳ ಮೇರೆ ಈಗ ಚಲಾಯಿಸುತ್ತಿರುವ ಸಮನ್ವಯ ಹಾಗೂ ನಿಯಂತ್ರಣದ ಎಲ್ಲ ಅಧಿಕಾರಗಳನ್ನು ಕಾಪಾಡಿಕೊಳ್ಳುವುದು. ಈಗ ಚಲಾಯಿಸುತ್ತಿರುವ ಎಲ್ಲ ಅಧಿಕಾಗಗಳು ಮುಂದಿನ ಒಕ್ಕೂಟಕ್ಕೂ ಮುಂದುವರಿಯಬೇಕೆಂಬುದನ್ನು ನಾವೆಲ್ಲ ಒಪ್ಪುತ್ತೇವೆ. ಆದರೆ ತಿದ್ದುಪಡಿಯಲ್ಲಿ ನಾವು ಈಗಿರುವ ಪರಿಸ್ಥಿತಿಯನ್ನು ಮಾತ್ರ ಬಿಂಬಿಸಲು ಯತ್ನಿಸಿದ್ದೇವೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಇದನ್ನು ಪರೀಕ್ಷಿಸಿ ಪ್ರಸ್ತುತ ಪರಿಸ್ಥಿತಿಯನ್ನು ಮಾತ್ರ ತೋರಿಸಲಾಗಿದೆಯೇ ಎಂಬುದನ್ನು ನೋಡಿದರೆ ಸಂತೋಷ. ಇಲ್ಲಿ ಮೂಲ ಬಾಬಿಗಿಂತ ಹೆಚ್ಚು ನಿಖರವಾಗಿ ಹೇಳಲಾಗಿದೆ ಎಂದು ತೋರುತ್ತದೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಇದನ್ನು ಪರೀಕ್ಷಿಸಿ ಪ್ರಸ್ತುತ ಸ್ಥಿತಿಯನ್ನು ಸರಿಯಾಗಿ ತಿಳಿಸುವಂಥ ಪದಗಳನ್ನು ಬಳಸಿದರೆ ಸಂತೋಷವಾಗುತ್ತದೆ.

**ಶ್ರೀ ಎಚ್.ವಿ. ಪಾಟಸ್ಕರ್** (ಬಾಂಬೆ : ಸಾಮಾನ್ಯ) : ಬಾಬು ೫ ಈಗಿರುವಂತೆ ನೌಕಾ, ಭೂ ಹಾಗೂ ವಾಯುದಳಗಳ ಬಳಕೆಯನ್ನು ಎರಡು ಉದ್ದೇಶಗಳಿಗೆ ಸೀಮಿತಗೊಳಿಸುತ್ತದೆ. ಏಂದರೆ: "ಒಕ್ಕೂಟದ ಪ್ರದೇಶದ ರಕ್ಷಣೆಗೆ ನಿಯೋಜನೆ ಮತ್ತು ಒಕ್ಕೂಟ ಹಾಗೂ ಅದರ ಘಟಕಗಳ ಕಾನೂನುಗಳನ್ನು ಕಾರ್ಯಗತಗೊಳಿಸುವುದು..."

ಆ ನಿಯೋಜನೆ ಎರಡು ಉದ್ದೇಶಗಳಿಗೆ ಸೀಮಿತವಾಗಿರುವುದರಿಂದ ಈ ಮುಂದಿನದನ್ನು ಸೇರಿಸಿ ಆ ಅವಕಾಶವನ್ನು ವ್ಯಾಪಕಗೊಳಿಸಲು ಒಂದು ತಿದ್ದುಪಡಿಯ ಸೂಚನೆ ನೀಡಿದ್ದೇನೆ. ಅದು:

"ಬೇರೆ ದೇಶಗಳೊಂದಿಗಿನ ಒಡಂಬಡಿಕೆ ಹಾಗೂ ಒಪ್ಪಂದಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಒಕ್ಕೂಟದ ಪ್ರದೇಶಗಳೊಳಗೆ ಶಾಂತಿ ಹಾಗೂ ಸುರಕ್ಷತೆ ಕಾಪಾಡುವುದಕ್ಕಾಗಿ."

ಈ ತಿದ್ದುಪಡಿಯ ನೋಟೀಸು ನೀಡಿದುದರ ಉದ್ದೇಶವೆಂದರೆ ಅದರ ವ್ಯಾಪ್ತಿಯನ್ನು ವಿಸ್ತರಿಸುವುದು. ಏಕೆಂದರೆ ನಮ್ಮ ದೇಶ ಬೇರೆ ದೇಶಗಳೊಡನೆ ಒಡಂಬಡಿಕೆ ಮಾಡಿಕೊಂಡರೆ, ಆ ಒಡಂಬಡಿಕೆಯ ಅನುಷ್ಠಾನಕ್ಕಾಗಿ ಈ ದಳಗಳನ್ನು ನಿಯೋಜಿಸಿಕೊಳ್ಳಬಹುದು. ನನ್ನ ಮಿತ್ರ ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಗೆ ನಾನು ಮಂಡಿಸಿರುವುದಕ್ಕಿಂತ ಹೆಚ್ಚಿನ ವ್ಯಾಪ್ತಿಯಿದೆ ಎಂದು ತಿಳಿಯಿತು. ಆ ದಳಗಳ ಬಳಕೆಗೆ ಸಂಬಂಧಿಸಿದಂತಿರುವ ಎಲ್ಲ ಪದಗಳನ್ನು ಕೈಬಿಡಬೇಕೆಂದು ಅವರು ತಿಳಿಸಿದ್ದಾರೆ. ಆ ತಿದ್ದುಪಡಿಯನ್ನು ಸ್ವೀಕರಿಸಿದರೆ ನನ್ನ ತಿದ್ದುಪಡಿಯನ್ನು ಮಂಡಿಸುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಶ್ರೀ ಸಂತಾನಮ್ ಅವರ ತಿದ್ದುಪಡಿ ಯಾವುದೇ ರೀತಿಯಲ್ಲಿ ಇತ್ಯರ್ಥವಾದ ತರುವಾಯ, ನನ್ನ ತಿದ್ದುಪಡಿಯನ್ನು ಮಂಡಿಸಲು ಅಥವಾ ಮಂಡಿಸದಿರಲು ಅನುಮತಿಸಬೇಕೆಂದು ಕೋರುತ್ತೇನೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾವು ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಅಂಗೀಕರಿಸಲು ಉದ್ದೇಶಿಸಿದ್ದೇವೆ ಎಂದು ನೇರವಾಗಿ ತಿಳಿಸಲು ಇಚ್ಛಿಸುತ್ತೇನೆ.

**ಶ್ರೀ ಎಚ್.ವಿ. ಪಾಟಸ್ಕರ್** : ಆದ್ದರಿಂದ ನಾನು ಅದನ್ನು ಮಂಡಿಸುವ ಅಗತ್ಯವಿಲ್ಲ.

**ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್** : ಮಾನ್ಯರೆ, ನನ್ನ ತಿದ್ದುಪಡಿ ಎರಡು ಭಾಗಗಳಲ್ಲಿದೆ.

"ಬಾಬು ೫ರಲ್ಲಿ ಮತ್ತು 'ಅದರ ಘಟಕಗಳು' ಎಂಬ ಪದಗಳನ್ನು ಬಿಡಬೇಕು, ಮತ್ತು 'ಸೃಜಿಸಿ, ಮತ್ತು ನಿಯೋಜಿಸಲಾದ' ಎಂಬ ಪದಗಳಿಗೆ 'ಕಾಪಾಡಲಾದ' ಎಂಬ ಪದವನ್ನು ಬದಲಿಯಾಗಿ ಸೇರಿಸಬೇಕು."

ತರುವಾಯದ ಭಾಗ ಕೇವಲ ಶಾಬ್ದಿಕ ಸ್ವರೂಪವಾಗಿದ್ದು ಅದರ ಬಗ್ಗೆ ನಾನು ಆಗ್ರಹಿಸುವುದಿಲ್ಲ. ೧ನೇ ಭಾಗವನ್ನು ಕುರಿತು ಹೇಳುವುದಾದರೆ ಭಾರತ ಒಕ್ಕೂಟದಲ್ಲಿ ಎರಡು ಭಾಗಗಳಿವೆ : ಪ್ರಜಾಸತ್ತಾತ್ಮಕ ಪ್ರಾಂತ್ಯಗಳಲ್ಲಿ

ಚುನಾಯಿತ ಅಧ್ಯಕ್ಷರಿರುತ್ತಾರೆ. ರಾಜ್ಯಗಳ ನಿರಂಕುಶ ವಂಶಪಾರಂಪರ್ಯದ ಸರ್ಕಾರಗಳು. ಒಕ್ಕೂಟವು ಈ ರಾಜ್ಯಗಳ ಕಾನೂನಿನ ಅನುಷ್ಠಾನಕ್ಕಾಗಿ ತನ್ನ ಸೇನೆಯನ್ನು ಬಳಸಿದರೆ ಅದು ಪ್ರಜಾಪ್ರಭುತ್ವದ ನಿರಾಕರಣೆಯಾಗುತ್ತದೆ. ಯಾವುದೇ ಪ್ರಜಾಸತ್ತಾತ್ಮಕ ಸರ್ಕಾರವು ಹಾಗಾಗುವುದನ್ನು ಬಯಸುವುದಿಲ್ಲ. ಇದನ್ನು ತಡೆಯಲು ನಾನು ತಿದ್ದುಪಡಿ ಮಂಡಿಸಿದೆ. ಆದರೆ ಶ್ರೀ ಸಂತಾನಮ್ ಅವರ ತಿದ್ದುಪಡಿ ನನ್ನ ಮನಸ್ಸಿನಲ್ಲಿರುವ ಉದ್ದೇಶವನ್ನು ನೆರವೇರಿಸಿದೆ. ಮತ್ತು ಆ ತಿದ್ದುಪಡಿ ಅಂಗೀಕೃತವಾಗಿರುವುದರಿಂದ ನಾನು ನನ್ನ ತಿದ್ದುಪಡಿ ಅಂಗೀಕಾರಕ್ಕೆ ಆಗ್ರಹಿಸುವುದಿಲ್ಲ.

(ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ ಮತ್ತು ಶ್ರೀ ಡಿ. ಗೋವಿಂದ ದಾಸ್ ಪಟ್ಟಿ ೩ರ ತಿದ್ದುಪಡಿ ಗಿನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು** : ನಮಗೆ ಸೂಚನೆ ನೀಡಲಾದ ತಿದ್ದುಪಡಿಗಳು ಇಷ್ಟೇ. ಮೂಲಬಾಬುಗಳು ಹಾಗೂ ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತವಾಗಿವೆ.

**ಶ್ರೀ ರಾಮ್ ಸಹಾಯ್** (ಗ್ವಾಲಿಯರ್ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ಒಂದು ರಾಜ್ಯದ ಪ್ರತಿನಿಧಿಯಾಗಿ ನಾನು ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಈ ತಿದ್ದುಪಡಿಯಿಂದ, ಕೆಲವು ದಳಗಳು ರಾಜ್ಯಗಳ ನಿಯಂತ್ರಣದಲ್ಲಿ ಹಾಗೂ ಉಳಿದವು ಕೇಂದ್ರದ ಅಡಿಯಲ್ಲಿ ಇರಬೇಕೆಂದು ಸೂಚಿತವಾಗುತ್ತದೆ. ಅದರೊಂದಿಗೇ ತಿದ್ದುಪಡಿಯಲ್ಲಿ 'ಒಪ್ಪಂದ' ಎಂಬ ಶಬ್ದವಿದೆ. ಇದರಿಂದ ದಳಗಳನ್ನು ಕುರಿತಂತೆ ಕೇಂದ್ರಕ್ಕಿದ್ದ ಅಧಿಕಾರದ ಸ್ವಲ್ಪ ಮಹತ್ತ್ವವು ಹೋದಂತಾಗುತ್ತದೆ. ಈ ತಿದ್ದುಪಡಿಯಿಂದ, ರಕ್ಷಣಾ ದಳಗಳ ಮೇಲೆ ಕೇಂದ್ರಕ್ಕಿದ್ದ ಸ್ವತಂತ್ರ ಅಧಿಕಾರಕ್ಕೆ ಕೊನೆ ಬರುತ್ತದೆ ಎಂದು ನಾನು ಸದನಕ್ಕೆ ತಿಳಿಸಬಯಸುತ್ತೇನೆ. ರಾಜ್ಯಗಳಲ್ಲಿರುವ ಸೇನೆಗಳ ಸ್ಥಿತಿ ಎಷ್ಟು ಕೆಟ್ಟಿದೆಯೆಂದರೆ ಅಗತ್ಯವಿರುವಾಗ ರಕ್ಷಣೆಗಾಗಿ ಅವರನ್ನು ಬಳಸಿಕೊಳ್ಳಲು ಆಗುವುದಿಲ್ಲ. ಯಾವುದಾದರೂ ತರಬೇತಿ ಅಗತ್ಯ. ಆದ್ದರಿಂದ ಅದು ಸಂಪೂರ್ಣವಾಗಿ ಕೇಂದ್ರದ ನಿಯಂತ್ರಣದಲ್ಲಿರಬೇಕು. ಆದ್ದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.]*

**ಶ್ರೀ ಯುಧಿಷ್ಠಿರ ಮಿಶ್ರ** (ಪೂರ್ವ ರಾಜ್ಯಗಳ ಸಮೂಹ) : ಮಾನ್ಯ ಸಭಾಧ್ಯಕ್ಷರೆ, ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಸಂತಾನಮ್ ಮಂಡಿಸಿದ ಪಟ್ಟಿ ೧ರ ಬಾಬಿನ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ. ತೆಗೆದು ಹಾಕಬೇಕೆಂದು ಕೋರಲಾದ ಪದಗಳು, ಕೇಂದ್ರ ಸರ್ಕಾರದ ನೌಕಾ, ಭೂ ಹಾಗೂ ವಿಮಾನದಳಗಳನ್ನು ಹೇಗೆ ನಿಯೋಜಿಸಬೇಕೆಂಬುದನ್ನು ಸೂಚಿಸುತ್ತವೆ. ದಳಗಳು ನಿಯೋಜನೆ ಹಾಗೂ ಪ್ರಕಾರ್ಯದ ವ್ಯಾಪ್ತಿ ಕುರಿತಂತೆ ಮುಂದಿನ ಕೇಂದ್ರ ಶಾಸಕಾಂಗವು ವ್ಯವಹರಿಸಬೇಕಲ್ಲದೇ ಅದನ್ನು ಸಂವಿಧಾನ ರಚನಾಸಭೆಯು ನಿರ್ಬಂಧಿಸಬಾರದು. ಮಾನ್ಯರೆ, "ತನ್ನ ಘಟಕಗಳ ಕಾನೂನನ್ನು ಕಾರ್ಯಗತಗೊಳಿಸಲು" ಎಂಬ ಪದಗಳ ಬಗ್ಗೆ ನನ್ನ ಆಕ್ಷೇಪವಿದೆ. ಈಗಿರುವಂತೆ ರಾಜ್ಯಗಳ ಕಾನೂನುಗಳನ್ನು ಕಾರ್ಯಗತಗೊಳಿಸಲು ಕೇಂದ್ರದ ದಳಗಳನ್ನು ನಿಯೋಜಿಸಿದರೆ ಅದು ರಾಜ್ಯಗಳ ಜನತೆಗೆ ತೊಂದರೆದಾಯಕವೇ. ಪ್ರಾಂತ್ಯಗಳ ಕಾನೂನುಗಳನ್ನು ಅಲ್ಲಿಯ ಪ್ರಾಂತೀಯ ಶಾಸಕಾಂಗವು ರಚಿಸುತ್ತಿದ್ದು ಅದರಲ್ಲಿ ಅಲ್ಲಿನ ಜನತಾಪ್ರತಿನಿಧಿಗಳಿರುತ್ತಾರೆ. ಮಾನ್ಯರೆ, ಆದರೆ ಭಾರತೀಯ ರಾಜ್ಯಗಳಲ್ಲಿ ರಾಜ್ಯಗಳ ಜನತೆಗೆ ತಮ್ಮ ಕಾನೂನನ್ನು ತಾವು ರಚಿಸುವಲ್ಲಿ ಏನಾದರೂ ಪಾತ್ರವಿರುವ ಬಗ್ಗೆ ಖಚಿತವಿಲ್ಲ. ರಾಜ್ಯಗಳ ಜನತೆಗೆ ಪ್ರಜಾಸತ್ತಾತ್ಮಕ ಹಕ್ಕುಗಳಿಲ್ಲದಿರುವವರೆಗೆ ಅವರು ನಿರಂಕುಶ ಪ್ರಭುಗಳ ವಿರುದ್ಧ ಹೋರಾಡಬೇಕಾಗುತ್ತದೆ. ಹಲವಾರು ರಾಜ್ಯಗಳಲ್ಲಿ, ವಿಶೇಷವಾಗಿ ಒರಿಸ್ಸಾ ರಾಜ್ಯಗಳಲ್ಲಿ, ಸಾರ್ವಜನಿಕ ಸುರಕ್ಷತೆಯ ಹೆಸರಿನಲ್ಲಿ, ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜನರ ಆಂದೋಲನವನ್ನು ಹತ್ತಿಕ್ಕಲು ಅಧ್ಯಾದೇಶಗಳನ್ನು ಅಂಗೀಕರಿಸಲಾಗಿದೆ. ಕಳೆದ ೨೭ ವರ್ಷಗಳಿಂದ ಹೋರಾಡುತ್ತಿರುವ ಕಾಂಗ್ರೆಸ್ ಹಾಗೂ ಭಾರತೀಯರನ್ನು ಹತ್ತಿಕ್ಕಲು ಮುಂದಿನ ಕೇಂದ್ರ ಸರ್ಕಾರ ದಳಗಳನ್ನು ನಿಯೋಜಿಸಿದರೆ ಅದೊಂದು ದುರಂತವೆನಿಸುತ್ತದೆ. ಈ ಮಾತುಗಳೊಂದಿಗೆ ನಾನು ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** : ಮಾನ್ಯ ಸಭಾಧ್ಯಕ್ಷರೆ, ಪಾಟಸ್ಕರ್ ಅವರು ತಿದ್ದುಪಡಿ ಸೂಚನೆಯನ್ನು ನೀಡಿದ್ದರು. ತಿದ್ದುಪಡಿಯನ್ನು ಮಂಡಿಸದಿರುವುದು ಸದನಕ್ಕೆ ದೊಡ್ಡ ಅಡ್ಡಿಯುಂಟುಮಾಡಿದಂತಾಗಿದೆ. ಅಲ್ಲದೇ ಅವರು, ಶ್ರೀ ಸಂತಾನಮ್ ಅವರ ತಿದ್ದುಪಡಿ ಅಂಗೀಕೃತವಾದರೆ ತಾನು ತಿದ್ದುಪಡಿಯನ್ನು ಮಂಡಿಸುವುದಿಲ್ಲವೆಂದು ಹೇಳಿದರು. ಇಂಥ ವಿಧಾನಕ್ಕೆ ಅನುಮತಿ ಇದೆಯೇ ನನಗೆ ಗೊತ್ತಿಲ್ಲ. ಶ್ರೀ ಪಾಟಸ್ಕರ್ ಸೂಚನೆ ನೀಡಿದ ತಿದ್ದುಪಡಿಯನ್ನು ಬೆಂಬಲಿಸಲು ಉದ್ದೇಶಿಸಿರುವ ಸದಸ್ಯರಿಗೆ, ಅದು ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಹೇಗೆ ಸೇರ್ಪಡೆಯಾಗುತ್ತದೆ ಎಂಬುದು ಅರಿವಿಗೆ ಬರುವುದಿಲ್ಲ. ಶ್ರೀ ಸಂತಾನಮ್ ಅವರ ತಿದ್ದುಪಡಿಯ ಮೇರೆಗೆ "ರಕ್ಷಣೆ" ಎಂಬ ಪದದ ವ್ಯಾಪ್ತಿ ದೊಡ್ಡದಾಗಿದ್ದು ಅದರಲ್ಲಿ ಶ್ರೀ ಪಾಟಸ್ಕರ್ ಅವರ ತಿದ್ದುಪಡಿ ಏನೆಂದರೆ ಇತರ ದೇಶಗಳೊಂದಿಗೆ ಮಾಡಿಕೊಂಡ ಒಡಂಬಡಿಕೆಗಳು ಹಾಗೂ ಒಪ್ಪಂದಗಳ ಅನುಷ್ಠಾನಕ್ಕಾಗಿ ಕೇಂದ್ರ ದಳಗಳನ್ನು ನಿಯೋಜಿಸಲು ಸಮರ್ಥವಾಗಿರಬೇಕು. ಸರ್ಕಾರವು ಇತರ ದೇಶಗಳೊಂದಿಗೆ ರಕ್ಷಣಾತ್ಮಕ ಹಾಗೂ ಆಕ್ರಮಣಶೀಲ ಒಡಂಬಡಿಕೆಗಳೆರಡನ್ನೂ ಮಾಡಿಕೊಳ್ಳಬಹುದು. ಅಂಥ ಸಂದರ್ಭಗಳಲ್ಲಿ ಈ ಒಡಂಬಡಿಕೆಗಳ ಅನುಷ್ಠಾನಕ್ಕಾಗಿ ದಳಗಳನ್ನು ನಿಯೋಜಿಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಡಬೇಕು. "ರಕ್ಷಣೆ" ಎಂಬ ಪದದಲ್ಲಿ ದಳಗಳ ಈ ಎಲ್ಲ ಚಟುವಟಿಕೆಗಳು ಸೇರಿರುವುದರಲ್ಲಿ ನಿಜವಾದ ಪರಿಣಾಮ ಕಂಡುಬರುತ್ತದೆ. ಆದ್ದರಿಂದ ಶ್ರೀ ಪಾಟಸ್ಕರ್ ಅವರ ತಿದ್ದುಪಡಿಯನ್ನು ಮಂಡಿಸಬಹುದು. ಅವರು ನೀಡಿದ ಇನ್ನೊಂದು ಉದಾಹರಣೆ ಎಂದರೆ ಒಕ್ಕೂಟದ ಪ್ರದೇಶಗಳೊಳಗೆ ಶಾಂತಿ ಹಾಗೂ ರಕ್ಷಣೆಯನ್ನು ಕಾಪಾಡುವುದಕ್ಕಾಗಿ ಎಂದು. ಇಲ್ಲಿ ತುಸು ಅಡ್ಡಿ ಇದೆ. ಉದಾಹರಣೆಗೆ: ಒಕ್ಕೂಟ ಸರ್ಕಾರವು ಒಂದು ಮೂಲ ರಾಜ್ಯಕ್ಕೆ ಎಂದರೆ ಭಾರತೀಯ ರಾಜ್ಯಕ್ಕೆ ತನ್ನ ಸೇನಾ ತುಕಡಿಗಳನ್ನು ಕಳಿಸಲು ಇಚ್ಛಿಸಿದರೆ ಆ ಬಗ್ಗೆ ಕಾನೂನು ಮಾಡಲು ಈ ಶಾಸಕಾಂಗಕ್ಕೆ ಹಕ್ಕು ಇರುತ್ತದೆಯೇ, ಕೇಂದ್ರ ಸರ್ಕಾರವು ಭಾರತೀಯ ರಾಜ್ಯಗಳ ಶಾಂತಿ ಹಾಗೂ ಸುರಕ್ಷತೆಯನ್ನು ಕಾಪಾಡುವುದಕ್ಕಾಗಿ ಸೇನಾ ತುಕಡಿಗಳನ್ನು ಕಳಿಸುವ ಹಕ್ಕು ಅಥವಾ ಅಧಿಕಾರ ಹೊಂದಿದೆಯೇ? ಒಂದು ಭಾರತೀಯ ರಾಜ್ಯದಲ್ಲಿ ತೀವ್ರಗಲಭೆ, ಪ್ರತಿಭಟನೆ ಅಥವಾ ಅಂಥದೇ ಇನ್ನೊಂದು ನಡೆಯುತ್ತಿದ್ದರೆ ಕೇಂದ್ರ ಸರ್ಕಾರವು ತನ್ನ ಸೇನಾ ತುಕಡಿಗಳನ್ನು ಅಲ್ಲಿಗೆ ಕಳಿಸಲು ಹಕ್ಕುಳ್ಳದ್ದಾಗಿರುತ್ತದೆಯೇ ಎಂಬುದು ಪ್ರಶ್ನೆ. ಶ್ರೀ ಪಾಟಸ್ಕರ್ ಅವರು ಸೂಚನೆ ನೀಡಿದ ತಿದ್ದುಪಡಿಯಲ್ಲಿ ಈ ರೀತಿಯ ನಿದರ್ಶನಗಳು ಸೇರುತ್ತವೆ. ನಾನು ಹೇಳಿದಂತೆ ಸದನಕ್ಕೆ ಈ ಬಗ್ಗೆ ದೊಡ್ಡ ಅಡ್ಡಿ ಉಂಟಾಗಿದೆ. ಮಂಡನೆಕಾರರು, ಶ್ರೀ ಸಂತಾನಮ್ ಅವರ ತಿದ್ದುಪಡಿ ಅಂಗೀಕೃತವಾದರೆ ತಾನು ತನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲವೆಂದು ಹೇಳಿದರು. ಒಂದು ತಿದ್ದುಪಡಿಯನ್ನು ಮಂಡಿಸುವ ಈ ಕಲ್ಪನೆಯ ರೀತಿ ವಿಚಿತ್ರವಾಗಿದೆ. ಶ್ರೀ ಸಂತಾನಮ್ ಅವರ ತಿದ್ದುಪಡಿ ಅಂಗೀಕೃತವಾದ ತರುವಾಯವೂ ಈ ತಿದ್ದುಪಡಿಯ ಮಂಡನೆಕಾರರು ಹಾಗೂ ತಿದ್ದುಪಡಿಯ ಬೆಂಬಲಿಗರಿಗೆ ಆ ತಿದ್ದುಪಡಿಯನ್ನು ಮಂಡಿಸಲು ಅವಕಾಶ ನೀಡಬಹುದು.

**ಶ್ರೀ ಎ.ಪಿ. ಪಟ್ಟಾಣಿ** (ಪಶ್ಚಿಮ ಭಾರತ ರಾಜ್ಯಗಳ ಸಮೂಹ) : ಮಾನ್ಯ ಸಭಾಧ್ಯಕ್ಷರೆ, ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ತಿದ್ದುಪಡಿಗೆ ವಿಶೇಷ ಗಮನ ನೀಡಬೇಕು. ಏಕೆಂದರೆ ಮಂಡನೆಕಾರರು, ಈಗಿರುವಂತೆ ಪರಿಸ್ಥಿತಿಯನ್ನು ಸ್ಥಿರಗೊಳಿಸುವುದು ತಿದ್ದುಪಡಿಯ ಉದ್ದೇಶವೆಂದು ಹೇಳಿದ್ದಾರೆ. ನನಗೆ ಗೊತ್ತಿರುವಂತೆ ಭಾರತೀಯ ರಾಜ್ಯಗಳಲ್ಲಿ ಮೂರು ವಿಧದ ದಳಗಳನ್ನು ನಿಯೋಜಿಸಲಾಗುತ್ತದೆ. ಒಂದನೆಯದು ಫೀಲ್ಡ್ ಸರ್ವಿಸ್ (ಕ್ಷೇತ್ರಸೇವಾ) ಟ್ರೂಪ್ಸ್, (ತಂಡ), ಎರಡನೆಯದು ಜನರಲ್ ಸರ್ವಿಸ್ ಟ್ರೂಪ್ಸ್ (ಸಾಮಾನ್ಯಸೇವಾ ತಂಡ) ಮೂರನೆಯದು ಇಂಟರ್ನಲ್ ಸೆಕ್ಯುರಿಟಿ ಟ್ರೂಪ್ಸ್, (ಆಂತರಿಕ ರಕ್ಷಣಾ ತಂಡ). ನನಗೆ ಅರಿವಿರುವಂತೆ ಕಳೆದ ಯುದ್ಧಕ್ಕೆ ಮುಂಚೆ, ನಾನು ಇಲ್ಲಿ ತಿಳಿಸಿರುವ ದಳಗಳ ಮೂರೂ ಪ್ರವರ್ಗಗಳು ಸೇರಿದ ಭಾರತೀಯ ರಾಜ್ಯಗಳ ದಳಗಳ ಯೋಜನೆಗೆ ಕೆಲವು ರಾಜ್ಯಗಳು ಸಂಯೋಜಿತವಾಗಿರಲಿಲ್ಲ.

ಭಾರತೀಯ ರಾಜ್ಯಗಳ ದಳಗಳ ಯೋಜನೆಯಂತೆ ದಳಗಳನ್ನು ನಿರ್ವಹಿಸುತ್ತಿದ್ದ ರಾಜ್ಯಗಳಿಗೂ ಕೇಂದ್ರ ಸರ್ಕಾರದಿಂದ ಉಪಕರಣಗಳು ಹಾಗೂ ಶಸ್ತ್ರಗಳು ದೊರೆತವು. ದಳಗಳು ಫೀಲ್ಡ್ ಸರ್ವಿಸ್ ಟ್ರೂಪ್ಸ್, ಜನರಲ್ ಸರ್ವಿಸ್ ಟ್ರೂಪ್ಸ್, ಇಂಟರ್ನಲ್ ಸೆಕ್ಯೂರಿಟಿ ಟ್ರೂಪ್ಸ್ ಅಥವಾ ಇವುಗಳಿಗೆ ಹೊರತಾದ ಯಾವುದೇ ಸಂಘಟನೆಗಳ ತಂಡಗಳಾಗಿದ್ದರೂ ಆ ತಂಡಗಳ ಬಲ ಮತ್ತು ಉಪಕರಣವನ್ನು ಕೇಂದ್ರ ಸರ್ಕಾರವೇ ನಿರ್ಧಾರಣೆ ಮಾಡುತ್ತಿತ್ತು ಅಥವಾ ಅದಕ್ಕೆ ಅನುಮತಿ (ಅಥವಾ ನಾವು ಬಳಸುವ ಇತರ ಯಾವುದೇ ಪದ)ಯನ್ನು ನೀಡುತ್ತಿತ್ತು. ನನ್ನ ವಿವರಣೆ ಸರಿಯಿದ್ದರೆ, ಸಮಿತಿಯ ಶಿಫಾರಸಿನ ಮೇರೆಗೆ ಸ್ಥಿತಿ ಸರಿಯಾಗಿದ್ದು, ಮಂಡನೆಕಾರರು ಆ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ನೋಡಬೇಕು.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** *[ಮಾನ್ಯ ಸಭಾಧ್ಯಕ್ಷರೆ, ನಾನು ಗೌರವಾನ್ವಿತ ಮೆಹಬೂಬ್ ಅಲಿ ಬೇಗ್ ಅವರ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಹಾಗೂ ಸದನದ ಮುಂದೆ ಹಲವು ತಿದ್ದುಪಡಿಗಳಿರುವುದು ಸದನಕ್ಕೆ ದೊಡ್ಡ ಅಡ್ಡಿಯಾಗಿದೆ ಎಂದು ಅವರು ಹೇಳಿದ್ದಾರೆ. ಮಾನ್ಯರೆ, ಸದನದ ಮುಂದೆ ಪರಿಶೀಲನೆಗಾಗಿ ಇರುವ ತಿದ್ದುಪಡಿಗಳು ಯಾವುವು ಎಂಬುದು ನಮಗೆ ಗೊತ್ತಿಲ್ಲ. ಒಂದು ಪ್ರಸ್ತಾವ ಮತ್ತು ಶ್ರೀ ವಿ.ಟಿ. ಕೃಷ್ಣಮಾಚಾರಿಯವರ ತಿದ್ದುಪಡಿ ಇದ್ದುದು ನಿಜ. ಶ್ರೀ ಸಂತಾನಮ್ ಅವರ ತಿದ್ದುಪಡಿಯೂ ಇತ್ತು. ಶ್ರೀ ಪಾಟಸ್ಕರ್ ಅವರ ತಿದ್ದುಪಡಿಯೂ ಇದೆ. ನಾನು ಅದನ್ನು ಒಪ್ಪುತ್ತೇನೆ. ಏಕೆಂದರೆ ಅವರು, ಶ್ರೀ ಸಂತಾನಮ್ ಅವರ ತಿದ್ದುಪಡಿ ಅಂಗೀಕೃತವಾದರೆ ತಾನು ತಿದ್ದುಪಡಿಯನ್ನು ಮಂಡಿಸುವುದಿಲ್ಲವೆಂದು ಹೇಳಿ, ಷರತ್ತಿನೊಂದಿಗೆ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಹೀಗೆ ಷರತ್ತಿನೊಂದಿಗೆ ತಿದ್ದುಪಡಿಯನ್ನು ಮಂಡಿಸುವ ವಿಧಾನಕ್ಕೆ ಅನುಮತಿ ಇದೆಯೋ ಇಲ್ಲವೋ ಎಂಬುದನ್ನು ಮಾನ್ಯರೆ, ನೀವು ಹೇಳಬೇಕು.]*

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಶ್ರೀ ಪಾಟಸ್ಕರ್ ತಮ್ಮ ತಿದ್ದುಪಡಿಯನ್ನು ಮಂಡಿಸುವುದಿಲ್ಲವೆಂದು ಹೇಳಿದರಲ್ಲವೇ?

**ಮಾನ್ಯ ಸಭಾಧ್ಯಕ್ಷರು :** ಹೌದು, ಅದನ್ನು ಅವರು ಮಂಡಿಸಲಿಲ್ಲ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** ಶ್ರೀ ಸಂತಾನಮ್ ಅವರ ತಿದ್ದುಪಡಿ ಅಂಗೀಕೃತವಾಗದಿದ್ದರೂ ಪಾಟಸ್ಕರ್ ತಮ್ಮ ತಿದ್ದುಪಡಿಯನ್ನು ಮಂಡಿಸಲು ನಿರಾಕರಿಸುತ್ತಾರೆಯೇ?

**ಮಾನ್ಯ ಸಭಾಧ್ಯಕ್ಷರು :** ಕಾರಣ ಏನೇ ಇದ್ದರೂ, ಒಬ್ಬ ಸದಸ್ಯ ತಾನು ಸೂಚನೆ ನೀಡಿದ ತಿದ್ದುಪಡಿಯನ್ನು ಮಂಡಿಸದೇ ಇರಬಹುದು. ಯಾವುದೇ ಕಾರಣಕ್ಕಾಗಿಯಾಗಿರಲಿ ಅವರು ಅದನ್ನು ಮಂಡಿಸದೇ ಇರಬಹುದು. ಈ ಪ್ರಸಂಗದಲ್ಲಿ ಯಾವುದೇ ಕಾರಣಗಳು ಶ್ರೀ ಪಾಟಸ್ಕರ್ ಅವರ ಮೇಲೆ ಪ್ರಭಾವ ಬೀರಿದ್ದರೂ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ.

**ಶ್ರೀ ಎಚ್.ವಿ. ಪಾಟಸ್ಕರ್ :** ನಾನು ನನ್ನ ತಿದ್ದುಪಡಿಯ ಬಗೆಗಲ್ಲ, ಈ ತಿದ್ದುಪಡಿಯ ಬಗ್ಗೆ ಒಂದು ಮಾತು ಹೇಳಬೇಕಾಗಿತ್ತು.

**ಮಾನ್ಯ ಸಭಾಧ್ಯಕ್ಷರು :** ಅವರಿನ್ನು ಪೂರ್ಣಗೊಳಿಸಿಲ್ಲ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** ಈಗಲೂ ಶ್ರೀ ಪಾಟಸ್ಕರ್ ತಾವು ತಿದ್ದುಪಡಿಯನ್ನು ಮಂಡಿಸಿದ್ದಾರೆಯೇ ಅಥವಾ ಮಂಡಿಸಲು ನಿರಾಕರಿಸಿದ್ದಾರೆಯೇ ಎಂಬ ಬಗ್ಗೆ ಖಚಿತವಾಗಿ ಹೇಳಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾನು ಈಗಾಗಲೇ ಹೇಳಿರುವಂತೆ, ತಿದ್ದುಪಡಿಯನ್ನು ಮಂಡಿಸಿಲ್ಲ ಮತ್ತು ಅದು ಸದನದ ಮುಂದೆ ಇಲ್ಲ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** ಹಾಗಿದ್ದರೆ, ನನ್ನ ಮನವಿ ಹೀಗಿದೆ: ಸಹಜವಾಗಿಯೇ ವಿಧಾನಕ್ಕೆ ಸಂಬಂಧಿಸಿದ ಈ ವಿಷಯದ ಬಗ್ಗೆ ನೀವು ನಿರ್ಣಯ ನೀಡಬೇಕು. ಒಂದು ತಿದ್ದುಪಡಿಯ ಬಗ್ಗೆ

ಸೂಚನೆ ನೀಡಲಾಗಿದ್ದರೆ ಮತ್ತು ಆ ತಿದ್ದುಪಡಿ ಸೂಚನೆಯನ್ನು ನೀಡಿದ ಗೌರವಾನ್ವಿತ ಸದಸ್ಯ ಆ ತಿದ್ದುಪಡಿಯ ಬಗ್ಗೆ ಮಾತನಾಡಿದರೂ, ಅದನ್ನು ತಾನು ಮಂಡಿಸುವುದಿಲ್ಲವೆಂದು ಅಥವಾ ಷರತ್ತು ಸಹಿತವಾಗಿ ಮಂಡಿಸುವುದಾಗಿ ಏನನ್ನು ಹೇಳದಿದ್ದರೂ ಅದೇನೇ ಆಗಿದ್ದರೂ ಸಭಾಧ್ಯಕ್ಷರ ಒಪ್ಪಿಗೆಯಿಂದ ಬೇರೆ ಸದಸ್ಯರು ಅದೇ ತಿದ್ದುಪಡಿಯನ್ನು ಮಂಡಿಸಲು ಅವಕಾಶವಿದೆಯೇ ಎಂದು ನೀವು ನಿರ್ಣಯ ನೀಡಬೇಕು. ಈಗಿನ ಸ್ಥಿತಿಯ ಅನಿಶ್ಚಿತತೆಯಿಂದಾಗಿ ಮತ್ತು ತಿದ್ದುಪಡಿಯು ಸದನದ ಮುಂದೆ ಇಲ್ಲದಿರುವುದು ವಾಸ್ತವಾಂಶವಾಗಿದ್ದರೆ ನನ್ನದೇ ತಿದ್ದುಪಡಿ ಎಂಬಂತೆ ಅದನ್ನು ಮಂಡಿಸಲು ನನಗೆ ಅನುಮತಿ ನೀಡಬೇಕೆಂದು ಕೋರುತ್ತೇನೆ. ತಿದ್ದುಪಡಿ ಸದನದ ಮುಂದೆ ಇದ್ದರೆ ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ ಮತ್ತು ಅದಕ್ಕೆ ಕಾರಣಗಳನ್ನೂ ನೀಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ನಿಯಮಗಳ ಮೇರೆಗೆ ಹೇಳುತ್ತೇನೆ. ಒಬ್ಬ ಸದಸ್ಯನು ಒಂದೂ ತಿದ್ದುಪಡಿ ಸೂಚನೆ ನೀಡಲು ಮತ್ತು ತನಗೆ ಸರಿಯೆನಿಸಿದ ಕಾರಣಕ್ಕಾಗಿ ಅದನ್ನು ಮಂಡನೆ ಮಾಡದಿರಲು ಸ್ವತಂತ್ರನಿರುತ್ತಾನೆ. ಆದರೆ ಆತನು ತಿದ್ದುಪಡಿ ಸೂಚನೆ ನೀಡಿರದಿದ್ದರೆ, ಬೇರೆಯವರದನ್ನು ತನ್ನದು ಎಂಬಂತೆ ಮಂಡಿಸಲಾಗದು. ಶ್ರೀ ಪಾಟಸ್ಕರರು ತಮ್ಮ ತಿದ್ದುಪಡಿಯನ್ನು ಮಂಡಿಸಿಲ್ಲ ಮತ್ತು ಅದು ಸದನದ ಮುಂದೆ ಇಲ್ಲ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** ಶ್ರೀ ಪಾಟಸ್ಕರ್ ಅವರಿಗೆ ಇದ್ದ ಕಾರಣವೆಂದರೆ ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಶ್ರೀ ಪಾಟಸ್ಕರ್ ಅವರ ತಿದ್ದುಪಡಿಗೆ ಉತ್ತರವಿರುವುದರಿಂದ ಆ ಕಾರಣಕ್ಕಾಗಿಯೇ ಅವರು ತಿದ್ದುಪಡಿಯನ್ನು ಮಂಡಿಸಲು ನಿರಾಕರಿಸಿದ್ದಾರೆ. ಆದರೆ ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಉದ್ದೇಶದ ಬಗ್ಗೆ ಉತ್ತರವಿಲ್ಲ. ಹೀಗಾಗಿ ಅದು ಇಡೀ ಖಂಡವನ್ನು ಅಪೂರ್ಣಗೊಳಿಸಿದೆ. ಖಂಡವು ಶ್ರೀ ಪಾಟಸ್ಕರರ ತಿದ್ದುಪಡಿಯ ಉದ್ದೇಶವನ್ನಾದರೂ ಒಳಗೊಂಡಿರಬೇಕಿತ್ತು. ಈ ದೇಶದಲ್ಲಿ ಬೇಗನೆ ಅಥವಾ ತರುವಾಯದಲ್ಲಿ ಪರಿಸ್ಥಿತಿ ಉದ್ಭವಿಸಿ, ಒಂದಿಲ್ಲೊಂದು ವಿಧದ ವಿದೇಶೀ ಆಕ್ರಮಣದಿಂದ ಸ್ವಯಂ ರಕ್ಷಣೆ ಮಾಡಿಕೊಳ್ಳಲು ಭಾರತವೂ ನೆರೆಯ ದೇಶಗಳೊಡನೆ ಸ್ನೇಹಸಂಬಂಧ ಬೆಳೆಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ: ಭಾರತವು ರಷ್ಯಾ ಅಥವಾ ಇತರ ದೇಶದ ಆಕ್ರಮಣದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ನೆರೆಯ ದೇಶವಾದ ಪಾಕಿಸ್ತಾನ ಅಥವಾ ಅಫ್ಘಾನಿಸ್ತಾನದೊಡನೆ ರಕ್ಷಣಾತ್ಮಕ ಸ್ನೇಹಸಂಬಂಧ ಬೆಳೆಸಬೇಕಾದ ಸಾಧ್ಯತೆ ಇರುತ್ತದೆ. ಶ್ರೀ ಪಾಟಸ್ಕರರ ತಿದ್ದುಪಡಿಯಲ್ಲಿ ಪ್ರಸ್ತಾವಿಸಲಾದ ಘಟನೆಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಬೇಕು ಮತ್ತು ಒಕ್ಕೂಟವು ಆ ಬಗ್ಗೆ ಶಾಸನ ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸಬೇಕು. ಶ್ರೀ ಪಾಟಸ್ಕರರ ತಿದ್ದುಪಡಿ ಸದನದ ಮುಂದೆ ಇರುವ ಅಥವಾ ಇಲ್ಲದಿರುವ ತಾಂತ್ರಿಕ ಸ್ಥಿತಿ ಏನೇ ಇದ್ದರೂ ಒಕ್ಕೂಟವು ಆ ವಿಷಯದ ಅಡಿ ಶಾಸನ ರಚಿಸಲು ಸಾಧ್ಯವಾಗುವಂತೆ ಒಂದು ಉಪಬಂಧ ಕಲ್ಪಿಸಬೇಕಾದುದು ತುಂಬ ಅಗತ್ಯವಾಗಿದೆ.

**ಶ್ರೀ ಎಚ್.ವಿ. ಪಾಟಸ್ಕರ್ :** ಮಾನ್ಯರೆ, ಮೊದಲನೆಯದಾಗಿ ನಾನು ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಮಂಡಿಸಲಿಲ್ಲವೆಂದು ಮತ್ತು ನನ್ನ ಮಿತ್ರ ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಗೆ ಹೆಚ್ಚಿನ ವ್ಯಾಪ್ತಿಯಿದ್ದುದೇ ಅದಕ್ಕೆ ಕಾರಣವೆಂದು ಸ್ಪಷ್ಟಪಡಿಸಲು ಬಯಸುತ್ತೇನೆ. ಈ ಬಗ್ಗೆ ನಾನು ಇನ್ನಷ್ಟು ಅಭಿಪ್ರಾಯಗಳನ್ನು ತಿಳಿಸಲಿಚ್ಛಿಸುತ್ತೇನೆ. ನನ್ನ ಮಿತ್ರ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯ ಮೂಲಕ ಚರ್ಚೆಯಾಗುತ್ತಿರುವ ಖಂಡದಲ್ಲಿನ "ನೌಕಾ, ಭೂ ಹಾಗೂ ವಾಯುದಳಗಳ ಸೃಜನೆ, ತರಬೇತಿ, ನಿರ್ವಹಣೆ ಹಾಗೂ ನಿಯಂತ್ರಣ ಮತ್ತು ಅವುಗಳ ನಿಯೋಜನೆ" ಎಂಬ ಪದಗಳನ್ನು ಹಾಗೇ ಉಳಿಸಿ, ಖಂಡದ ಉಳಿದ ಪದಗಳಾದ "ಒಕ್ಕೂಟದ ಪ್ರದೇಶಗಳ ರಕ್ಷಣೆಗಾಗಿ ಹಾಗೂ ಒಕ್ಕೂಟದ ಹಾಗೂ ಅದರ ಘಟಕಗಳ ಕಾನೂನುಗಳನ್ನು ಕಾರ್ಯಗತಗೊಳಿಸಲು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ. ನಾನು ತಿದ್ದುಪಡಿ ಸೂಚನೆ ನೀಡಿದ ಉದ್ದೇಶವೇನೆಂದರೆ ೫ನೇ ಬಾಬಿನಲ್ಲಿ, ನೌಕಾದಳ ಅಥವಾ ಭೂಸೇನೆ ಅಥವಾ ವಾಯುದಳಗಳನ್ನು ಅದರಲ್ಲಿ ತಿಳಿಸಲಾದ ಎರಡು ನಿರ್ದಿಷ್ಟ ಉದ್ದೇಶಗಳಿಗಾಗಿ ಎಂದರೆ ಒಕ್ಕೂಟದ ಪ್ರದೇಶಗಳ

ರಕ್ಷಣೆಗೆ ಹಾಗೂ ಒಕ್ಕೂಟ ಮತ್ತು ಅದರ ಘಟಕಗಳ ಕಾನೂನುಗಳನ್ನು ಕಾರ್ಯಗತಗೊಳಿಸಲು ಬಳಸಬೇಕು ಎಂದು ತಿಳಿಸಲಾಗಿತ್ತು. ನನ್ನ ತಿದ್ದುಪಡಿಯಲ್ಲಿ ತಿಳಿಸಲಾದ ಉದ್ದೇಶಗಳಿಗೆ ಅಂಥ ದಳಗಳನ್ನು ಬಳಸಬೇಕಾದ ಅಗತ್ಯವಿದೆ ಎಂದು ನಾನು ಯೋಚಿಸಿದೆ. ಏಕೆಂದರೆ ನಾವು ಬೇರೆ ದೇಶಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬಹುದು. ಅಂಥ ಸಂದರ್ಭದಲ್ಲಿ ಅವುಗಳ ಅನುಷ್ಠಾನಕ್ಕೂ ನಾವು ಈ ದಳಗಳನ್ನು ಬಳಸಿಕೊಳ್ಳಬಹುದು. ಆ ಖಂಡದಲ್ಲಿ ಕೇವಲ ಎರಡು ಉದ್ದೇಶಗಳನ್ನು ತಿಳಿಸಲಾಗಿದ್ದು, ನನಗೆ ಮಹತ್ತ್ವದವುಗಳೆಂದು ತೋರಿದ ಬೇರೆ ಎರಡು ಉದ್ದೇಶಗಳನ್ನು ಅದರಲ್ಲಿ ಸೇರಬೇಕಾದುದು ಅಗತ್ಯ ಎಂದು ನಾನು ಯೋಚಿಸಿದೆ. ಆದರೆ ನನ್ನ ಮಿತ್ರರಾದ ಶ್ರೀ ಸಂತಾನಮ್ ಅವರು ಒಂದು ತಿದ್ದುಪಡಿ ಮಂಡಿಸಿ ಅದರಲ್ಲಿ ನಿರ್ದಿಷ್ಟ ಉದ್ದೇಶಗಳ ಉಲ್ಲೇಖವನ್ನು ಕೈಬಿಟ್ಟು, ಒಕ್ಕೂಟ ಸರ್ಕಾರ ಅಥವಾ ರಾಜ್ಯಗಳು ಯಾವುದೇ ಉದ್ದೇಶಗಳಿಗಾಗಿ ಬಳಸುವ ಅವಕಾಶವನ್ನು ಸೂಚಿಸಿದಾಗ ಆ ತಿದ್ದುಪಡಿಯು ಹೆಚ್ಚಿನ ವ್ಯಾಪ್ತಿಯನ್ನು ಕಲ್ಪಿಸಿರುವುದರಿಂದ ನನ್ನ ತಿದ್ದುಪಡಿ ಅನಗತ್ಯವೆಂದು ಯೋಚಿಸಿದೆ. ಆದ್ದರಿಂದ ಈಗ ಯಾವುದೇ ಸಂದೇಹ ಉಂಟಾಗಿರುವ ನನ್ನ ಮಿತ್ರರಿಗೆ ನಾನು ಮತ್ತೆ ಹೇಳುವುದಿಷ್ಟೇ : "ನೌಕಾ, ಭೂ ಮತ್ತು ವಾಯುದಳಗಳ ಸೃಜನೆ, ತರಬೇತಿ, ನಿರ್ವಹಣೆ ಮತ್ತು ನಿಯಂತ್ರಣ ಹಾಗೂ ಅವುಗಳ ನಿಯೋಜನೆ" ಎಂದರೆ ರಾಜ್ಯಕ್ಕೆ ಸಂಬಂಧಪಟ್ಟ ಯಾವುದೇ ಉದ್ದೇಶಕ್ಕಾಗಿ ಅವುಗಳನ್ನು ನಿಯೋಜಿಸಬಹುದು ಎಂದರ್ಥ. ಅಗತ್ಯವೆನಿಸಿದರೆ "ಅವುಗಳ ನಿಯೋಜನೆ" ಎಂಬ ಪದಗಳ ತರುವಾಯ "ರಾಜ್ಯದ ಉದ್ದೇಶಗಳಿಗಾಗಿ" ಎಂಬ ಪದಗಳನ್ನು ಸೇರಿಸಿ ಅದನ್ನು ಇನ್ನಷ್ಟು ಸ್ಪಷ್ಟಪಡಿಸಬಹುದು. ಮಂಡನೆಕಾರರಿಗೆ ಆಕ್ಷೇಪವಿಲ್ಲದಿದ್ದರೆ ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಬಿಟ್ಟುಬಿಡಲಾದ ಶಬ್ದಗಳ ಸ್ಥಳದಲ್ಲಿ "ರಾಜ್ಯದ ಉದ್ದೇಶಗಳಿಗಾಗಿ" ಎಂಬ ಪದಗಳನ್ನು ಬದಲಿಯಾಗಿ ಸೇರಿಸುವ ಒಂದು ತಿದ್ದುಪಡಿಯನ್ನು ಸೂಚಿಸುತ್ತೇನೆ. ಈ ಪದಗಳು ಇಲ್ಲದಿದ್ದರೂ ಅವುಗಳ ನಿಯೋಜನೆ ಸಂಪೂರ್ಣವಾಗಿ ರಾಜ್ಯದ ಕೈಯಲ್ಲಿರುತ್ತದೆ ಮತ್ತು ಅದರ ವಿವೇಚನೆಗೆ ಅನುಸಾರವಾಗಿರುತ್ತದೆ. ರಾಜ್ಯವು ಯಾವುದೇ ಉದ್ದೇಶಕ್ಕಾಗಿ ಈ ದಳಗಳನ್ನು ಬಳಸಲು ಈಗ ಅವಕಾಶವಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಯಾವ ಉದ್ದೇಶಕ್ಕಾಗಿ ನನ್ನ ತಿದ್ದುಪಡಿಯನ್ನು ಮಂಡಿಸಲು ಉದ್ದೇಶಿಸಿದ್ದೆನೋ ಅದರ ಅಗತ್ಯವಿಲ್ಲ ಎಂದು ಯೋಚಿಸಿದೆ. ಆದ್ದರಿಂದ ನಾನು ನನ್ನ ತಿದ್ದುಪಡಿಯನ್ನು ಮಂಡಿಲು ಬಯಸುವುದಿಲ್ಲ ಎಂದು ಈ ಮಾತುಗಳಿಂದ ತಿಳಿಸಬಯಸುತ್ತೇನೆ.

**ಶ್ರೀ ಎಂ.ಎಸ್. ಅನೆ** (ದಖನ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ಸದನದ ಮುಂದೆ ಪರಿಶೀಲನೆಗಾಗಿ ಎರಡು ತಿದ್ದುಪಡಿಗಳಿವೆ. ಒಂದು ನನ್ನ ಗೌರವಾನ್ವಿತ ಮಿತ್ರ ಶ್ರೀ ಸಂತಾನಮ್ ಅವರದು, ಇನ್ನೊಂದು ಗೌರವಾನ್ವಿತ ಶ್ರೀ ವಿ.ಟಿ. ಕೃಷ್ಣಮಾಚಾರಿಯವರದು. ಈಗ ಚರ್ಚೆಯಾಗುತ್ತಿರುವ ಬಾಬು ರಕ್ಷಣಾ ವಿಷಯಕ್ಕೆ ಸಂಬಂಧಿಸಿದ್ದು, ಅದು ಅತ್ಯಂತ ಮಹತ್ತ್ವ ಹೊಂದಿರುವುದರಿಂದ ಸದನವು ಅದರ ವಿಷಯವನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಬೇಕು ಎಂಬುದು ನನ್ನ ಅಭಿಪ್ರಾಯ, ರಕ್ಷಣೆ, ಅದರ ಗುರಿ ಹಾಗೂ ಉದ್ದೇಶದ ಸ್ವರೂಪವೂ, ಈಗ ನೀವು ಏನನ್ನು ನಿರ್ಧರಿಸುತ್ತೀರೋ ಅದನ್ನು ಆಧರಿಸಿರುತ್ತದೆ. ಈ ಬಾಬಿನ ೧ನೇ ಭಾಗ ಒಕ್ಕೂಟದ ದಳಗಳಿಗೆ ಸಂಬಂಧಿಸಿದ್ದರೆ ೨ನೆಯ ಭಾಗ ಭಾರತೀಯ ರಾಜ್ಯಗಳಲ್ಲಿ ನಿರ್ವಹಿಸಲಾಗುವ ದಳಗಳಿಗೆ ಸಂಬಂಧಿಸಿದೆ. ನಾನು ಎರಡು ದಳಗಳ ಬಗ್ಗೆ ಪ್ರತ್ಯೇಕವಾಗಿ ಹೇಳುತ್ತೇನೆ. ೧ನೆಯ ಭಾಗದಲ್ಲಿ ನೌಕಾ, ಭೂ ಮತ್ತು ವಾಯುದಳಗಳ ಸೃಜನೆ, ತರಬೇತಿ, ನಿರ್ವಹಣೆ, ನಿಯಂತ್ರಣ ಹಾಗೂ ರಕ್ಷಣೆಗಾಗಿ ಒಕ್ಕೂಟ ದಳಗಳ(ಅವುಗಳ) ನಿಯೋಜನೆಯ ಅಧಿಕಾರ ಕೇಂದ್ರ ಸರ್ಕಾರಕ್ಕೆ ಸೇರಿದ್ದು; ೨ನೆಯ ಭಾಗದಲ್ಲಿ, ಭಾರತೀಯ ರಾಜ್ಯದಲ್ಲಿ ಸೃಜಿಸಿ, ನಿಯೋಜಿಸಲಾದ ದಳಗಳ ಬಲ ಹಾಗೂ ಸಂಘಟನೆಯನ್ನು ಕುರಿತು ತಿಳಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಅಧಿಕಾರಗಳು ಕೇಂದ್ರ ಸರ್ಕಾರ ಅಥವಾ ಒಕ್ಕೂಟ ಸರ್ಕಾರಕ್ಕೆ ಸೇರುತ್ತವೆ. ಶ್ರೀ ಸಂತಾನಮ್ ಅವರು ಒಕ್ಕೂಟ ದಳಗಳನ್ನು ನಿಯೋಜಿಸಿಕೊಳ್ಳಬೇಕಾದ ಉದ್ದೇಶಗಳ

ಪರಿಭಾಷೆಗೆ ಸಂಬಂಧಿಸಿದ ಭಾಗವನ್ನು ಬಿಟ್ಟುಬಿಡಬೇಕೆಂದು ಬಯಸುತ್ತಾರೆ. ಶ್ರೀ ಸಂತಾನಮ್ ಅವರ ತಿದ್ದುಪಡಿ ಏನೆಂದರೆ ಒಕ್ಕೂಟ ದಳಗಳನ್ನು ನಿಯೋಜಿಸಿಕೊಳ್ಳಬೇಕಾದ ಉದ್ದೇಶಗಳನ್ನು ನಾವು ಉಲ್ಲೇಖಿಸಬಾರದು. ನಾನು ಈ ನಿರ್ದಿಷ್ಟ ಅಂಶದತ್ತ ಸದನದ ಗಮನ ಸೆಳೆಯಲು ಬಯಸುತ್ತೇನೆ. ಏಕೆಂದರೆ ಘಟಕಗಳ ಹಿತದೃಷ್ಟಿಯಿಂದ ಇದು ಮಹತ್ತ್ವದ್ದಾಗುತ್ತದೆ. ಒಕ್ಕೂಟ ದಳಗಳನ್ನು ನಿಯೋಜಿಸಿಕೊಳ್ಳಬಹುದಾದ ಎರಡು ಉದ್ದೇಶಗಳನ್ನು ಇಲ್ಲಿ ನಿರ್ದಿಷ್ಟವಾಗಿ ತಿಳಿಸಲಾಗಿದೆ. ಮೊದಲನೆಯ ಉದ್ದೇಶ ಒಕ್ಕೂಟದ ಪ್ರದೇಶಗಳ ರಕ್ಷಣೆ, ಎರಡನೆಯ ಉದ್ದೇಶ ಒಕ್ಕೂಟ ಹಾಗೂ ಅದರ ಘಟಕಗಳ ಕಾನೂನುಗಳನ್ನು ಕಾರ್ಯಗತಗೊಳಿಸುವುದು. ಈಗ ಪ್ರದೇಶದ ರಕ್ಷಣೆ ವಿವಾದಾತೀತ ವಿಷಯ ಎಂಬುದು ನಿಸ್ಸಂದೇಹ. ಇದಕ್ಕೆ ರಾಜ್ಯದ ದಳಗಳು ಬಳಕೆಯಾಗುವುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬಲ್ಲರು. ಎರಡನೆಯ ಉದ್ದೇಶಕ್ಕಾಗಿ, ಈಗಾಗಲೇ ನಿರ್ದಿಷ್ಟ ಉಪಬಂಧ ಮಾಡಿದ ಹೊರತು ಕೇಂದ್ರ ಸರ್ಕಾರವು ಆ ದಳವನ್ನು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆ ಉದ್ದೇಶಕ್ಕಾಗಿ ಆ ದಳವನ್ನು ಬಳಸುವುದು ಅಗತ್ಯವೇ ಅಥವಾ ಇಲ್ಲವೇ ಎಂಬುದನ್ನು ನೀವು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಒಂದು ಒಕ್ಕೂಟ ರಾಜ್ಯದ ಕಾನೂನನ್ನು ಅಲ್ಲಿಯ ಜನ ಪಾಲಿಸದಿದ್ದರೆ ಅಥವಾ ಒಂದು ಘಟಕದ ಕಾನೂನನ್ನು ಅಲ್ಲಿಯ ಜನ ಪಾಲಿಸದಿದ್ದರೆ ಒಕ್ಕೂಟದ ದಳಗಳು ಅಲ್ಲಿಗೆ ಹೋಗಿ ಕಾನೂನು ಹಾಗೂ ಸುವ್ಯವಸ್ಥೆ ನೆಲೆಗೊಳ್ಳಲು ಹಾಗೂ ಒಕ್ಕೂಟದ ಹಾಗೂ ಘಟಕಗಳ ಕಾನೂನುಗಳನ್ನು ಜನರು ಪಾಲಿಸುವಂತೆ ಮಾಡಲು ಘಟಕಗಳಿಗೆ ಸಹಾಯಮಾಡುವವೇ? ನೀವು, ಒಕ್ಕೂಟಕ್ಕೆ ಸೇರುವಂತೆ ಘಟಕಗಳನ್ನು ಹಾಗೂ ಘಟಕಗಳಾಗುವಂತೆ ರಾಜ್ಯಗಳನ್ನು ಕೇಳಿದರೆ, ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡಲು ಅಗತ್ಯವಿದ್ದರೆ ಅವುಗಳಿಗೆ ಸಹಾಯ ಮಾಡುವ ಹೊಣೆಯನ್ನು ನೀವು ಅಪ್ರತ್ಯಕ್ಷವಾಗಿ ತೆಗೆದುಕೊಂಡಂತಾಗುತ್ತದೆ ಮತ್ತು ಅದನ್ನು ನೆರವೇರಿಸಬೇಕಾಗುತ್ತದೆ. ಆದ್ದರಿಂದ ತುರ್ತುಸಂದರ್ಭಗಳಲ್ಲಿ ಆ ಉದ್ದೇಶಗಳಿಗಾಗಿ ಒಕ್ಕೂಟದ ದಳಗಳನ್ನು ಬಳಸುವುದಕ್ಕೆ ಅನುಮತಿ ನೀಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರಬೇಕು. ಉದ್ದೇಶಗಳನ್ನು ನಿರ್ದಿಷ್ಟವಾಗಿ ತಿಳಿಸಬೇಕಾದುದು ಅಗತ್ಯ ಎಂಬುದು ನನ್ನ ಅಭಿಪ್ರಾಯ. ರಾಜ್ಯದ ದಳಗಳ ಅಗತ್ಯ ಉಂಟಾಗುವ ಇತರ ಬೇರೆ ಉದ್ದೇಶಗಳಿರಬಹುದು ಮತ್ತು ಅವುಗಳನ್ನು ನಿರ್ದಿಷ್ಟಪಡಿಸುವುದು ನಮಗೆ ಸಾಧ್ಯವಾಗದಿದ್ದರೆ ನಾವು ಕೊನೆಯಲ್ಲಿ 'ರಾಜ್ಯವು ಕಾಲಕಾಲಕ್ಕೆ ನಿರ್ಧರಿಸಬಹುದಾದ ಅಂಥ ಇತರ ಉದ್ದೇಶಗಳಿಗಾಗಿ' ಎಂದು ಸೇರಿಸಬಹುದು. ರಾಜ್ಯದಳಗಳನ್ನು ಬಳಸಬೇಕಾಗುವ ತುರ್ತುಸಂದರ್ಭಗಳ ಸೇರ್ಪಡೆಗಾಗಿ ನಿರ್ದಿಷ್ಟ ಉಪಬಂಧವನ್ನು ಮಾಡಬೇಕಾಗುತ್ತದೆ. ಒಕ್ಕೂಟದ ದಳಗಳು ವಿದೇಶಿ ಆಕ್ರಮಣದಿಂದ ಒಕ್ಕೂಟದ ಪ್ರದೇಶಗಳನ್ನು ರಕ್ಷಿಸುವ ಉದ್ದೇಶಕ್ಕಾಗಿ ಮಾತ್ರವಲ್ಲದೆ ಆಂತರಿಕ ಕಲಹಗಳಿಂದ ಒಕ್ಕೂಟದ ಭಾಗಗಳನ್ನು ಅಥವಾ ಘಟಕಗಳನ್ನು ರಕ್ಷಿಸುವ ಉದ್ದೇಶಕ್ಕಾಗಿಯೂ ಇರುತ್ತವೆ. ತರುವಾಯದ ಉದ್ದೇಶಕ್ಕೆ ರಾಜ್ಯದ ದಳಗಳನ್ನು ಬಳಸುವುದು ಮಹತ್ತ್ವದ್ದು ಮತ್ತು ಅಗತ್ಯವಾದುದು ಎಂಬುದು ನನ್ನ ಅಭಿಪ್ರಾಯ. ನಮ್ಮ ಹೊಸ ಸರ್ಕಾರವು ಕಾರ್ಯಮಾಡಲು ಉದ್ಯುಕ್ತವಾಗುತ್ತಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎರಡನೆಯ ಉದ್ದೇಶಕ್ಕಾಗಿ ಆ ದಳಗಳನ್ನು ಬಳಸಲು ಒಕ್ಕೂಟ ಸರ್ಕಾರಕ್ಕೆ ಅಂಥ ಅಧಿಕಾರವನ್ನು ನಿರ್ದಿಷ್ಟವಾಗಿ ನೀಡುವುದು ಅಗತ್ಯ. ಈ ಬಗ್ಗೆ ಶ್ರೀ ಸಂತಾನಮ್ ನನ್ನ ಮಾತನ್ನು ಒಪ್ಪುತ್ತಾರೆಂದು ತೋರುತ್ತದೆ. ಅವರ ಮೇರೆಗೆ, ಉದ್ದೇಶಗಳನ್ನು ಪರಿಭಾಷಿಸುವ ಪದಗಳನ್ನು ಬಿಟ್ಟುಬಿಡುವುದರಿಂದ ರಾಜ್ಯದ ಅಧಿಕಾರ ವ್ಯಾಪಕಗೊಳ್ಳುತ್ತದೆ. ಇದರಿಂದ ಅಧಿಕಾರಗಳ ಬಗ್ಗೆ ಸಂಕುಚಿತವಾಗಿ ಅರ್ಥಮಾಡಿಕೊಂಡು ತುರ್ತು ಸಂದರ್ಭಗಳಲ್ಲಿ ತೊಂದರೆಯುಂಟಾಗಿ ರಾಜ್ಯದ ಸುರಕ್ಷತೆಗೆ ಭಂಗ ಬರಬಹುದೇ ಎಂದು ನನಗೆ ಸಂದೇಹ. ಆದ್ದರಿಂದ ನಾನು ಅವರ ತಿದ್ದುಪಡಿಯನ್ನು ವಿರೋಧಿಸದಿದ್ದರೂ, ಅವರು ತಮ್ಮ ತಿದ್ದುಪಡಿಗಾಗಿ ಆಗ್ರಹಿಸದೇ, ಕೊನೆಯಲ್ಲಿ 'ರಾಜ್ಯವು ಮುಕ್ತ ಹಾಗೂ ಸರಿಯಾದುದೆಂದು ಭಾವಿಸುವ ಅಂಥ ಬೇರೆ ಉದ್ದೇಶಗಳಿಗಾಗಿ' ಎಂಬ ಪದಗಳನ್ನು ಸೇರಿಸುವ ಬೇರೆ ತಿದ್ದುಪಡಿಯನ್ನು ತರುವುದು ಒಳಿತು ಎಂದು ಹೇಳಬಲ್ಲೆ. ಈ ತಿದ್ದುಪಡಿಯನ್ನು ತರಲು ಅವರು ಉದ್ದೇಶಿಸಿರುವ ಬೇರೆ ಸಂದರ್ಭಗಳನ್ನು ಇಂಥ

ತಿದ್ದುಪಡಿ ಒಳಗೊಳ್ಳುತ್ತದೆ. ನಾನು ಸದನದ ಪರಿಶೀಲನೆಗಾಗಿ ಮತ್ತು ತದನಂತರ ಕರಡು ರಚನಾಸಮಿತಿಯ ಪರಿಶೀಲನೆಗಾಗಿ ಈ ಅಭಿಪ್ರಾಯಗಳನ್ನು ತಿಳಿಸುತ್ತಿದ್ದೇನೆ.

ನನ್ನ ಗೌರವಾನ್ವಿತ ಮಿತ್ರ ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ೨ನೇ ತಿದ್ದುಪಡಿಯ ಬಗ್ಗೆ ಹೇಳುವುದಾದರೆ, ಈ ಕಾನೂನನ್ನು ನೋಡಿಕೊಳ್ಳುತ್ತಿರುವ ಮತ್ತು ಎಲ್ಲ ಪ್ರಯೋಗಶೀಲ ಕಾರ್ಯವನ್ನು ಮಾಡುತ್ತಿರುವ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರನ್ನು, ಪ್ರತಿಯೊಂದು ರಾಜ್ಯವು ಮಾಡುತ್ತಿರುವ ಪ್ರವೇಶ ಲಿಖಿತದ (ಇನ್‌ಸ್ಟ್ರುಮೆಂಟ್ ಆಫ್ ಆ್ಯಕ್ಸೆಷನ್) ದೃಷ್ಟಿಯಿಂದ, ರಾಜ್ಯಗಳ ಅನುಕೂಲತೆಗೆ ಹೊಂದುವಂತೆ ಸೂಕ್ತ ಬದಲಾವಣೆಗಳನ್ನು ಮಾಡಬಹುದೇ ಎಂದು ನೋಡಬೇಕೆಂದು ಕೋರುತ್ತೇನೆ. ಭಾರತ ಸರ್ಕಾರದ ಹೆಸರಿನಲ್ಲಿ ನಾವು ರಾಜ್ಯಗಳಿಗೆ ಯಾವುದೇ ಖಚಿತ ಭರವಸೆ ನೀಡುವುದಿದ್ದರೆ, ಈ ಅನುಸೂಚಿ ಮಾಡುವ ಮೂಲಕ ನಾವು ರಾಜ್ಯಗಳ ಅಧಿಕಾರವನ್ನು ಅತಿಕ್ರಮಿಸುತ್ತಿಲ್ಲ ಎಂಬ ಅಭಿಪ್ರಾಯ ಮೂಡುವಂತೆ ನೋಡಿಕೊಳ್ಳಬೇಕು. ಈ ಉಪಬಂಧಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಿ, ಈ ವಿಷಯದಲ್ಲಿ ರಾಜ್ಯಗಳಿಗೆ ಮೀಸಲಾಗಿರುವುದನ್ನು ಅತಿಕ್ರಮಿಸುತ್ತಿರುವ ಅರ್ಥಬರುವಂಥ ಪದಗಳಿವೆಯೇ ಎಂದು ನೋಡಬೇಕು ಎಂದು ಕೋರುತ್ತೇನೆ. ಈ ವಿಷಯದ ಬಗ್ಗೆ ಅವರು ರಾಜ್ಯ ಪ್ರತಿನಿಧಿಗಳಾದ ಶ್ರೀ ಬಿ.ಎಲ್. ಮಿಟ್ಟರ್ ಮತ್ತಿತರರೊಡನೆ ಮಾತುಕತೆ ನಡೆಸಿ ಇತ್ಯರ್ಥಗೊಳಿಸಬೇಕು. ಅವರ ಉದ್ದೇಶವೂ ಅದೇ ಆಗಿದೆ, ಎಂದರೆ ಈ ದೇಶದ ಪ್ರದೇಶಗಳನ್ನು ರಕ್ಷಿಸಲು ಬಲಿಷ್ಠದಳವನ್ನು ಮತ್ತು ಕಾನೂನು ಹಾಗೂ ಸುವ್ಯವಸ್ಥೆ ಕಾಯ್ದುಕೊಳ್ಳಲು ಮತ್ತು ದೇಶದೊಳಗಿನ ಉಗ್ರ ಕ್ಷೋಭೆಗಳನ್ನು ತಡೆಗಟ್ಟಲು ಒಕ್ಕೂಟ ಸರ್ಕಾರಕ್ಕಾಗಿ ಬಲಿಷ್ಠ ದಳಗಳನ್ನು ಸೃಜಿಸುವುದು. ನನ್ನ ಈ ಸೂಚನೆಗಳನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಹಾಗೂ ಸದನ ಪರಿಗಣಿಸುವುದೆಂದು ಆಶಿಸುತ್ತೇನೆ.

**ಶ್ರೀ ಕೆ.ಟಿ.ಎಮ್. ಅಹ್ಮದ್ ಇಬ್ರಾಹಿಮ್ ಸಾಹಿಬ್** (ಮದ್ರಾಸ್ : ಮುಸ್ಲಿಮ್) : ಮಾನ್ಯರೆ, ಸದನದ ಮುಂದಿರುವ ಹಲವಾರು ತಿದ್ದುಪಡಿಗಳನ್ನು ಒಮ್ಮಿಂದೊಮ್ಮೆಲೆ ಹಿಂಪಡೆಯುತ್ತಿರುವುದರಿಂದ ಸದಸ್ಯರಿಗೆ ಉಂಟಾಗುತ್ತಿರುವ ಅಡ್ಡಿ ಹಾಗೂ ಕಷ್ಟದ ಬಗ್ಗೆ ಈ ಸಂದರ್ಭದಲ್ಲಿ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಕಾರ್ಯಸೂಚಿಯಲ್ಲಿ ಹಲವಾರು ತಿದ್ದುಪಡಿಗಳಿವೆ. ಸದಸ್ಯರು ಒಮ್ಮಿಂದೊಮ್ಮೆಲೆ ಒಬ್ಬರ ಅನಂತರ ಒಬ್ಬರು ಎದ್ದು ಅವುಗಳನ್ನು ಹಿಂಪಡೆಯುತ್ತಾರೆ. ಹೀಗೆ ಹಿಂಪಡೆಯುವುದು ಸದಸ್ಯರ ವೈಯಕ್ತಿಕ ನಿರ್ಧಾರವಾಗಿರದೇ, ಅವರು ಸೇರಿರುವ ಪಕ್ಷವು ಸದನದ ಹೊರಗೆ ಕೈಗೊಳ್ಳುವ ನಿರ್ಧಾರಗಳಿಂದಾಗಿ ಹೀಗಾಗುತ್ತದೆ ಎಂಬುದು ಸ್ಪಷ್ಟ. ಸದಸ್ಯರು ಹಿಂಪಡೆಯುವಿಕೆಯ ಬಗ್ಗೆ ಮೊದಲೇ ತಿಳಿಸಿದರೆ, ಒಮ್ಮೆಲೆ ಹಿಂಪಡೆಯುವುದರಿಂದ ಸದನದ ಇತರ ಸದಸ್ಯರಿಗೆ ಉಂಟಾಗುವ ಅನನುಕೂಲತೆಯನ್ನು ತಪ್ಪಿಸಬಹುದು ಎಂದು ನಾನು ಸದನದ ಸದಸ್ಯರನ್ನು ಹಾಗೂ ಸಭಾಧ್ಯಕ್ಷರನ್ನು ಕೋರುತ್ತೇನೆ. ನಾವು ಸದನಕ್ಕೆ ಬರುವಾಗ ವಿಷಯಸೂಚಿಯಲ್ಲಿರುವ ಎಲ್ಲ ತಿದ್ದುಪಡಿಗಳ ಬಗೆಗೂ ಸಿದ್ಧತೆ ಮಾಡಿಕೊಂಡು ಹಾಗೂ, ಅದನ್ನು ಬೆಂಬಲಿಸಬೇಕೇ ಅಥವಾ ವಿರೋಧಿಸಬೇಕೇ ಎಂಬ ಅಭಿಪ್ರಾಯಗಳನ್ನು ರೂಪಿಸಿಕೊಂಡು ಬರಬೇಕಾಗುತ್ತದೆ. ಹೀಗೆ ಮುನ್ಸೂಚನೆಯಿಲ್ಲದೆ ಹಿಂಪಡೆಯುವುದರಿಂದ ನಮ್ಮ ಸಮಯ ಹಾಗೂ ಶಕ್ತಿ ಎರಡೂ ವ್ಯರ್ಥವಾಗುತ್ತವೆ. ಸಂಬಂಧಪಟ್ಟ ಪಕ್ಷವು ಈ ತಿದ್ದುಪಡಿಗಳ ಬಗ್ಗೆ ನಿರ್ಧರಿಸಿದೊಡನೆಯೇ ಆ ನಿರ್ಧಾರಗಳನ್ನು ಕಚೇರಿಗೆ ತಿಳಿಸಿದರೆ ಕಚೇರಿಯಿಂದ ಸದನದ ಸದಸ್ಯರಿಗೆ, ಹಿಂಪಡೆಯಲಾದ ತಿದ್ದುಪಡಿಗಳ ಬಗ್ಗೆ ತಿಳಿಸಿದರೆ ಒಳ್ಳೆಯದು. ಸಂಬಂಧಪಟ್ಟ ಪಕ್ಷವು ಸದಸ್ಯರ ಅನುಕೂಲತೆಯ ಬಗ್ಗೆ ಗಮನವಿರಿಸಿ, ತಿದ್ದುಪಡಿಗಳ ಬಗೆಗಿನ ತನ್ನ ನಿರ್ಧಾರವನ್ನು ಸಕಾಲದಲ್ಲಿ ಕಚೇರಿಗೆ ತಿಳಿಸಿದರೆ ನಾವು ಮಂಡನೆಯಾಗುತ್ತಿರುವ ಅಥವಾ ಆಗದಿರುವ ತಿದ್ದುಪಡಿಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅಧ್ಯಕ್ಷರಾಗಲಿ, ಸದನವಾಗಲೀ, ಅಥವಾ ನಾನೇ ಆಗಲಿ ಯಾರೇ ಸದಸ್ಯರಿಗೆ ಹಿಂಪಡೆಯುವಿಕೆಯ ಸೂಚನೆಯನ್ನು ಮೊದಲೇ ನೀಡಬೇಕೆಂದು ಒತ್ತಾಯಿಸಲು ಆಗುವುದಿಲ್ಲ ಎಂಬುದರ ಅರಿವು ನನಗಿದೆ. ಸಂಬಂಧಪಟ್ಟ

ಪಕ್ಷವು ವಿಧಾನಸಭೆ ಸೇರುವ ದಿನಾಂಕ ಹಾಗೂ ಸಮಯಕ್ಕೆ ಬಹುಮುಂಚಿತವಾಗಿಯೇ ಈ ತಿದ್ದುಪಡಿಗಳ ಬಗ್ಗೆ ನಿರ್ಧಾರ ಕೈಗೊಂಡಿರುತ್ತದೆಂದು ನಮಗೆಲ್ಲ ಗೊತ್ತು. ಅವರು ಇಂಥಿಂಥ ತಿದ್ದುಪಡಿಗಳನ್ನು ಮಂಡಿಸುತ್ತಿಲ್ಲವೆಂದು ಮೊದಲೇ ತಿಳಿಸುವುದರಿಂದ ಸದಸ್ಯರಿಗೆ ಅನುಕೂಲವಾಗುತ್ತದೆ. ಈ ವಿಧಾನವನ್ನು ಅಳವಡಿಸಬೇಕೆಂದು ತಮ್ಮನ್ನು ಕೋರುತ್ತೇನೆ. ನೂರಾರು ತಿದ್ದುಪಡಿಗಳನ್ನು ಸಲ್ಲಿಸಿದ್ದರೂ ಆ ಪೈಕಿ ಕೆಲವೇ ಕೆಲವು ತಿದ್ದುಪಡಿಗಳೂ ಮಂಡನೆಯಾಗುವುದಿಲ್ಲ. ಏಕೆ ಹೀಗೆ ಅನನುಕೂಲವಾಗುತ್ತದೆ. ಶಕ್ತಿ ವ್ಯರ್ಥವಾಗುತ್ತದೆ? ಮಾನ್ಯರೆ, ಇತರ ಸದಸ್ಯರ ಅನುಕೂಲತೆಯ ಬಗ್ಗೆ ತುಸು ಕಾಳಜಿ ಇರಲಿ ಎಂದು ನಾನು ನಿಮ್ಮನ್ನು ಹಾಗೂ ಸಂಬಂಧಪಟ್ಟ ಪಕ್ಷವನ್ನು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಸದನದ ಪ್ರತಿಯೊಬ್ಬ ಸದಸ್ಯನಿಗೂ ತಾನು ಬಯಸಿದ ಯಾವುದೇ ತಿದ್ದುಪಡಿಯ ಬಗ್ಗೆ ಪೂರ್ವಸೂಚನೆ ನೀಡುವ ಹಕ್ಕು ಇರುತ್ತದೆ ಮತ್ತು ಯಾರೇ ಸದಸ್ಯ ತನಗಿರುವ ಈ ಹಕ್ಕಿನ ಲಾಭ ಪಡೆಯದೇ ಹಾಗೂ ತಿದ್ದುಪಡಿ ಸೂಚನೆಯನ್ನು ತನ್ನ ಹೆಸರಿನಲ್ಲಿ ನೀಡದೇ ಬೇರೊಬ್ಬರನ್ನು ಅವಲಂಬಿಸಿ, ಹಾಗೇ ಅವಲಂಬಿಸಿದ ಸದಸ್ಯ ಈತನ ತಿದ್ದುಪಡಿಯನ್ನು ಮಂಡಿಸದೇ ಹೋದರೆ ಈ ಸದಸ್ಯ ದೂರುವಂತಿಲ್ಲ. ತಿದ್ದುಪಡಿಗಳನ್ನು ಕಳಿಸಲು ಸದಸ್ಯರಿಗೆ ಸಮಯ ನೀಡಲಾಗಿದ್ದು, ಅವರಿಗೆ ಆ ತರುವಾಯ ಅದು ಅಗತ್ಯವಿಲ್ಲವೆಂದು ತೋರಬಹುದು. ಇದರಲ್ಲಿ ಅನುಕೂಲತೆ ಅಥವಾ ಅನನುಕೂಲತೆ ಪ್ರಶ್ನೆ ಇರುವುದಿಲ್ಲ. ಇಂಥ ಹಿಂಪಡೆಯುವಿಕೆಯಿಂದ ಅನನುಕೂಲತೆಯಾಗುವುದೇನೋ ನಿಜ. ಆದರೆ ಒಬ್ಬ ಸದಸ್ಯ ತಿದ್ದುಪಡಿ ಮಂಡಿಸಲಿಲ್ಲವೆಂದು ಇನ್ನೊಬ್ಬ ಸದಸ್ಯ ದೂರುವಂತಿಲ್ಲ. ಯಾವುದೋ ಒಂದು ವಿಷಯ ತಿದ್ದುಪಡಿ ಮಂಡಿಸಲು ಬೇಕಾದಷ್ಟು ಮಹತ್ತ್ವದ್ದಾಗಿದೆಯೆಂದು ಸದಸ್ಯನಿಗೆ ತೋರಿದರೆ ಆತನೇ ಸರಿಯಾದ ಸಮಯದೊಳಗಾಗಿ ತಿದ್ದುಪಡಿ ಸೂಚನೆ ನೀಡಬಹುದಿತ್ತು. ಯಾರೇ ಸದಸ್ಯ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಬಯಸಿದರೆ ನಾನು ಆತನನ್ನು ತಡೆಯಲು ಆಗುವುದಿಲ್ಲ. ಆದರೆ ಸದಸ್ಯರು ಇತರ ಸದಸ್ಯರ ಅನುಕೂಲವನ್ನು ಗಣನೆಗೆ ತೆಗೆದುಕೊಂಡು ಹೊಂದಾಣಿಕೆ ಮಾಡಿಕೊಳ್ಳುತ್ತಾರೆಂಬ ನಂಬಿಕೆ ನನಗಿದೆ.

ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಈಗ ಚರ್ಚೆಗೆ ಉತ್ತರಿಸಬಹುದು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಈವರೆಗಿನ ಚರ್ಚೆಯ ಮೇರೆಗೆ ಈ ಬಾಬಿನ ವಿಷಯದಲ್ಲಿ ನಿರ್ಧಾರ ಕೈಗೊಳ್ಳಲು ಎರಡು ತಿದ್ದುಪಡಿಗಳು ಮಾತ್ರ ನಮ್ಮ ಮುಂದಿವೆ. ಒಂದು ತಿದ್ದುಪಡಿಯನ್ನು ಶ್ರೀ ಸಂತಾನಮ್ ಮಂಡಿಸಿದ್ದಾರೆ. ಕೇವಲ ಭಾಷಿಕ ಬದಲಾವಣೆಯಿದ್ದು ಅರ್ಥಕ್ಕೆ ಬಾಧಕವಾಗದ ಆ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. ಅವರು ತಿದ್ದುಪಡಿ ಮಾಡಿದಂತೆ ೫ನೇ ಬಾಬಿನ ೧ನೇ ಭಾಗ ಮುಂದಿನಂತಿದೆ:

> "ನೌಕಾ, ಭೂ ಮತ್ತು ವಾಯುದಳಗಳ ಸೃಜನೆ, ತರಬೇತಿ, ನಿರ್ವಹಣೆ ಮತ್ತು ನಿಯಂತ್ರಣ ಮತ್ತು ಅವುಗಳ ನಿಯೋಜನೆ."

ಆ ವಾಕ್ಯದಲ್ಲಿಯ ಉಳಿದ ಶಬ್ದಗಳನ್ನು ಬಿಟ್ಟುಬಿಡಲಾಗುತ್ತದೆ. 'ಅವುಗಳ ನೇಮಕಾತಿ' ಎಂದು ಹೇಳುವುದು ಮತ್ತು 'ಅದರೆ' ಎಂಬ ಶಬ್ದವನ್ನು ಕೈಬಿಡುವುದು ಉತ್ತಮವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಇದೊಂದೇ ಸಂಗತಿ.

**ಶ್ರೀ ಕೆ. ಸಂತಾನಮ್** : ಅದಕ್ಕೆ ನನ್ನ ಆಕ್ಷೇಪವಿಲ್ಲ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಶ್ರೀ ಅನೆಯವರು ಎತ್ತಿದ ಅಂಶ ಕುರಿತಂತೆ ಹೇಳುವುದಾದರೆ ಈ ದಳಗಳನ್ನು ಯಾವ ಉದ್ದೇಶಗಳಿಗೆ ಬಳಸಬಹುದು ಎಂಬುದಕ್ಕೆ ಕೆಲವು ಉದ್ದೇಶಗಳನ್ನಾದರೂ ತಿಳಿಸುವುದು ಅಪೇಕ್ಷಣೀಯ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆ ತಿಳಿಸುವುದರಿಂದ ಆ ದಳಗಳನ್ನು ಬಳಸಬಹುದಾದ ಉದ್ದೇಶಗಳ ಸರಣಿಯನ್ನು ಸೀಮಿತಗೊಳಿಸಿದಂತಾಗುತ್ತದೆಂಬ ಅಂಶವನ್ನು ಅವರೇ ಒಪ್ಪುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಮೂಲ ಕರಡಿನಲ್ಲಿ ತಿಳಿಸಿದ ಉದ್ದೇಶಗಳು ಈ ನಿಸ್ಸಂದಿಗ್ಧವಾದವುಗಳಾಗಿದ್ದು, ಸಶಸ್ತ್ರದಳಗಳನ್ನು ಬಳಸಬಹುದಾದ ಎಂಬ ಮಾತನ್ನು ಒಪ್ಪಿಕೊಳ್ಳಬೇಕು. ಮಾನ್ಯರೆ, ಈ ಬಾಬಿನ ೧ನೆಯ ಭಾಗದ ಕೊನೆಯಲ್ಲಿರುವ ಪದಗಳನ್ನು ಕೈಬಿಟ್ಟು ಶ್ರೀ ಸಂತಾನಮ್ ಅವರು ಸೂಚಿಸಿರುವಲ್ಲಿಗೆ ಆ ವಾಕ್ಯವನ್ನು ಬಿಡುವುದು ಉತ್ತಮ. ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ ಇನ್ನೊಂದು ಮಹತ್ತ್ವದ ತಿದ್ದುಪಡಿಯ ಸಂಬಂಧದಲ್ಲಿ, ಅದನ್ನು ಬೆಂಬಲಿಸುವವರ ಅಭಿಪ್ರಾಯ ಹಾಗೂ ಈ ಬಾಬಿನ ೨ನೆಯ ಭಾಗವನ್ನು ರಚಿಸುವಾಗ ಸಮಿತಿಯ ಮನಸ್ಸಿನಲ್ಲಿದ್ದ ಅಭಿಪ್ರಾಯ ಒಂದೇ ಆಗಿದೆ. ಸಮಿತಿಯ ಅಭಿಪ್ರಾಯವು, ವರದಿಯ ೫ನೇ ಕಂಡಿಕೆಯಲ್ಲಿ ವ್ಯಕ್ತವಾಗಿದ್ದು ಅದು ಮುಂದಿನಂತಿದೆ:

"ಭಾರತೀಯ ರಾಜ್ಯಗಳಲ್ಲಿ ಸೃಜಿಸಿ, ನಿಯೋಜಿಸಲಾದ ಸಶಸ್ತ್ರ ದಳಗಳ 'ಬಲ, ಸಂಘಟನೆ ಹಾಗೂ ನಿಯಂತ್ರಣದ' ಬಾಬನ್ನು ಒಕ್ಕೂಟ ಪಟ್ಟಿಯಲ್ಲಿ ಸೇರಿಸಿದ್ದೇವೆ. ಅಂಥ ದಳಗಳ ಮೇಲೆ ಚಲಾಯಿಸುತ್ತಿರುವ ಸಮನ್ವಯ ಹಾಗೂ ನಿಯಂತ್ರಣದ ಈಗಿನ ಎಲ್ಲ ಅಧಿಕಾರಗಳನ್ನು ಕಾಪಾಡಿಕೊಳ್ಳುವುದು ನಮ್ಮ ಉದ್ದೇಶವಾಗಿದೆ."

ಭಾರತೀಯ ರಾಜ್ಯಗಳಲ್ಲಿರುವ ಸಶಸ್ತ್ರದಳಗಳು ಹಾಗೂ ಕೇಂದ್ರದ ನಡುವಣ ಸಂಬಂಧದ ತೀವ್ರತೆಯತ್ತ ಗಮನ ಸೆಳೆಯುವುದೇ ಈ ತಿದ್ದುಪಡಿಯ ಉದ್ದೇಶ. ನನ್ನ ಗೌರವಾನ್ವಿತ ಮಿತ್ರ ಶ್ರೀ ಪಟ್ಟಾಣಿಯವರು ಆ ದಳಗಳ ಪ್ರವರ್ಗಗಳನ್ನು ಕುರಿತು ತಿಳಿಸಿದರು. ಸಮಿತಿಯು ತನ್ನ ಅರಿವಿಗೆ ಬಂದಿರುವ ಪ್ರಸ್ತುತ ಸ್ಥಿತಿಯನ್ನು ಈ ನಿರ್ದಿಷ್ಟ ಬಾಬಿನಲ್ಲಿ ತಿಳಿಸಿದೆ. ಈ ತಿದ್ದುಪಡಿಯ ಮಂಡನೆಕಾರರ ಅಭಿಪ್ರಾಯದ ಮೇರೆಗೆ, ಬಾಬಿನಲ್ಲಿರುವ ಪದಗಳಿಗಿಂತ ತಿದ್ದುಪಡಿಯಲ್ಲಿರುವ ಪದಗಳು ಸಮಿತಿಯ ಆಶಯವನ್ನು ಸಂಪೂರ್ಣ ಖಚಿತವಾಗಿ ವ್ಯಕ್ತಪಡಿಸಿವೆ. ನಾನು ಈ ವಿಷಯವನ್ನು ಪರೀಕ್ಷಿಸಿ ಸಮಿತಿಯ ಆಶಯವು ತದನುಸಾರವಾಗಿಯೇ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದಾರೆ. ನಾನು ಹಾಗೆ ಮಾಡುವುದಾಗಿ ಮತ್ತು ಅಗತ್ಯವಾದರೆ ಸಂವಿಧಾನವನ್ನು ಸದನದ ಮುಂದಿರಿಸಿದಾಗ ವರದಿಯ ೫ನೇ ಕಂಡಿಕೆಯಲ್ಲಿರುವ ಆಶಯಕ್ಕನುಸಾರವಾಗಿ ಅದನ್ನು ರಚಿಸೋಣವೆಂದು ಈ ತಿದ್ದುಪಡಿಯ ಮಂಡನೆಕಾರರಿಗೆ ಭರವಸೆ ನೀಡುತ್ತೇನೆ. ಭರವಸೆಯ ಹಿನ್ನೆಲೆಯಲ್ಲಿ ಮಂಡನೆಕಾರರು ತಮ್ಮ ತಿದ್ದುಪಡಿಗಾಗಿ ಒತ್ತಾಯಿಸುವುದಿಲ್ಲವೆಂದು ಆಶಿಸುತ್ತೇನೆ ಮಾನ್ಯರೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ :** ನಾನು ತಿದ್ದುಪಡಿಗಾಗಿ ಆಗ್ರಹಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಸಂತಾನಮ್ ಅವರ ತಿದ್ದುಪಡಿ ಮಂಡನೆಕಾರರಿಗೆ ಸಮ್ಮತವಿದೆ. ಅದರಲ್ಲಿ ಚಿಕ್ಕ ಭಾಷಿಕ ಬದಲಾವಣೆ ಆಗಿದೆ ಅಷ್ಟೆ.

ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ೫ನೇ ಬಾಬಿನಲ್ಲಿ "ವಾಯುದಳಗಳು" ಎಂಬ ಶಬ್ದಗಳ ಅನಂತರ "ಒಕ್ಕೂಟ ಸ್ಥಾಪನೆಗಳಲ್ಲಿ" ಎಂಬ ಪದಗಳನ್ನು ಸೇರಿಸುವ ಒಂದು ಭಾಷಿಕ ತಿದ್ದುಪಡಿಯನ್ನು ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಮಂಡಿಸಿದ್ದಾರೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ :** ಈ ತಿದ್ದುಪಡಿಯನ್ನು ಕುರಿತ ನನ್ನ ವಿಚಾರವನ್ನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅದನ್ನು ಹಿಂತೆಗೆದುಕೊಳ್ಳಲಾಗಿದೆ. ೨ನೆಯ ತಿದ್ದುಪಡಿಗೆ ಆಗ್ರಹಿಸಿಲ್ಲ. ಶ್ರೀ ಸಂತಾನಮ್ ಅವರು ಮಾಡಿದ ತಿದ್ದುಪಡಿಯ ಮೇರೆಗಿನ ಮೂಲ ಬಾಬನ್ನು ಮತಕ್ಕೆ ಹಾಕುತ್ತೇನೆ.

ಶ್ರೀ ಸಂತಾನಮ್ ಅವರ ತಿದ್ದುಪಡಿಗನುಸಾರವಾಗಿ ತಿದ್ದುಪಡಿಯಾದ ೫ನೇ ಬಾಬನ್ನು ಅಂಗೀಕರಿಸಲಾಯಿತು.

## ಬಾಬು ೬

**ಮಾನ್ಯ ಸಭಾಧ್ಯಕ್ಷರು :** ನಾವೀಗ ೬ನೇ ಬಾಬಿಗೆ ಹೋಗೋಣ.

**ಶ್ರೀ ವಿ.ಟಿ. ಕೃಷ್ಣಮಾಚಾರಿ :** ಮಾನ್ಯರೆ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯನ್ನು ದೃಷ್ಟಿಯಲ್ಲಿರಿಸಿಕೊಂಡು ನಾನು ನನ್ನ ತಿದ್ದುಪಡಿಗಾಗಿ ಆಗ್ರಹಿಸುವುದಿಲ್ಲ. ನಾನು ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ ಮತ್ತು ಈ ತಿದ್ದುಪಡಿಯನ್ನು ಮಂಡಿಸಲು ಬಯಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರೇ, ೬ನೇ ಬಾಬಿಗೆ ತಿದ್ದುಪಡಿಯನ್ನು ಮಂಡಿಸಬೇಕು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ನಾನು ಸೂಚನೆ ನೀಡಿದ ತಿದ್ದುಪಡಿಯ ಪಾಠ ಮುಂದಿನಂತಿದೆ:

"೬ನೇ ಬಾಬಿಗೆ ಮುಂದಿನದನ್ನು ಬದಲಿಯಾಗಿ ಸೇರಿಸಬೇಕು :

'ರಕ್ಷಣೆಗಾಗಿ ಅಥವಾ ಯುದ್ಧವನ್ನು ನಡೆಸುವುದಕ್ಕಾಗಿ ಮತ್ತು ಹಾಗೆಂದು ಒಕ್ಕೂಟ ಕಾನೂನಿನಿಂದ ಘೋಷಿತವಾದ ಉದ್ದೇಶಕ್ಕಾಗಿ ಅಗತ್ಯವಾದ ಉದ್ದಿಮೆಗಳು.'"

ತಿದ್ದುಪಡಿಯ ೧ನೆಯ ಭಾಗ ವ್ಯಾಜ್ಯಕ್ಕೆ ದಾರಿಮಾಡಿಕೊಡಬಹುದೆಂದು, ಉದ್ದಿಮೆಗಳು ರಕ್ಷಣಾ ಉದ್ದೇಶಗಳಿಗಾಗಿ ಅಗತ್ಯವೇ ಎಂಬ ಬಗ್ಗೆ ನ್ಯಾಯಿಕ ನಿರ್ಣಯ ಬೇಕಾಗಬಹುದೆಂಬ ಮಾತು ಕೇಳಿಬಂದಿದೆ ಎಂದು ನಾನಿಲ್ಲಿ ತಿಳಿಸಬೇಕು. ಆದ್ದರಿಂದ ನನ್ನ ಪ್ರಸ್ತಾವದಲ್ಲಿ ಎಂದರೆ ರಕ್ಷಣೆಗಾಗಿ ಮತ್ತು ಯುದ್ಧ ನಡೆಸುವುದಕ್ಕಾಗಿ ಅಗತ್ಯವೆಂದು ಒಕ್ಕೂಟ ಕಾನೂನು ಘೋಷಿಸಿದ ಉದ್ದಿಮೆಗಳು. ಇದರಲ್ಲಿ ಚಿಕ್ಕ ಭಾಷಿಕ ಬದಲಾವಣೆ ಬೇಕಾಗಬಹುದೆಂದು ಆ ಭಾಷಿಕ ಬದಲಾವಣೆಗೆ ಸದನದ ಆಕ್ಷೇಪಣೆ ಇಲ್ಲದಿದ್ದರೆ, ನಾನು ಆ ಭಾಷಿಕ ಬದಲಾವಣೆಯೊಂದಿಗೆ "ರಕ್ಷಣೆಗಾಗಿ ಅಥವಾ ಯುದ್ಧ ನಡೆಸುವುದಕ್ಕಾಗಿ ಅಗತ್ಯವಿರುವ, ಒಕ್ಕೂಟ ಕಾನೂನಿನಿಂದ ಘೋಷಿತವಾದ ಉದ್ದಿಮೆಗಳು" ಎಂಬುದರೊಂದಿಗೆ ಖಂಡವನ್ನು ಮಂಡಿಸುತ್ತೇನೆ.

ತಿದ್ದುಪಡಿಯನ್ನು ಮಂಡಿಸುವಾಗ ನಾನು ಕೆಲವು ವಿಚಾರಗಳನ್ನು ತಿಳಿಸಬೇಕು. ಮೊದಲನೆಯದಾಗಿ ಈ ಬಾಬಿನ ಹಿಂದೆ, ಪ್ರಾಂತೀಯ ಸರ್ಕಾರದ ಸಾಮಾನ್ಯ ಪ್ರಕಾರ್ಯಗಳಲ್ಲಿ ಮಧ್ಯೆ ಪ್ರವೇಶಿಸುವ ಉದ್ದೇಶವಿಲ್ಲ ಎಂದರೆ ಸಾಮಾನ್ಯವಾಗಿ ಉದ್ದಿಮೆಗಳು ಪ್ರಾಂತೀಯ ಸರ್ಕಾರದ ಏಕೈಕ ಆಸಕ್ತಿ, ಆ ನಿಯಮಕ್ಕೆ ಅಪವಾದವಾಗಿ "ರಕ್ಷಣಾ ಉದ್ದಿಮೆ" ಎಂಬ ಪದವನ್ನು ಹಾಕಲಾಯಿತು. ಆದರೆ ಈ "ರಕ್ಷಣಾ ಉದ್ದಿಮೆ" ಎಂಬ ಪದದ ಕಾರಣಕ್ಕಾಗಿ ತರ್ಕಬದ್ಧ ಟೀಕೆ ಬರುವುದಕ್ಕೆ ಅವಕಾಶವಿದೆ. ಏಕೆಂದರೆ ಯುದ್ಧದ ಆಧುನಿಕ ಸ್ಥಿತಿಯಲ್ಲಿ ಯಾವುದೇ ಉದ್ದಿಮೆಯನ್ನು ರಕ್ಷಣಾ ಉದ್ದಿಮೆ ಎಂದು ಪರಿಗಣಿಸಬಹುದು ಮತ್ತು ಈ ಬಾಬಿನ ನೆಪದಿಂದ ಕೇಂದ್ರ ಶಾಸಕಾಂಗವು ಪ್ರಾಂತೀಯ ಸ್ವಾಯತ್ತತೆ ಮತ್ತು ಪ್ರಾಂತೀಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಹುದು.

ಆದ್ದರಿಂದ "ರಕ್ಷಣಾ ಉದ್ದಿಮೆಗಳು" ಎಂಬ ಪದಗಳಿಗೆ ಒಂದು ನಿರ್ದಿಷ್ಟ ಅರ್ಹತೆ ಬೇಕಾಗುತ್ತದೆ ಮತ್ತು ತಿದ್ದುಪಡಿಯಿಂದ ಆ ಅರ್ಹತೆ ದೊರಕಿದೆ. ಒಕ್ಕೂಟ ಕಾನೂನಿನ ಮೂಲಕ ಕೆಲವು ಉದ್ದಿಮೆಗಳನ್ನು ರಕ್ಷಣಾ ಉದ್ದಿಮೆಗಳು ಎಂದು ಘೋಷಿಸಲು ಒಕ್ಕೂಟ ಶಾಸಕಾಂಗಕ್ಕೆ ಅಧಿಕಾರ ದೊರೆಯುತ್ತದೆ. ಇದರಲ್ಲಿ ಆಗುವ ವ್ಯತ್ಯಾಸವೇನು ಎಂದು ಟೀಕಿಸಬಹುದು. ಇದಕ್ಕೆ ಉತ್ತರವೆಂದರೆ ಒಂದು ಉದ್ದಿಮೆಯು ರಕ್ಷಣಾ ಉದ್ದೇಶಕ್ಕಾಗಿ ಅಗತ್ಯವೇ ಅಥವಾ ಇಲ್ಲವೇ ಎಂಬುದನ್ನು ಘೋಷಿಸಬೇಕಾಗಿ ಬಂದಾಗ ಒಕ್ಕೂಟ ಶಾಸಕಾಂಗವು ಈ ಅಂಶದತ್ತ ಗಮನ ನೀಡಲೇಬೇಕಾಗುತ್ತದೆ. ಉದಾಹರಣೆಗೆ: ಅದು ತಪ್ಪಾಗಿ ಬಳಕೆಯಾಗಿದ್ದರೆ ಶಾಸಕಾಂಗದಲ್ಲಿರುವ ಜನಪ್ರತಿನಿಧಿಗಳು ಅಧಿನಿಯಮದ ಬಗ್ಗೆ ಆಕ್ಷೇಪವೆತ್ತಿ, ಒಕ್ಕೂಟ ರಕ್ಷಣೆಯಂಥ ಕ್ರಮದ ಉದ್ದೇಶದ ಅನುಷ್ಠಾನವಾಗುತ್ತಿಲ್ಲವೆಂದು, ಅದು ಕೇವಲ ಪ್ರಾರಂಭಿಕದಲ್ಲಿ ತಿಳಿಸಲಾದ ಉದ್ದೇಶವೆಂದು ಪ್ರಕರಣಗಳು ರಕ್ಷಣಾ ಉದ್ದೇಶದ ಆಶಯವನ್ನು ಅನುಷ್ಠಾನಗೊಳಿಸುವುದಿಲ್ಲವೆಂದು ಆಕ್ಷೇಪಿಸಬಹುದು. ಈ ತಿದ್ದುಪಡಿ ರಕ್ಷಣಾ ಉದ್ದೇಶವನ್ನು ನೆರವೇರಿಸುವುದಲ್ಲದೇ, ಈ ಬಾಬಿನ ನೆಪದಲ್ಲಿ ಕೇಂದ್ರ ಶಾಸಕಾಂಗವು ಪ್ರಾಂತೀಯ ಉದ್ದಿಮೆಗಳ ಬೆಳವಣಿಗೆ ಹಾಗೂ ಪ್ರೋತ್ಸಾಹದಂಥ ಪ್ರಾಂತೀಯ ನ್ಯಾಯಯುತ ಕ್ಷೇತ್ರವನ್ನು ಅತಿಕ್ರಮಿಸುವುದೆಂಬ ಪ್ರಾಂತ್ಯಗಳ ಸಂದೇಹವನ್ನು ನಿವಾರಿಸುತ್ತದೆ.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ** : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿ ಮುಂದಿನಂತಿದೆ: "೬ನೇ ಬಾಬಿನಲ್ಲಿ 'ರಕ್ಷಣಾ ಉದ್ದಿಮೆಗಳು' ಎಂಬ ಪದಗಳಿಗೆ 'ಫಿರಂಗಿ, ಬಂದೂಕು ಮುಂತಾದವು ಅಣುಬಾಂಬು ಮತ್ತು ಯುದ್ಧಸಾಮಗ್ರಿಗಳು' ಎಂಬ ಪದಗಳನ್ನು ಬದಲಿ ಸೇರಿಸಬೇಕು."

ಈ ಬಾಬು ಅಸ್ಪಷ್ಟವಾಗಿದೆ ಎಂಬ ವಾಸ್ತವಾಂಶ ಅರಿವಿಗೆ ಬಂದಿದ್ದು ಅದನ್ನು ಪ್ರಾರಂಭದಲ್ಲೇ ಒಪ್ಪಿಕೊಳ್ಳಲಾಗಿದೆ, ಯಾವ ಉದ್ದಿಮೆಗಳು ಈ ಪ್ರವರ್ಗಕ್ಕೆ ಸೇರುತ್ತವೆ ಎಂಬುದು ಸ್ಪಷ್ಟವಾಗಿಲ್ಲ. ಜವಳಿ ಅಥವಾ ಸಕ್ಕರೆ ಕಾರ್ಖಾನೆ, ವನಸ್ಪತಿ ಎಣ್ಣೆ ಅಥವಾ ಸಿಮೆಂಟ್ ಕಾರ್ಖಾನೆ, ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಆಹಾರ ಧಾನ್ಯಗಳ ಸಾಗುವಳಿ ಇವೆಲ್ಲ ರಕ್ಷಣೆಯ ಉದ್ದೇಶಕ್ಕಾಗಿ ಅಗತ್ಯವಾದವುಗಳೇ. ಇವೆಲ್ಲವನ್ನು ಅಥವಾ ಆ ಪೈಕಿ ಕೆಲವನ್ನು ೬ನೇ ಬಾಬಿನಲ್ಲಿ ಸೇರಿಸಿದರೆ ದೊಡ್ಡ ಗೊಂದಲವುಂಟಾಗುತ್ತದೆ. ಈಗಿರುವ ಪಟ್ಟಿಯನ್ನು ಭಾರತ ಸರ್ಕಾರದ ಅಧಿನಿಯಮದ ಪಟ್ಟಿಯೊಂದಿಗೆ ಹೋಲಿಸಿದಾಗ, ಆ ಅಧಿನಿಯಮದ ರಚನಕಾರರಿಗೆ ಈ ಬಾಬನ್ನು ಆ ವಿಧಾಯೀ ಪಟ್ಟಿಯಲ್ಲಿ ಸೇರಿಸುವುದು ಅಗತ್ಯವೆಂದು ಕಂಡುಬರಲಿಲ್ಲ. ಈಗಲೂ ಅದರಡಿ ಯಾವ ಉದ್ದಿಮೆಗಳನ್ನು ನಿಜವಾಗಿ ತರಬೇಕಾಗಿದೆ ಎಂಬ ಬಗ್ಗೆ ಯಾರಿಗೂ ಸ್ಪಷ್ಟತೆಯಿಲ್ಲ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಈಗಷ್ಟೆ ಮಂಡಿಸಿದ ತಿದ್ದುಪಡಿ ನಮ್ಮನ್ನು ಹೆಚ್ಚೇನು ದೂರ ಕೊಂಡೊಯ್ಯಲಾರದು. ಈಗಲೂ ಅವರು ಮಂಡಿಸಿದ ತಿದ್ದುಪಡಿಯ ಭಾಷೆ ಸಂದಿಗ್ಧವೇ ಆಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಸೇರಿಸಿರುವ ಉದ್ದೇಶದ ಬಗ್ಗೆ ಸದನಕ್ಕೆ ಸ್ಪಷ್ಟನೆ ಹಾಗೂ ವಿವರಣೆ ಬೇಕಾಗುತ್ತದೆ. ಅಂಥ ವಿವರಣೆ ದೊರೆತರೆ ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಅಥವಾ ಆ ಬಗ್ಗೆ ಆಗ್ರಹಿಸುವ ಬಗ್ಗೆ ಪರಿಶೀಲಿಸಲು ಅವಕಾಶವಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಮಾಧವರಾವ್ ಅವರೆ, ನೀವು ಸೂಚನೆ ನೀಡಿದ ತಿದ್ದುಪಡಿಯನ್ನು ನೋಡಿದೆ.

**ಶ್ರೀ ಎನ್. ಮಾಧವರಾವ್** (ಪೂರ್ವ ರಾಜ್ಯಗಳು) : ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಂಡಿಸಿದ ತಿದ್ದುಪಡಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನನಗೆ ನನ್ನ ತಿದ್ದುಪಡಿಯನ್ನು ಮಂಡಿಸುವ ಉದ್ದೇಶವಿಲ್ಲ.

**ಮಾನ್ಯ ಸಭಾಧ್ಯಕ್ಷರು** : ನನಗೆ ಸೂಚನೆ ನೀಡಲಾಗಿರುವ ತಿದ್ದುಪಡಿಗಳು ಇಷ್ಟೇ. ಈಗ ತಿದ್ದುಪಡಿಗಳೂ ಹಾಗೂ ಬಾಬು ಕುರಿತು ಚರ್ಚೆಯಾಗಬೇಕಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಮಂಡಿಸಿದ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ ಮತ್ತು ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿ ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಈಗಾಗಲೇ ಈ ಬಾಬಿನ ಅಗತ್ಯದ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಬಾಬು ೧ರ 'ರಕ್ಷಣೆ' ಎಂಬುದು ಸಾಕಷ್ಟು ಸಮಗ್ರವಾಗಿದೆ. ಅವರು ಹೇಳಿದಂತೆ ವ್ಯಾಜ್ಯ ಮತ್ತು ತೊಂದರೆ ತಲೆದೋರಬಹುದಾದುದರಿಂದ, ಎಲ್ಲ ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಬೇರೆ ಉಪಬಾಬುಗಳನ್ನು ಮಾಡಲಾಗಿದೆ. ಆದರೆ ಬಾಬಿನಲ್ಲಿರುವ 'ರಕ್ಷಣಾ ಉದ್ದಿಮೆಗಳು' ಎಂದರೆ ಏನು ಎಂಬುದು ಅಸ್ಪಷ್ಟವಾಗಿದೆ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ತಮ್ಮ ತಿದ್ದುಪಡಿಯ ಮೂಲಕ ಆ ಸ್ಥಿತಿಯನ್ನು ಸ್ಪಷ್ಟಗೊಳಿಸಲು ಯತ್ನಿಸಿದ್ದಾರೆ. ಒಕ್ಕೂಟ ಕಾನೂನಿನಲ್ಲಿ ಆ ಉದ್ದೇಶವನ್ನು ಪರಿಭಾಷಿಸಬೇಕು. ಒಕ್ಕೂಟ ಕಾನೂನಿನಲ್ಲಿ ಅದನ್ನು ಪರಿಭಾಷಿಸುವ ಪ್ರಯತ್ನಗಳು ನಡೆದಾಗ, ಆ ಉದ್ದೇಶದ ಪರಿಧಿಯಲ್ಲಿ ಸೇರುವ ಉದ್ದಿಮೆಗಳು ಯಾವುವು ಎಂಬ ಬಗ್ಗೆ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಈಗ ಮತ್ತಷ್ಟು ವಿವರಣೆ ನೀಡುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ನಾವು ಹಾಗೆ ಮಾಡ ಹೊರಟರೆ ಬಾಬಿನ ವ್ಯಾಪ್ತಿಯನ್ನು ಸಂಕುಚಿತಗೊಳಿಸಿದಂತಾಗುತ್ತದೆ. ೧ನೇ ತಿದ್ದುಪಡಿಯ ಮಂಡನೆಕಾರರು ನೀಡಿದ ಭರವಸೆ ವರದಿಯ ಮಂಡನೆಕಾರರಿಗೆ

ಬಂಧನಕಾರಿಯಲ್ಲದಿರುವುದರಿಂದ, ಸದನದ ನಾಯಕರ ಪರವಾಗಿ ವರದಿಯ ಮಂಡನೆಕಾರರು, ಶಾಸನ ರಚನೆ ಮಾಡುವಾಗ ರಕ್ಷಣೆಯ ಉದ್ದೇಶಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರುವುದಾಗಿ ಭರವಸೆ ನೀಡಿದರೆ ತೊಂದರೆ ಇರುವುದಿಲ್ಲ ಎಂದು ನನ್ನ ಅನಿಸಿಕೆ.

ಕೊನೆಯ ತಿದ್ದುಪಡಿಯ ಬಗ್ಗೆ ಹೇಳುವುದಾದರೆ, ಈ ತಿದ್ದುಪಡಿಯಿಂದ ಬಾಬಿನ ವ್ಯಾಪ್ತಿಗೆ ಅನುಚಿತ ಪ್ರತಿಬಂಧ ಉಂಟಾಗುತ್ತದೆ ಎನಿಸುತ್ತದೆ. ರಕ್ಷಣೆ ಎಂಬುದು ಅತ್ಯಂತ ಮಹತ್ತ್ವಪೂರ್ಣ ವಿಷಯವಾಗಿದ್ದು ರಕ್ಷಣೆಯ ತುರ್ತುಗಳಿಗಾಗಿ ವೈಯಕ್ತಿಕ ಹಾಗೂ ರಾಷ್ಟ್ರೀಯ ಅನುಕೂಲಗಳನ್ನೂ ಬದಿಗಿಡಬೇಕಾಗುತ್ತದೆ ಮತ್ತು ಆ ವಿಷಯದ ಬಗ್ಗೆ ವ್ಯವಹರಿಸಲು ಒಕ್ಕೂಟ ಶಾಸಕಾಂಗಕ್ಕೆ ಪೂರ್ಣ ಅಧಿಕಾರ ನೀಡಬೇಕಾಗುತ್ತದೆ. ಭಾರತದ ಸುರಕ್ಷತೆಗೆ ಸಂಗತವಾಗುವ ಮೆಚ್ಚಿಗೆ ಜನತೆಯ ಅನುಕೂಲತೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ಮೊದಲೇ ಹೇಳಿರುವಂತೆ ನಾನು ೧ನೇ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ, ೨ನೆಯದನ್ನು ವಿರೋಧಿಸುತ್ತೇನೆ.

**ಶ್ರೀ ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** : ಮಾನ್ಯ ಸಭಾಧ್ಯಕ್ಷರೆ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಮಂಡಿಸಿದ ತಿದ್ದುಪಡಿ ಅನಗತ್ಯವೆಂದು ತೋರುತ್ತದೆ. ರಕ್ಷಣಾ ಉದ್ದಿಮೆಗಳನ್ನು ಸೇರಿಸಬೇಕೆಂದು ಪ್ರಸ್ತಾವ ಸರಿಯಾಗಿದೆ. ಅಷ್ಟು ಸಾಕು, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯನ್ನು ಸ್ವೀಕರಿಸಿದರೆ ತೊಂದರೆ ಎದುರಾಗುತ್ತದೆ. ಪಟ್ಟಿಯಲ್ಲಿರುವ ಬಾಬುಗಳ ಬಗ್ಗೆ ಶಾಸಕಾಂಗವು ಕಾನೂನುಗಳನ್ನು ಮಾಡಬೇಕಾಗುತ್ತದೆ ಎಂಬುದನ್ನು ನಾವು ನೆನೆಪಿನಲ್ಲಿಟ್ಟುಕೊಂಡರೆ, ರಕ್ಷಣಾ ಉದ್ದೇಶಗಳಿಗಾಗಿ ಇರುವ ಉದ್ದಿಮೆಗಳೆಂದು ಒಕ್ಕೂಟ ಕಾನೂನು ಘೋಷಿಸಬೇಕೆಂದು ಈ ಬಾಬಿನಲ್ಲಿಯೇ ಸೇರಿಸಬೇಕಾದ ಅಗತ್ಯವಿರುವುದಿಲ್ಲ.

ರಕ್ಷಣಾ ಉದ್ದೇಶಗಳಿಗಾಗಿ ಇರುವ ಉದ್ದಿಮಗಳೆಂದು ಒಕ್ಕೂಟ ಕಾನೂನಿನಿಂದ ಘೋಷಿತವಾಗಿರಬೇಕೆಂದು ಈ ಬಾಬಿನಲ್ಲಿ ಸೇರಿಸಬೇಕಾದ ಅಗತ್ಯವಿಲ್ಲ. ಕೆಲವು ಬಾಬುಗಳನ್ನು ಪಟ್ಟಿಯಲ್ಲಿ ಸೇರಿಸಿರುವುದರಿಂದ, ಒಕ್ಕೂಟ ಶಾಸಕಾಂಗವು ಅವುಗಳ ಬಗ್ಗೆ ಶಾಸನ ರಚಿಸುವ ಹಕ್ಕು ಹೊಂದಿದೆ ಎಂದು ಅರ್ಥವೇ? ಪರಿಸ್ಥಿತಿ ಹೀಗಿರುವಾಗ ಈ ನಿರ್ದಿಷ್ಟ ಬಾಬಿನಲ್ಲಿ, ಕೆಲವು ಉದ್ದಿಮೆಗಳು ರಕ್ಷಣಾ ಉದ್ದೇಶಗಳಿಗಾಗಿ ಇರುವವುಗಳು ಎಂದು ಒಕ್ಕೂಟ ಕಾನೂನಿನಲ್ಲಿ ಘೋಷಿತವಾಗಿರಬೇಕೆಂದು ಸೂಚಿಸಬೇಕಾದ ಅಗತ್ಯವೇ ಇಲ್ಲ. ನಾವು ಈ ತಿದ್ದುಪಡಿಯನ್ನು ಸ್ವೀಕರಿಸಿದರೆ, ಈ ಬಾಬು ಹಾಗೂ ಇತರ ಬಾಬುಗಳಲ್ಲಿನ ಪದಪ್ರಯೋಗದ ಕಾರಣದಿಂದಾಗಿ, ಈ ಬಾಬು ಹಾಗೂ ಇತರ ಬಾಬುಗಳ ಸಂಬಂಧಿಸಿದಂತೆ ವೈದೃಶ್ಯ ಹಾಗೂ ವ್ಯತ್ಯಾಸಗಳುಂಟಾಗಿ ಹಲವಾರು ತೊಂದರೆಗಳು ಹುಟ್ಟಿಕೊಳ್ಳುತ್ತವೆ.

ಹಾಗೆಂದು "ಒಕ್ಕೂಟ ಕಾನೂನಿನಿಂದ ಘೋಷಿತವಾದ" ಎಂಬ ಖಂಡ ಅನಗತ್ಯ. ಈ ಬಾಬನ್ನು ಈಗಿರುವಂತೆ ಉಳಿಸಬಹುದು. ಕೆಲವು ಉದ್ದಿಮೆಗಳನ್ನು ಈ ಬಾಬಿನಲ್ಲಿ ನಿರ್ದಿಷ್ಟಪಡಿಸಬೇಕೆಂದು ನೀವು ಉದ್ದೇಶಿಸಿದರೆ, ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿಯವರ ತಿದ್ದುಪಡಿಯಲ್ಲಿನ ಕೆಲವು ಅಂಶಗಳನ್ನು ವಿಸ್ತೃತಗೊಳಿಸುವುದನ್ನು ನಾನು ಒಪ್ಪದಿದ್ದರೂ ಶಾಸಕಾಂಗವು ಕಾನೂನು ರಚಿಸಬೇಕಾದ ನಿರ್ದಿಷ್ಟ ನಿದರ್ಶನಗಳನ್ನು ನೀಡಿರುವ ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿಯವರ ತಿದ್ದುಪಡಿಯನ್ನೇ ಒಪ್ಪುತ್ತೇನೆ. ಮೂಲಬಾಬು ಇರುವ ಸ್ವರೂಪದಲ್ಲೇ ನಾನು ಅದನ್ನು ಎತ್ತಿ ಹಿಡಿಯುತ್ತೇನೆ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿ ಅನಗತ್ಯವಾಗಿದ್ದು, ಬೇರೆ ಬಾಬುಗಳಿಗೆ ಸಂಬಂಧಿಸಿದಂತೆ ತೊಂದರೆಗಳನ್ನುಂಟುಮಾಡುತ್ತದೆ. ಶಾಸಕಾಂಗವು ಕಾನೂನುಗಳನ್ನು ಮಾಡಲು ಕೆಲವು ಬಾಬುಗಳನ್ನು ಸದನವು ನಿರ್ದಿಷ್ಟಪಡಿಸುವುದಾದರೆ ಎಲ್ಲ ಬಾಬುಗಳನ್ನು ಪರಿಗಣಿಸುವುದು ಉತ್ತಮ. ಆದ್ದರಿಂದ ನಾನು ಎರಡು ತಿದ್ದುಪಡಿಗಳನ್ನು ವಿರೋಧಿಸುತ್ತಾ ಮೂಲ ನಿಲುವಳಿಯಲ್ಲಿ ಇರುವಂತೆ ಈ ಬಾಬನ್ನು ಅದು ಇರುವ ಸ್ವರೂಪದಲ್ಲಿ ಬೆಂಬಲಿಸುತ್ತೇನೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಭಾರತ ಸರ್ಕಾರದ ಅಧಿನಿಯಮ ಹಾಗೂ ಈಗಿರುವ ವರದಿ– ಎರಡರಲ್ಲೂ ಹಲವಾರು ಬಾಬುಗಳಲ್ಲಿ "ಒಕ್ಕೂಟ ಕಾನೂನಿನ ಮೂಲಕ ಘೋಷಿಸಲಾದ" ಎಂಬ ಪದಗಳನ್ನು

ನೋಡುತ್ತೀರಿ. ಅಂಥ ಘೋಷಣೆಯಿಂದಾಗಿ ಆ ಬಾಬು ಆ ಪಟ್ಟಿಯಲ್ಲಿ ಸೇರಿದೆ. "ರಕ್ಷಣೆ ಅಥವಾ ಯುದ್ಧ ನಡೆಸುವ ಉದ್ದೇಶಕ್ಕಾಗಿ ಅಗತ್ಯವಾದುದೆಂದು ಒಕ್ಕೂಟ ಕಾನೂನಿನಿಂದ ಘೋಷಿತವಾದ" ಎಂಬ ಖಂಡದ ಉದ್ದೇಶ ಅದೇ ಆಗಿದೆ.

**ಶ್ರೀ ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್ :** ಅದು ಅಲ್ಲಿ ಸೇರ್ಪಡೆಯನ್ನು ಸಮರ್ಥಿಸುವುದಿಲ್ಲ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ವಿಷಯಗಳ ಸಾಮಾನ್ಯ ಗತಿಯಲ್ಲಿಯಾದರೆ, ಬಾಬನ್ನು ಅದು ಇರುವ ಸ್ವರೂಪದಲ್ಲಿ ಬೆಂಬಲಿಸಿರುವುದಕ್ಕೆ ನಾನು ಮೆಹಬೂಬ್ ಅಲಿ ಬೇಗ್ ಅವರಿಗೆ ಆಭಾರಿಯಾಗಿರುತ್ತಿದ್ದೆ. ಆದರೆ ಒಕ್ಕೂಟ ಶಾಸಕಾಂಗಕ್ಕೆ ಇರಬೇಕಾದ ಅಧಿಕಾರದ ಬಗ್ಗೆ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯಲ್ಲಿ ಮೂಲಬಾಬಿನಲ್ಲಿರುವುದಕ್ಕಿಂತ ಉತ್ತಮ ವಿವರಣೆ ಇರುವುದರಿಂದ ನಾನು ಆ ವಿಚಾರದಿಂದ ಪ್ರಭಾವಿತನಾಗಿದ್ದೇನೆ. ಅದಕ್ಕೆ ಕಾರಣವನ್ನೂ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರೇ ನೀಡಿದ್ದಾರೆ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ತಿದ್ದುಪಡಿಯಲ್ಲಿ ಪ್ರಸ್ತಾವಿಸಿದ ಹೊಸ ವಿವರಣೆಯತ್ತ ನಾನು ಸದನದ ಗಮನ ಸೆಳೆಯುತ್ತಿದ್ದೇನೆ. ಉದ್ದಿಮೆಗಳು ಪ್ರಾಥಮಿಕವಾಗಿ ಪ್ರಾಂತ್ಯಗಳಿಗೆ ವಹಿಸಲಾದ ವಿಷಯ. ಒಕ್ಕೂಟ ಶಾಸಕಾಂಗಕ್ಕೆ ಆ ವಿಷಯದ ಒಂದು ಭಾಗದ ಬಗ್ಗೆ ಕಾನೂನು ರಚಿಸಲು ಅಧಿಕಾರ ಬೇಕೆಂದು ಆ ವಿಷಯದಿಂದ ಒಂದು ಭಾಗವನ್ನು ಬೇರ್ಪಡಿಸಿದರೂ ಆ ಪ್ರತ್ಯೇಕಿಸಿದ ಭಾಗದ ಬಗ್ಗೆ ಸರಿಯಾಗಿ ಪರಿಭಾಷಿಸಬೇಕು. ಪ್ರಾಂತ್ಯಗಳ ಅಧಿಕಾರವ್ಯಾಪ್ತಿಯಿಂದ ತೆಗೆದು ಕೇಂದ್ರದ ಅಧಿಕಾರವ್ಯಾಪ್ತಿಯಲ್ಲಿರಿಸುವ ಉದ್ದಿಮೆಗಳ ಸಂಬಂಧದಲ್ಲಿ ಮಾತ್ರ ಅಂಥ ಅಧಿಕಾರವಿರಬೇಕು. ಮೂಲದಲ್ಲಿರುವಂತೆ ನಾವು ಬಾಬನ್ನು ಒಪ್ಪಿದ್ದರೆ ಒಂದು ನಿರ್ದಿಷ್ಟ ಉದ್ದಿಮೆ ರಕ್ಷಣಾ ಉದ್ದಿಮೆ ಹೌದೇ ಅಥವಾ ಅಲ್ಲವೇ ಎಂಬುದನ್ನು ಹೇಳುವ ಅಧಿಕಾರವ್ಯಾಪ್ತಿಯನ್ನು ನ್ಯಾಯಾಲಯಗಳು ಪಡೆದಿರುತ್ತಿದ್ದವು. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ತಮ್ಮ ತಿದ್ದುಪಡಿಯನ್ನು ಭಾಷಿಕವಾಗಿ ಬದಲಾಯಿಸಿರುವ ಮೇರೆಗೆ ನಾವು ಸ್ವೀಕರಿಸಿದರೆ ಮೊದಲು ಒಕ್ಕೂಟ ಶಾಸಕಾಂಗವು, ರಕ್ಷಣಾ ಉದ್ದೇಶಗಳಿಗಾಗಿ ಒಂದು ನಿರ್ದಿಷ್ಟ ಉದ್ದಿಮೆಯನ್ನು ಒಕ್ಕೂಟದ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಅಗತ್ಯವೇ ಎಂಬುದನ್ನು ನಿರ್ಧರಿಸಬೇಕು, ಶಾಸಕಾಂಗವು ಆ ನಿರ್ಧಾರ ಕೈಗೊಂಡ ಮೇಲೆ ನ್ಯಾಯಾಲಯಗಳು, ರಕ್ಷಣಾ ಉದ್ದೇಶಗಳಿಗಾಗಿ ಉದ್ದಿಮೆ ಅಗತ್ಯವಿಲ್ಲ ಎಂದು ಹೇಳಲು ಮಧ್ಯೆ ಪ್ರವೇಶಿಸಬೇಕಾಗುವುದಿಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ಅಂಗೀಕರಿಸಲು ನಿರ್ಧರಿಸಲಾಗಿದೆ.

ನನ್ನ ಗೌರವಾನ್ವಿತ ಮಿತ್ರ ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿಯವರು ಮಂಡಿಸಿದ ತಿದ್ದುಪಡಿ ಬಗ್ಗೆ ಹೇಳುವುದಾದರೆ, ಆ ವಿಷಯದ ಬಗ್ಗೆ ಈಗಾಗಲೇ ಶ್ರೀ ನಜಿರುದ್ದೀನ್ ಅಹ್ಮದ್ ಉಲ್ಲೇಖಿಸಿದ್ದಾರೆ. ರಕ್ಷಣಾ ಉದ್ದಿಮೆಗಳನ್ನು ಫಿರಂಗಿ, ಬಂದೂಕು, ಅಣುಬಾಂಬ್ ಹಾಗೂ ಯುದ್ಧಸಾಮಗ್ರಿಗಳ ಉತ್ಪಾದನೆಗೆ ಸೀಮಿತಗೊಳಿಸಲಾಗದು. ಶಾಂತಿಯ ಕಾಲದಲ್ಲೂ ಒಕ್ಕೂಟವು ಆ ವಸ್ತುಗಳಿಗೆ ಸಂಬಂಧಪಡದ ಹಲವು ಉದ್ದಿಮೆಗಳ ಮೇಲೆ ಅಧಿಕಾರವ್ಯಾಪ್ತಿ ಚಲಾಯಿಸಬಹುದು. ಸಶಸ್ತ್ರ ದಳಗಳ ಆಹಾರ, ಬಟ್ಟೆ ಅಥವಾ ಇತರ ಸಜ್ಜೀಕರಣದ ಉದ್ದೇಶಕ್ಕಾಗಿ ಕೆಲವು ಉದ್ದಿಮೆಗಳನ್ನು ಅವು ಒಕ್ಕೂಟದ ಒಡೆತನ ಅಥವಾ ನಿಯಂತ್ರಣದಲ್ಲಿ ಇರಲಿ ಅಥವಾ ಇಲ್ಲದಿರಲಿ–ಅವುಗಳನ್ನು ಒಕ್ಕೂಟದ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಅಗತ್ಯವಾದರೆ ಒಕ್ಕೂಟ ಶಾಸಕಾಂಗವು ವರ್ತಿಸಬೇಕಾದ ರೀತಿಯ ಬಗ್ಗೆ ಸೂಚಿಸಲಾದ ರೀತಿಯಲ್ಲಿ ಅದು ವರ್ತಿಸುವುದಕ್ಕೆ ಯಾವುದೇ ಅಡ್ಡಿ ಇರಬಾರದು. ಆದ್ದರಿಂದ ನಾನು ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿಯವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ ಮತ್ತು ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯನ್ನು ಒಪ್ಪುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಮೊದಲು ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"೬ನೇ ಬಾಬಿಗೆ ಮುಂದಿನದನ್ನು ಬದಲಿಯಾಗಿ ಸೇರಿಸಬೇಕು :

'ರಕ್ಷಣೆ ಅಥವಾ ಯುದ್ಧ ನಡೆಸುವ ಉದ್ದೇಶಕ್ಕಾಗಿ ಅಗತ್ಯವೆಂದು ಒಕ್ಕೂಟ ಕಾನೂನಿನಿಂದ ಘೋಷಿಸಲಾದ ಉದ್ದಿಮೆಗಳು.'"

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ಮಾನ್ಯರೆ, ನಿರ್ಣಯವನ್ನು ಮುಂದೂಡುವುದೇ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯ ಉದ್ದೇಶವಾಗಿದೆ, ಎಂದು ನಾನು ಭಾವಿಸುತ್ತೇನೆ ಮತ್ತು ನನ್ನ ತಿದ್ದುಪಡಿಯನ್ನು ಹಿಂಪಡೆಯಲು ನನ್ನ ಆಕ್ಷೇಪವಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿ ಮೂಲಬಾಬಿನ ಸ್ಥಾನವನ್ನು ಪಡೆಯುತ್ತದೆ. ನಾನು ಅದನ್ನು ಸದನದ ಮುಂದಿರಿಸುತ್ತೇನೆ.

ಮುಂದಿಟ್ಟಿರುವ ವಿಷಯ :

"ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರಿಂದ ಮೂಲಬಾಬು ತಿದ್ದುಪಡಿಯಾಗಿದ್ದು, ಆ ತಿದ್ದುಪಡಿಯನ್ನು ಅಂಗೀಕರಿಸಬೇಕು."

೬ನೇ ಬಾಬನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ಬಾಬು ೭

**ಮಾನ್ಯ ಸಭಾಧ್ಯಕ್ಷರು :** ೭ನೇ ಬಾಬಿಗೆ ಒಂದೇ ತಿದ್ದುಪಡಿ ಇದೆ. ಅದು ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿ ಅವರಿಂದ ಪಟ್ಟಿ ೬ರಲ್ಲಿ ಸಂ.೪.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲು ಅನುಮತಿ ಕೇಳುವ ತಿದ್ದುಪಡಿ ಮುಂದಿನಂತಿದೆ:

"೭ನೇ ಬಾಬಿನಲ್ಲಿ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸಬೇಕು:

'ಒಕ್ಕೂಟ ರಾಜ್ಯಕ್ಕೆ ಸೇರಿದ ಕಾಮಗಾರಿಗಳಲ್ಲದ ಬೇರೆ.'"

ಈಗಿರುವಂತೆ ಬಾಬಿನಲ್ಲಿ "ನೌಕಾ, ಭೂ ಮತ್ತು ವಾಯುದಳ ಕಾಮಗಾರಿಗಳು" ಎಂದಿದೆ. ಮಾನ್ಯರೆ, ನನಗೆ ತಿಳಿದಿರುವಂತೆ ಕೆಲವು ಒಕ್ಕೂಟ ರಾಜ್ಯಗಳು ಸ್ವಂತವೆಚ್ಚದಲ್ಲಿ ಭೂ ಮತ್ತು ವಾಯುದಳ ಕಾಮಗಾರಿಗಳನ್ನು ರಚಿಸಿಕೊಂಡಿವೆ. ಒಕ್ಕೂಟಕ್ಕೆ ಇವುಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಉದ್ದೇಶವಿಲ್ಲವೆಂದು ತೋರುತ್ತದೆ. ಆದ್ದರಿಂದ ಈ ಅಂಶ ಕುರಿತಾದ ಯಾವುದೇ ಆಶ್ವಾಸನೆಗೆ ಒಳಪಟ್ಟು ಸಂಕ್ಷಿಪ್ತವಾಗಿ ಹೇಳಿ ನಾನು ವರದಿ ತಯಾರಕರ ಅಭಿಪ್ರಾಯಕ್ಕಾಗಿ ಕಾಯುತ್ತೇನೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಹಿಮ್ಮತ್ ಸಿಂಗ್ ಅವರ ಅಭಿಪ್ರಾಯಕ್ಕೆ ನನ್ನ ಪ್ರತಿಕ್ರಿಯೆ ಏನೆಂದರೆ ಪಟ್ಟಿಯಲ್ಲಿ ಈ ಬಾಬು ಪ್ರಸ್ತುತ ಇರುವಂತೆ ಒಕ್ಕೂಟಕ್ಕೆ, ರಾಜ್ಯಗಳು ತಾವು ನಿರ್ಮಿಸಿದ ಕಾಮಗಾರಿಗಳ ಮೇಲೆ ಹೊಂದಿರುವ ಆಸ್ತಿ ಹಕ್ಕನ್ನು ಕಿತ್ತುಕೊಳ್ಳುವ ಉದ್ದೇಶವಿಲ್ಲ. ಆದರೆ ದೇಶದ ಒಟ್ಟಾರೆ ರಕ್ಷಣೆಯ ದೃಷ್ಟಿಯಿಂದ ಒಕ್ಕೂಟವು ಭಾರತೀಯ ರಾಜ್ಯಗಳ ಕಾಮಗಾರಿಗಳನ್ನು ತಾನು ವಹಿಸಿಕೊಳ್ಳಬೇಕೆಂದು ಅಥವಾ ಅದರ ಒಡೆತನವನ್ನು ಹೊಂದಬೇಕೆಂದು ಅಥವಾ ಅದನ್ನು ನಿಯಂತ್ರಿಸಬೇಕೆಂದು ನಿರ್ಧರಿಸಿದರೆ ಹಾಗೆ ಮಾಡಲು ಅವಕಾಶವಿರುತ್ತದೆ. ದೇಶದ ಒಟ್ಟಾರೆ ರಕ್ಷಣೆಯ ದೃಷ್ಟಿಯಿಂದ ತಾನು ಯಾವ ಭೂ, ನೌಕಾ, ವಾಯುದಳಗಳ ಕಾಮಗಾರಿಗಳ ಒಡೆತನವನ್ನು ಹೊಂದಬೇಕು, ಯಾವುದನ್ನು ನಿಯಂತ್ರಿಸಬೇಕು ಮತ್ತು ಯಾವುದನ್ನು ಭಾರತೀಯ ರಾಜ್ಯಗಳಿಗೆ ಬಿಡಬೇಕು

ಎಂಬುದನ್ನು ನಿರ್ಧರಿಸುವ ಹಕ್ಕು ಒಕ್ಕೂಟಕ್ಕೆ ಇದ್ದು ಅದನ್ನು ಶ್ರೀ ಹಿಮ್ಮತ್ ಸಿಂಗ್ ಪ್ರಶ್ನಿಸಲಾಗದು ಎಂದು ನನ್ನ ಭಾವನೆ. ಅದು, ಆ ಕುರಿತು ಮಾಡುವ ಕಾನೂನಿಗೆ ಸೇರುವ ವಿಷಯ. ಆದರೆ ಒಕ್ಕೂಟಕ್ಕೆ ಖಂಡಿತವಾಗಿಯೂ ಆ ಅಧಿಕಾರವಿರುತ್ತದೆ.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ವಿವರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ತಿದ್ದುಪಡಿಯನ್ನು ಹಿಂಪಡೆಯುತ್ತೇನೆ.

(ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.)

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"೭ನೇ ಬಾಬನ್ನು ಅಂಗೀಕರಿಸಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಬಾಬು ೮

**ಶ್ರೀ ಆರ್. ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಅನುಬಂಧದಲ್ಲಿರುವ ೧ನೇ ಪಟ್ಟಿಯ ೮ನೇ ಬಾಬಿನ ಪಾಠ ಮುಂದಿನಂತಿದೆ. "ದಂಡುಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಆಡಳಿತ, ಅಂಥ ಪ್ರದೇಶಗಳಲ್ಲಿ ದಂಡುಪ್ರದೇಶ ಪ್ರಾಧಿಕಾರಗಳ ರಚನೆ ಮತ್ತು ಅವುಗಳ ಅಧಿಕಾರ, ಅಂಥ ಪ್ರದೇಶಗಳಲ್ಲಿನ ವಸತಿ ಸೌಕರ್ಯದ ನಿಬಂಧನೆ ಮತ್ತು ಅಂಥ ಪ್ರದೇಶಗಳ ಸೀಮಾನಿರ್ಣಯ." ನೀವು ೧೯೩೫ರ ಭಾರತ ಸರ್ಕಾರ ಅಧಿನಿಯಮವನ್ನು (ಬಾಬು ೨ ಪುಟ ೨೯೯) ನೋಡಿದರೆ, ನಾನು ಈಗ ಸದನದ ಮುಂದೆ ಓದಿದಂತೆಯೇ ಅಲ್ಲಿನ ಪಾಠವಿದೆ. ಅದು ಮುಂದಿನಂತಿದೆ: "ದಂಡುಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಸರ್ಕಾರ–ಭಾರತೀಯ ರಾಜ್ಯಗಳ ದಂಡುಪ್ರದೇಶಗಳಲ್ಲದಿರುವುದರಿಂದ ಅಂಥ ಪ್ರದೇಶಗಳಲ್ಲಿನ ವಸತಿ ಸೌಕರ್ಯದ ನಿಬಂಧನೆ. . . .ಇತ್ಯಾದಿ". ಈ ಪಟ್ಟಿಯಲ್ಲಿರುವ ಪಾಠವು ಭಾರತ ಸರ್ಕಾರ ಅಧಿನಿಯಮದಲ್ಲಿರುವ ಪಾಠದೊಂದಿಗೆ ಬಹುಪಾಲು ತಾಳೆಯಾಗುತ್ತದೆ. ನನ್ನ ತಿದ್ದುಪಡಿ ಮುಂದಿನಂತಿದೆ:

> "೮ನೇ ಬಾಬಿನಲ್ಲಿರುವ 'ದಂಡುಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಸರ್ಕಾರ, ಅಂಥ ಪ್ರದೇಶಗಳಲ್ಲಿ ದಂಡು ಪ್ರಾಧಿಕಾರಗಳ ರಚನೆ ಮತ್ತು ಅಧಿಕಾರಗಳು' ಎಂಬ ಪದಗಳಿಗೆ ಈ ಮುಂದಿನದನ್ನು ಬದಲಿಯಾಗಿ ಸೇರಿಸಬೇಕು:
>
> 'ಆಯುಧಗಳು, ಯುದ್ಧಸಾಮಗ್ರಿ ಮುಂತಾದವುಗಳನ್ನು ಉತ್ಪಾದಿಸುವ ಕಾರ್ಖಾನೆಗಳಿಗಾಗಿ ಭೂದಳಗಳು ಅರ್ಜಿಸಿರುವ ಪ್ರದೇಶದ ನಿಯಂತ್ರಣ'."

ನಾನು ಮಂಡಿಸಿರುವ ತಿದ್ದುಪಡಿಯಿಂದ, ಸ್ಥಳೀಯ ಸ್ವಯಂ ಸರ್ಕಾರ ಮತ್ತು ದಂಡುಪ್ರದೇಶದ ನಡುವೆ ನಾನು ವ್ಯತ್ಯಾಸ ಕಲ್ಪಿಸುತ್ತಿರುವುದು ಗೋಚರವಾಗುತ್ತದೆ. ಕಳೆದ ಎರಡು ದಶಕಗಳಿಂದ ಇದು ವಾದಗ್ರಸ್ತ ವಿಷಯವಾಗಿದ್ದು, ಪ್ರಾಂತೀಯ ಹಾಗೂ ಕೇಂದ್ರ ಸರ್ಕಾರಗಳೆರಡರಲ್ಲೂ ಭಾರತದ ಪ್ರಾಧಿಕಾರಗಳ ಅದರಲ್ಲೂ ವಿಶೇಷವಾಗಿ ಸ್ಥಳೀಯ ಪ್ರಾಧಿಕಾರಗಳ ಮತ್ತು ದಂಡುಪ್ರದೇಶಗಳ ಪ್ರಾಧಿಕಾರಗಳ ಗಮನ ಸೆಳೆಯುತ್ತ ಬಂದಿದೆ. ಯುದ್ಧಕ್ಕೆ ಸ್ವಲ್ಪ ಮುಂಚೆ ಭಾರತ ಸರ್ಕಾರವು ಎರಡು ದಶಕಗಳಿಗಿಂತಲೂ ಹೆಚ್ಚಿನ ಕಾಲದಿಂದ ಬಾಕಿ ಉಳಿದಿರುವ ಈ ವಾದಗ್ರಸ್ತ ವಿಷಯಕ್ಕೆ ಪರಿಹಾರ ಕಂಡುಹಿಡಿಯಲು ಮಧ್ಯೆ ಪ್ರವೇಶ ಮಾಡಬೇಕಾಯಿತು. ಯುದ್ಧ ಆರಂಭವಾಯಿತು, ವಿಷಯ ಸ್ತಬ್ಧವಾಯಿತು. ದಂಡುಪ್ರದೇಶಗಳಿಗೆ ಭೇಟಿ ನೀಡಿ ವಿಷಯವನ್ನು ಅಭ್ಯಸಿಸಿದವರು ಈ ವಾದಗ್ರಸ್ತ ವಿಷಯವನ್ನು ಸುಲಭವಾಗಿ ಗ್ರಹಿಸಬಲ್ಲರು. ಸ್ವಲ್ಪ ಸಮಯ ತಾಳ್ಮೆ ವಹಿಸಿ ಈ ಬಾಬಿಗೆ ಸಂಬಂಧಿಸಿದ ಸೂಕ್ಷ್ಮಪ್ರಶ್ನೆಯನ್ನು ಅರ್ಥಮಾಡಿಕೊಳ್ಳಬೇಕೆಂದು ಸದನಕ್ಕೆ ಸೂಚಿಸುತ್ತೇನೆ.

ಭಾರತದಲ್ಲಿ ಹಲವಾರು ದಂಡುಪ್ರದೇಶಗಳಿದ್ದು ಅಲ್ಲಿ ಸೇನಾತಂಡಗಳನ್ನು ಇರಿಸಲಾಗಿದೆ. ಆ ದಂಡುಪ್ರದೇಶದಲ್ಲಿ ಮತ್ತು ಸೇನಾತಂಡಗಳಿರುವ ಪ್ರದೇಶಗಳಲ್ಲಿ ಬೇರೆ ಸಾಮಾನ್ಯ ಜನತೆ ಇದೆ. ಅವರಿಗೆ ದಂಡುಪ್ರದೇಶ ಅಧಿನಿಯಮ ಅನ್ವಯವಾಗುತ್ತದೆ. ದಂಡುಪ್ರದೇಶ ಪ್ರಾಧಿಕಾರವು ಸೇನಾತಂಡಗಳಿರುವ ಪ್ರದೇಶದಲ್ಲಿ ನೈರ್ಮಲ್ಯವನ್ನು ಕಾಪಾಡುತ್ತದೆ ಮತ್ತು ಎಲ್ಲ ಸೌಲಭ್ಯಗಳನ್ನು ಕಲ್ಪಿಸುತ್ತದೆ. ಈ ಸೇನಾತಂಡಗಳಿರುವ ಪ್ರದೇಶದಿಂದ ಒಂದೂವರೆ ಮೈಲಿ ಅಂತರದಲ್ಲಿರುವ, ಸಾಮಾನ್ಯ ಜನತೆ ವಾಸಿಸುವ ಪ್ರದೇಶದಲ್ಲಿ ಈ ಸೌಕರ್ಯಗಳಿಲ್ಲ. ಕುಡಿಯುವ ನೀರಿನ ಕೊರತೆ ಇದೆ. ಚರಂಡಿವ್ಯವಸ್ಥೆ ದೋಷಯುಕ್ತವಾಗಿದೆ. ಆಸ್ಪತ್ರೆಗಳಿಲ್ಲ, ಬಾವಿಗಳಿಲ್ಲ. ಇನ್ನು ಕೆಲ ಸ್ಥಳಗಳಲ್ಲಿ ಇಂಥ ಪ್ರದೇಶವು ಒಂದರಿಂದ ಎಂಟೊಂಬತ್ತು ಮೈಲಿಗಳವರೆಗೆ ಹರಡಿದ್ದು, ಪರಿಮಿತಿಗಳು ಹೀಗಿವೆ ಎಂದರೆ ಕೆಲವು ಕಡೆ ಆ ಪ್ರದೇಶ ಸ್ಥಳೀಯ ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಎಂದರೆ ಪ್ರಾಂತೀಯ ಸರ್ಕಾರದ ಪ್ರದೇಶದೊಳಗೆ ಬರುತ್ತದೆ. ದಂಡುಪ್ರದೇಶವು ರಸ್ತೆಯಾಚೆ ಕೇವಲ ೨೫ ಯಾರ್ಡ್ ಅಂತರದಲ್ಲಿರುತ್ತದೆ.

ಸ್ಥಳೀಯ ಪ್ರಾಧಿಕಾರಗಳು, ಕೇಂದ್ರ ಪ್ರಾಧಿಕಾರಗಳು ಹಾಗೂ ಪ್ರಾಂತೀಯ ಪ್ರಾಧಿಕಾರಗಳ ನಡುವೆ ಈ ತಾಕಲಾಟ ಅನೇಕ ಬಾರಿ ಉದ್ಭವಿಸುತ್ತಲೇ ಬಂದಿದೆ. ಏಕೆಂದರೆ ದಂಡುಪ್ರದೇಶದಾಚೆ ಇರುವ ಸಾಮಾನ್ಯ ಜನತೆಗಿರುವ ಹಕ್ಕು ಸವಲತ್ತುಗಳು ದಂಡುಪ್ರದೇಶದಲ್ಲಿರುವ ಸಾಮಾನ್ಯ ಜನತೆಗೆ ಸಿಗುವುದಿಲ್ಲ. ಏಕೆಂದರೆ ನನಗೆ ತಿಳಿದುಬಂದಿರುವ ಮಟ್ಟಿಗೆ ದಂಡುಪ್ರದೇಶಗಳಿಗೆ ದಂಡುಪ್ರದೇಶ ಅಧಿನಿಯಮ ಅನ್ವಯವಾಗುತ್ತದೆ. ಈ ಅಧಿನಿಯಮದಡಿ, ದಂಡುಪ್ರದೇಶದ ವ್ಯವಹಾರಗಳನ್ನು ನೋಡಿಕೊಳ್ಳಲು ಭೂಸೇನಾ ಪ್ರಾಧಿಕಾರಗಳಿಂದ ಸೀಮಿತ ಸಂಖ್ಯೆಯ ಜನ ಹಾಗೂ ಉಳಿದ ಜನತೆಯ ಪೈಕಿಯಿಂದ ಸ್ವಲ್ಪ ಜನ ನಾಮನಿರ್ದೇಶಿತರಾಗಿರುತ್ತಾರೆ. ಕೆಲವು ಭೂಮಾಲೀಕರು ಮತ್ತು ಅಂಥವರೇ ಇನ್ನು ಕೆಲವರು ಅಲ್ಲಿರಬಹುದು. ಉಳಿದೆಲ್ಲ ಸ್ಥಾನಗಳಲ್ಲಿ ಮಿಲಿಟರಿ ಅಧಿಕಾರಿಗಳಿರುತ್ತಾರೆ. ಆದ್ದರಿಂದ ದಂಡುಪ್ರದೇಶದಲ್ಲಿರುವ ಸಾಮಾನ್ಯ ಜನತೆಗೆ ಲಭಿಸದಿರುವ ಹಕ್ಕು ಹಾಗೂ ಸವಲತ್ತುಗಳು ಗಡಿಯಾಚೆ ಕೇವಲ ೨೫ ಯಾರ್ಡ್ ಅಂತರದಲ್ಲಿರುವವರಿಗೆ ತಮ್ಮ ಸ್ಥಳೀಯ ನಿಕಾಯಗಳು ಹಾಗೂ ಮುನಿಸಿಪಾಲಿಟಿಗಳಲ್ಲಿ ಲಭಿಸುತ್ತವೆ.

**ಶ್ರೀ ಎಂ.ಎಸ್. ಅಣೆ :** ಗೌರವಾನ್ವಿತ ಸದಸ್ಯರಿಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

**ಶ್ರೀ ಆರ್.ಕೆ. ಸಿಧ್ವಾ :** ಮಾನ್ಯರೆ, ನನಗೆ ಹೆಚ್ಚು ಸಮಯ ಬೇಕು. ಏಕೆಂದರೆ ಈ ವಿಷಯ ಕೇವಲ ನನ್ನ ಅಭಿಪ್ರಾಯವಲ್ಲ. ಈ ಬಗ್ಗೆ ವರ್ಷ ವರ್ಷವೂ, ತಿಂಗಳು ತಿಂಗಳೂ ಅಖಿಲ ಭಾರತ ಸ್ಥಳೀಯ ಪ್ರಾಧಿಕಾರಗಳು ಸಂಘವು. . . .

**ಮಾನ್ಯ ಸಭಾಧ್ಯಕ್ಷರು :** ಸಂದರ್ಭ ಹಾಗಿರುವುದಾದರೆ ನಾವು ಚರ್ಚೆಯನ್ನು ನಾಳೆಗೆ ಮುಂದುವರಿಸೋಣ. ನಿಮಗೆ ಇಷ್ಟವಿದ್ದರೆ ನಿಮ್ಮ ಭಾಷಣವನ್ನು ನೀವು ನಾಳೆ ಮುಂದುವರಿಸಬಹುದು (ಕೆಲವು ಗೌರವಾನ್ವಿತ ಸದಸ್ಯರು: ನಾಳೆಯಲ್ಲ, ಸೋಮವಾರ) ಹೌದು ಸೋಮವಾರ. ಸದನವನ್ನು ಸೋಮವಾರ ಬೆಳಗ್ಗೆ ೧೦ ಗಂಟೆಯವರೆಗೆ ಮುಂದೂಡಲಾಗಿದೆ.

ಸದನವನ್ನು ೧೯೪೭ರ ಆಗಸ್ಟ್ ೨೫ನೇ ದಿನಾಂಕ ಸೋಮವಾರ ಬೆಳಗ್ಗೆ ೧೦ ಗಂಟೆಯವರೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*